ಸಂಪುಟ: 05 ಸಂಚಿಕೆ: 147 ಪುಟಗಳು: 08 ಶನಿವಾರ 09 ಆಗಸ್ಟ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
RNI No. KARKAN/2021/80833
ಸಂಪಾದಕರು: ಟಿ. ಹೊಂಬೇಗೌಡ 9448225696 +91 8035841833 ₹5

# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಧರ್ಮಸ್ಥಳ ಪ್ರಕರಣ: ನ್ಯಾಯಾಲಯಕ್ಕೆ ಹೋಗಲು ಸುಪ್ರೀಂ ಕೋರ್ಟ್ ಸೂಚನೆ

• ಉದಯವಾಹಿನಿ,ನವದೆಹಲಿ

ಧರ್ಮಸ್ಥಳ ಪ್ರಕರಣದ ವರದಿಗಾರಿಕೆ ನಿಷೇಧಕ್ಕೆ ಸಂಬಂಧಿಸಿ ವಿಚಾರಣಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ಸೂಚಿಸಿದೆ. ದೇವಾಲಯವನ್ನು ನಿರ್ವಹಿಸುತ್ತಿರುವ ಕುಟುಂಬವನ್ನು ಗುರಿಯಾಗಿಸಿಕೊಂಡು ಪ್ರಕಟಿಸಿರುವ ಮಾನಹಾನಿಕರ ವಿಷಯಗಳನ್ನು ತೆಗೆದು ಹಾಕಲು ನಿರ್ದೇಶನ ನೀಡಬೇಕೆಂದು ಕೋರಿ ಧರ್ಮಸ್ಥಳ ದೇವಾಲಯದ ಕಾರ್ಯದರ್ಶಿ ಡಿ. ಹರ್ಷೇಂದ್ರ ಕುಮಾರ್ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ರಾಜೇಶ್ ಬಿಂದಾಲ್ ಮತ್ತು ಮನಮೋಹನ್ ಅವರ ಪೀಠವು ಅರ್ಜಿಯನ್ನು ಹೊಸದಾಗಿ ಪರಿಗಣಿಸುವಂತೆ ವಿಚಾರಣಾಧೀನ ನ್ಯಾಯಾಲಯಕ್ಕೆ ನಿರ್ದೇಶನ ನೀಡಿತು. ಮಾಧ್ಯಮಗಳಿಗೆ ನಿರ್ಬಂಧ ವಿಧಿಸಬೇಕು ಎಂದು ಕೋರಿರುವುದಕ್ಕೆ ಪೀಠವು ಅಸಮಾಧಾನ ವ್ಯಕ್ತಪಡಿಸಿತು. ಅತ್ಯಂತ ಅಪರೂಪದ ಪ್ರಕರಣಗಳಲ್ಲಿ ಮಾತ್ರ ಮಾಧ್ಯಮ ನಿರ್ಬಂಧ ಆದೇಶಗಳನ್ನು ನೀಡಲಾಗಿದೆ ಎಂದು ಅಭಿಪ್ರಾಯಪಟ್ಟಿತು. ಎಲ್ಲಾ ದಾಖಲೆಗಳನ್ನು ವಿಚಾರಣಾಧೀನ ನ್ಯಾಯಾಲಯಕ್ಕೆ ಸಲ್ಲಿಸುವಂತೆ ಅರ್ಜಿದಾರರಿಗೆ ಪೀಠ ಸೂಚಿಸಿತು.

## ಕಿರುಕುಳ ನೀಡಲು ಸುಧಾಕರ್ ಮೇಲೆ ಕೇಸು: ಅಶೋಕ ಟೀಕೆ

• ಉದಯವಾಹಿನಿ, ಬೆಂಗಳೂರು

ವಿರೋಧಪಕ್ಷದ ನಾಯಕರಿಗೆ ಕಿರುಕುಳ ನೀಡಲು ಸರ್ಕಾರ ಪೊಲೀಸರನ್ನು ಬಳಸುತ್ತಿದೆ. ಚಾಲಕ ಬಾಬು ಆತ್ಮಹತ್ಯೆ ಪ್ರಕರಣದಲ್ಲಿ ಸಂಸದ ಡಾ.ಕೆ.ಸುಧಾಕರ್ ಪಾತ್ರ ಇಲ್ಲದಿದ್ದರೂ ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದರು. ಆತ್ಮಹತ್ಯೆ ಮಾಡಿಕೊಂಡ ಚಾಲಕ ಬಾಬು ಜತೆ ಸುಧಾಕರ್ ಅವರಿಗೆ ಆಪ್ತ ಸಂಬಂಧವೇನೂ ಇಲ್ಲ. ಈ ಪ್ರಕರಣದಲ್ಲಿ ಜಾತಿನಿಂದನೆ ಆರೋಪವೂ ಬರುವುದಿಲ್ಲ. ರಾಜಕೀಯ ದ್ವೇಷದಿಂದ ಎಫ್‌ಐಆರ್ ದಾಖಲಿಸಲಾಗಿದೆ ಎಂದರು. ಶಾಸಕ ಬೈರತಿ ಬಸವರಾಜ್ ಅವರ ಮೇಲೂ ಇದೇ ರೀತಿ ಎಫ್‌ಐಆರ್ ದಾಖಲಿಸಲಾಗಿದೆ. ಕೊಡಗಿನಲ್ಲಿ ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಅವರು ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದರು. ಆದರೆ, ಕಾಂಗ್ರೆಸ್ ಶಾಸಕರಾದ ಎ.ಎಸ್.ಪೊನ್ನಣ್ಣ ಮತ್ತು ಮಂಥರ್ ಗೌಡ ಅವರ ಹೆಸರು ಎಫ್‌ಐಆರ್‌ನಲ್ಲಿ ಬರಲೇ ಇಲ್ಲ. ಪೊಲೀಸರು ಎಲ್ಲರಿಗೂ ಸಮಾನವಾಗಿ ಕೆಲಸ ಮಾಡಬೇಕು ಎಂದು ಹೇಳಿದರು.

## ಶಿಕ್ಷಣದಲ್ಲಿ ದ್ವಿಭಾಷಾ ನೀತಿಗೆ ಕರ್ನಾಟಕದ ಎಸ್‌ಇಪಿ ಆಯೋಗ ಶಿಫಾರಸು

• ಉದಯವಾಹಿನಿ, ಬೆಂಗಳೂರು

ಶಾಲಾ ಶಿಕ್ಷಣದಲ್ಲಿ ದ್ವಿಭಾಷಾ ನೀತಿಯನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸುವಂತೆ ರಾಜ್ಯ ಶಿಕ್ಷಣ ನೀತಿ ಆಯೋಗ ಶಿಫಾರಸು ಮಾಡಿದೆ. ತೃತೀಯ ಭಾಷೆಯಾಗಿ ಹಿಂದಿಯನ್ನು ಕಲಿಸುವ ಬಗ್ಗೆ ಆಯೋಗ ಪ್ರಸ್ತಾಪಿಸಿಲ್ಲ. ರಾಷ್ಟ್ರೀಯ ಹೊಸ ಶಿಕ್ಷಣ ನೀತಿ-2020ರ (ಎನ್‌ಇಪಿ) ಬದಲಿಗೆ ರಾಜ್ಯಕ್ಕೆ ಪ್ರತ್ಯೇಕವಾದ ಶಿಕ್ಷಣ ನೀತಿ ರೂಪಿಸಲು ಪ್ರೊ.ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ ರಾಜ್ಯ ಶಿಕ್ಷಣ ನೀತಿ ಆಯೋಗವನ್ನು ಸರ್ಕಾರ ರಚಿಸಿತ್ತು. 2,197 ಪುಟಗಳಿರುವ ಮೂರು ಸಂಪುಟ ಒಳಗೊಂಡ ತನ್ನ ಅಂತಿಮ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಯೋಗವು ಶುಕ್ರವಾರ ಸಲ್ಲಿಸಿತು. ಮೂರು ಸಂಪುಟಗಳನ್ನು ಶಾಲಾ ಶಿಕ್ಷಣ. ಉನ್ನತ ಶಿಕ್ಷಣ ಹಾಗೂ ವೃತ್ತಿ ಶಿಕ್ಷಣ ಎಂದು ವರ್ಗೀಕರಿಸಲಾಗಿದೆ. ಕನ್ನಡ ಸೇರಿದಂತೆ ಇತರೆ ಮಾತೃ ಭಾಷೆಗಳನ್ನು ಪ್ರಥಮ ಭಾಷೆಯಾಗಿ, ಇಂಗ್ಲಿಷ್ ಅನ್ನು ದ್ವಿತೀಯ ಭಾಷೆಯಾಗಿ ನಿಗದಿ ಮಾಡಬೇಕು.


## ಚುನಾವಣೆಯ ಸೋಲಿನ ಕಾರಣ ಬಿಚ್ಚಿಟ್ಟ ಮಲ್ಲಿಕಾರ್ಜುನ ಖರ್ಗೆ!

• ಉದಯವಾಹಿನಿ, ಬೆಂಗಳೂರು

ಕಲಬುರಗಿ ಲೋಕಸಭಾ ಕ್ಷೇತ್ರದಲ್ಲಿ 2019ರಲ್ಲಿ ಖರ್ಗೆ ಸ್ಪರ್ಧೆ ಮಾಡಿದ್ದರು. ಆದರೆ ಆ ಚುನಾವಣೆಯಲ್ಲಿ ಅವರು ಸೋಲು ಅನುಭವಿಸಿದ್ದರು. ಈ ಸೋಲನ್ನು ಮೋದಿ ಅಲೆಯ ಸೋಲು ಎಂದೇ ಆಗ ಬಿಂಬಿಸಲಾಗಿತ್ತು. ಈ ಮೂಲಕ ಸೋಲಿಲ್ಲದ ಸರದಾರನಿಗೆ ಚುನಾವಣಾ ರಾಜಕೀಯದಲ್ಲಿ ಮೊದಲ ಬಾರಿಯ ಹಿನ್ನಡೆಯಾಗಿತ್ತು. ಇದೇ ವಿಚಾರವನ್ನು ಇದೀಗ ಖರ್ಗೆ ಅವರು ತಮ್ಮ ಭಾಷಣದಲ್ಲಿ ಉಲ್ಲೇಖ ಮಾಡಿದ್ದಾರೆ. ಫ್ರೀಡಂ ಪಾರ್ಕ್‌ನಲಿ ನಡೆದ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿದ ಅವರು 2019ರಲ್ಲಿ ಲೋಕಸಭೆ ಚುನಾವಣೆಯಲ್ಲಿ ಸೋತೆ. ಇದು ಮೊದಲ ಸೋಲು. ಆ ಸಂದರ್ಭದಲ್ಲಿ ಮತ ಕಳ್ಳತನ ಮಾಡಿದ್ದರು. ಅಂದು ಇದರ ಬಗ್ಗೆ ನನಗೆ ಗೊತ್ತಾಗಲೇ ಇಲ್ಲ. 5 ಕ್ಷೇತ್ರದಲ್ಲಿ ಬೋಗಸ್ ಮತದಾನ ಮಾಡಿ ನನ್ನನ್ನು ಸೋಲಿಸಿದ್ದರು. ಈಗ ಅದು ಬಯಲಿಗೆ ಬಂದಿದೆ, ಎಂದು ಖರ್ಗೆ ಆರೋಪ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಪಕ್ಷದ ಮುಖಂಡರು ಗಮನ ಕೊಡಬೇಕು. ಅನೇಕ ರಾಜ್ಯಗಳಲ್ಲಿ ಬಹುಮತ ಇದ್ದರೂ ಪಕ್ಷ ಒಡೆದು ಸರ್ಕಾರ ಮಾಡಿದ್ದಾರೆ ಎಂದರು.

## ರಾಹುಲ್ ಚುನಾವಣಾ ಆಯೋಗದ ಮೇಲೆ ಆರೋಪ

# ರಾಂಗ್ ಆದ ರಾಗಾ



### 'ಸಂಸತ್ತಿನಲ್ಲಿ ಪ್ರಮಾಣವಚನ ಸ್ವೀಕರಿಸಿದ್ದೇನೆ

### EC ವಿರುದ್ಧ ರಾಹುಲ್ ಕಿಡಿ

### ಉತ್ತರ ಕೊಡೋಕೆ ಇನ್ಯಾರನ್ನೋ ಕಳಿಸಿದ್ದಾರೆ: ಜೋಶಿ ಕಿಡಿ

### ಚುನಾವಣಾ ಆಯೋಗಕ್ಕೆ ರಾಹುಲ್ 5 ಪ್ರಶ್ನೆ

1. ವಿರೋಧ ಪಕ್ಷಗಳಿಗೆ ಡಿಜಿಟಲ್ ಮತದಾರರ ಪಟ್ಟಿಯನ್ನು ಏಕೆ ಕೊಡುತ್ತಿಲ್ಲ? ನೀವು ಏನು ಮರೆಮಾಡುತ್ತಿದ್ದೀರಿ?
2. ಸಿಸಿಟಿವಿ ಮತ್ತು ವೀಡಿಯೊ ಪುರಾವೆಗಳನ್ನು ನಾಶಪಡಿಸಲಾಗುತ್ತಿದೆ - ಏಕೆ? ಯಾರ ಆದೇಶದ ಮೇರೆಗೆ..?
3. ನಕಲಿ ಮತದಾನ ಮತ್ತು ಮತದಾರರ ಪಟ್ಟಿಯನ್ನು ಕುಶಲತೆಯಿಂದ ಬಳಸುತ್ತೀರಾ - ಏಕೆ?
4. ವಿರೋಧ ಪಕ್ಷದ ನಾಯಕರನ್ನು ಹೆದರಿಸುವುದು ಮತ್ತು ಬೆದರಿಸುವುದು - ಏಕೆ?
5. ಸ್ಪಷ್ಟವಾಗಿ ಹೇಳಿ - ಇಸಿಐ ಈಗ ಬಿಜೆಪಿಯ ಏಜೆಂಟ್ ಆಗಿ ಮಾರ್ಪಟ್ಟಿದೆಯೇ?


• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ಲೋಕಸಭೆ ಚುನಾವಣೆಯಲ್ಲಿ ಮತಗಳ್ಳತನ ನಡೆದಿದೆ ಎಂದು ಆರೋಪಿಸಿ, ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಬಿಡುಗಡೆ ಮಾಡಿದ್ದ ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಶುಕ್ರವಾರ ತಮ್ಮ ಆರೋಪಗಳನ್ನು ಪುನರುಚ್ಚರಿಸಿದ್ದು, ಸಹಿ ಮಾಡಿದ ಅಫಿಡವಿಟ್ ಜೊತೆಗೆ ದಾಖಲೆ ಸಲ್ಲಿಸುವಂತೆ ಕೇಳಿದ್ದಕ್ಕಾಗಿ ಚುನಾವಣಾ ಆಯೋಗವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಮತ ಅಧಿಕಾರ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿ, ಚುನಾವಣಾ ಆಯೋಗ ಮತ್ತು ಬಿಜೆಪಿ ಲೋಕಸಭಾ ಚುನಾವಣೆಯನ್ನು ಗೆಲ್ಲಲು ಒಪ್ಪಂದ ಮಾಡಿಕೊಂಡಿವೆ. ಕೇಂದ್ರ ಚುನಾವಣಾ ಆಯೋಗವು ನನಗೆ ಅಫಿಡವಿಟ್ ಸಲ್ಲಿಸಲು, ಪ್ರಮಾಣ ವಚನದ ಮೂಲಕ ದಾಖಲೆಗಳನ್ನು ಸಲ್ಲಿಸುವಂತೆ ಕೇಳಿದೆ. ನಾನು ಸಂವಿಧಾನವನ್ನು ಹಿಡಿದುಕೊಂಡು ಸಂಸತ್ತಿನೊಳಗೆ ಪ್ರಮಾಣವಚನ ಸ್ವೀಕರಿಸಿದ್ದೇನೆ' ಎಂದು ಹೇಳಿದರು.

ತಾವು ಬಿಡುಗಡೆ ಮಾಡಿದ ದತ್ತಾಂಶದ ಆಧಾರದ ಮೇಲೆ ಜನರು ಚುನಾವಣಾ ಆಯೋಗವನ್ನು ಪ್ರಶ್ನಿಸುತ್ತಿದ್ದರೆ, ಇತ್ತ ಚುನಾವಣಾ ಆಯೋಗವು ತನ್ನ ವೆಬ್‌ಸೈಟ್ ಅನ್ನು ಮುಚ್ಚಿದೆ. ದತ್ತಾಂಶ ಆಧರಿಸಿ ಜನರು ಇದರ ಬಗ್ಗೆ ಪ್ರಶ್ನಿಸಲು ಪ್ರಾರಂಭಿಸಿದರೆ, ತಮ್ಮ ಸಂಪೂರ್ಣ ರಚನೆ ಕುಸಿಯುತ್ತದೆ ಎಂದು ತಿಳಿದಿದ್ದರಿಂದ ಮಧ್ಯಪ್ರದೇಶ, ರಾಜಸ್ಥಾನ ಮತ್ತು ಬಿಹಾರದಲ್ಲಿ ಚುನಾವಣಾ ಆಯೋಗದ ವೆಬ್‌ಸೈಟ್‌ಗಳನ್ನು ಬಂದ್ ಮಾಡಲಾಗಿದೆ ಎಂದು ಆರೋಪಿಸಿದರು. '2024ರ ಲೋಕಸಭಾ ಚುನಾವಣೆಯಲ್ಲಿ ನಮ್ಮ ಮೈತ್ರಿಕೂಟ ಗೆಲ್ಲುತ್ತದೆ.

4 ತಿಂಗಳ ನಂತರ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದಿದೆ. ಇದು ಅಚ್ಚರಿಯ ಚುನಾವಣಾ ಫಲಿತಾಂಶವಾಗಿತ್ತು. ನಾವು ಕಂಡುಹಿಡಿಯಲು ಪ್ರಯತ್ನಿಸಿದಾಗ, 1 ಕೋಟಿ ಹೊಸ ಮತದಾರರು ಮತ ಚಲಾಯಿಸಿರುವುದು ತಿಳಿಯಿತು ಲೋ.ಚು.ಯಲ್ಲಿ ಎಂದಿಗೂ ಮತ ಚಲಾಯಿಸದ 1 ಕೋಟಿ ಹೊಸ ಮತದಾರರು ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಮತ ಚಲಾಯಿಸಿದ್ದಾರೆ' ಎಂದು ರಾಹುಲ್ ಗಾಂಧಿ ಹೇಳಿದರು. ಹೊಸ ಮತದಾರರು ಎಲ್ಲೆಲ್ಲಿ ಮತ ಚಲಾಯಿಸಿದರೋ ಅಲ್ಲೆಲ್ಲ ಬಿಜೆಪಿ ಗೆದ್ದಿದೆ. ನಮ್ಮ ಮೈತ್ರಿಕೂಟದ ಮತಗಳು ಕಡಿಮೆಯಾಗಲಿಲ್ಲ ಮತ್ತು ಲೋಕಸಭಾ ಚುನಾವಣೆಯಲ್ಲಿ ನಾವು ಹೊಂದಿದ್ದಷ್ಟೇ ಸಂಖ್ಯೆಯ ಮತಗಳನ್ನು ನಾವು ಪಡೆದುಕೊಂಡಿದ್ದೇವೆ. ಹೊಸ ಮತದಾರರು ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಮತ ಚಲಾಯಿಸಿದ್ದಾರೆ' ಎಂದು ಅವರು ಹೇಳಿದರು. 'ಕಾಂಗ್ರೆಸ್ ಸಮೀಕ್ಷೆಗಳ ಪ್ರಕಾರ, ಕರ್ನಾಟಕದಲ್ಲಿ ಲೋಕಸಭಾ ಚುನಾವಣೆಯಲ್ಲಿ 15 ರಿಂದ 16 ಸ್ಥಾನಗಳನ್ನು ಗೆಲ್ಲುತ್ತವೆ ಎಂದು ತೋರಿಸಿವೆ. ಆದರೆ, ಒಂಬತ್ತು ಸ್ಥಾನಗಳನ್ನು ಗೆದ್ದಿದ್ದೇವೆ. ನಂತರ ನಾವು ಅದನ್ನು ಪ್ರಶ್ನಿಸಲು ಪ್ರಾರಂಭಿಸಿದೆವು. ನಾವು ನಿಜವಾಗಿಯೂ ಚುನಾವಣೆಯಲ್ಲಿ ಸೋತಿದ್ದೇವೆಯೇ...? ನಾವು ಚುನಾವಣಾ ಆಯೋಗಕ್ಕೆ ಮತದಾರರ ಪಟ್ಟಿಯ ಸಾಫ್ಟ್ ಕಾಪಿ ನೀಡುವಂತೆ ಒತ್ತಾಯಿಸಿದೆವು. ಆದರೆ, ಅವರು ಅದನ್ನು ತಿರಸ್ಕರಿಸಿದರು. ನಾವು ವಿಡಿಯೋ ನೀಡುವಂತೆ ಒತ್ತಾಯಿಸಿದಾಗ, ಅದನ್ನೂ ಅವರು ತಿರಸ್ಕರಿಸಿದರು ಮತ್ತು ಕಾನೂನನ್ನು ಬದಲಾಯಿಸಿದರು. 45 ದಿನಗಳ ನಂತರ ವಿಡಿಯೋವನ್ನು ನಾಶಪಡಿಸಬೇಕೆಂದು ಅವರು ಹೇಳಿದರು ಎಂದು ರಾಹುಲ್ ಗಾಂಧಿ ಹೇಳಿದರು. ಸಂವಿಧಾನದ ಪ್ರತಿಯನ್ನು ಎತ್ತಿ ತೋರಿಸಿದ ಅವರು, ಇದು ಸಾವಿರಾರು ವರ್ಷಗಳ ಇತಿಹಾಸದ ಸಿದ್ಧಾಂತ ಹೊಂದಿದೆ ಎಂದು ಹೇಳಿದರು. ಇದರಲ್ಲಿ ಮಹಾತ್ಮ ಗಾಂಧಿ, ಅಂಬೇಡ್ಕರ್, ನೆಹರು ಮತ್ತು ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಧ್ವನಿಯು ಬಸವಣ್ಣ, ನಾರಾಯಣ ಗುರು ಮತ್ತು ಜ್ಯೋತಿಬಾ ಫುಲೆ ಅವರ ಮಾತುಗಳೊಂದಿಗೆ ಪ್ರತಿಧ್ವನಿಸುತ್ತದೆ. ಇದರ ಪ್ರಕಾರ ಒಬ್ಬ ವ್ಯಕ್ತಿಗೆ ಒಂದು ಮತ. ಪ್ರತಿಯೊಬ್ಬ ಭಾರತೀಯ ನಾಗರಿಕನಿಗೂ ಒಂದು ಮತ ಚಲಾಯಿಸುವ ಹಕ್ಕಿದೆ. ಕಳೆದ ಚುನಾವಣೆಯಲ್ಲಿ ಮೋದಿ ಮತ್ತು ಅದರ ನಾಯಕರು ಸಂವಿಧಾನದ ಮೇಲೆ ದಾಳಿ ಮಾಡಿದರು. ಭಾರತೀಯ ಸಂಸ್ಥೆಗಳು ನಾಶವಾದವು' ಎಂದು ಅವರು ಆರೋಪಿಸಿದರು.

### ರಾಜೀವ್ ಗಾಂಧಿ ಚಿತಾಭಸ್ಮ ತೋರಿಸಿ ಮತ ಪಡೆದಿದ್ರು



ಈ ಹಿಂದೆ ಕಾಂಗ್ರೆಸ್ ಅವಧಿಯಲ್ಲಿ ಚುನಾವಣಾ ಆಯೋಗದ ಕಮಿಷನರ್‌ಗಳನ್ನು ರಾಜ್ಯಸಭೆಗೆ ನೇಮಕ ಮಾಡಿ, ಮಂತ್ರಿ ಮಾಡಿದ್ದೀರಿ. ರಾಜೀವ್ ಗಾಂಧಿ ಹತ್ಯೆಯಾದಾಗ ದೇಶದಲ್ಲಿ ಚುನಾವಣೆ ನಿಲ್ಲಿಸಿದ್ದರು. ಚಿತಾಭಸ್ಮ ತೋರಿಸಿ ಮತ ಪಡೆದುಕೊಂಡರು. ಆಯೋಗವನ್ನು ಹೀಗೆ ಬಳಸಿಕೊಂಡವರು ನಮಗೆ ಪಾಠ ಹೇಳುತ್ತಿದ್ದಾರೆ. ಸಿಸಿಟಿವಿ ದೃಶ್ಯ ನೀಡಿಲ್ಲ ಎಂದು ಆರೋಪ ಇದೆ. ಸಿಸಿಟಿವಿ ಸ್ಟೋರೇಜ್ 45 ದಿನಗಳಿಗೆ ಮಾತ್ರ ಇರುತ್ತದೆ. 45 ದಿನಗಳ ಬಳಿಕ ಕೇಳಿದರೆ ಕೊಡಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ್ದಾರೆ. ರಾಹುಲ್ ಗಾಂಧಿ ಮನವಿ ಮೇರೆಗೆ ಬಿಹಾರದಲ್ಲಿ ಎಸ್‌ಐಆರ್ ಮಾಡಿದ್ದೆ. ಆದರೆ ಈಗ ಹೀಗೆ ಮಾಡಬೇಡಿ ಎಂದು ಹೇಳುತ್ತಿದ್ದಾರೆ. ಸತ್ಯ ಸಂಗತಿ ಜನರ ಮುಂದೆ ಬರಬೇಕು ಎಂದಿದ್ದಾರೆ.

25% ಮತ ಪ್ರಮಾಣ ಮಹಾದೇವಪುರದಲ್ಲಿ ಹೆಚ್ಚಾಗಿದೆ ಎನ್ನುವ ಆರೋಪ ಇದೆ. ಲೋಕಸಭೆ ಕ್ಷೇತ್ರದಲ್ಲಿ ಐದು ವಿಧಾನಸಭೆ ಕ್ಷೇತ್ರದಲ್ಲಿ ಬಿಜೆಪಿಗೆ ಲೀಡ್ ಬಂತು. ಮಾಲೆಂಗಾವ್ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ದೊಡ್ಡ ಪ್ರಮಾಣದ ಮತ ಬಂತು. ಹಾಗಿದ್ರೆ ನಾವು ಇದಕ್ಕೆ ಏನು ಹೇಳಬೇಕು. ಮಾಲೆಂಗಾವ್‌ನಲ್ಲಿ 43% ಮತದಾರರ ಪ್ರಮಾಣ ಹೆಚ್ಚಾಗಿದೆ. 2024ರಲ್ಲಿ ರಾಜ್ಯದಲ್ಲಿ ಬಿಜೆಪಿ ಸೋತಿತು. ಕಾಂಗ್ರೆಸ್ ಗೆದ್ದಾಗ ಇವಿಎಂ, ಆಯೋಗ ಎಲ್ಲ ಸರಿ ಇತ್ತು. ಲೋಕಸಭೆಯಲ್ಲಿ ನಾವು ಗೆದ್ದೆವು. ಆಗ ಆಯೋಗ ಸರಿ ಇಲ್ಲ, ಇವಿಎಂ ಸರಿ ಇಲ್ಲ. ಕುಣಿಯಲು ಬಾರದಿದ್ದರೆ ನೆಲೆ ಡೊಂಕು ಅಂದ್ರಂತೆ. ರಾಹುಲ್ ಗಾಂಧಿ ಮೂರ್ಖತನಕ್ಕೆ ಇದಕ್ಕಿಂತ ಉದಾಹರಣೆ ಬೇಕಿಲ್ಲ ಎಂದು ಲೇವಡಿ ಮಾಡಿದ್ದಾರೆ.

**ನಾವು ಗೆದ್ರೆ ಇವಿಎಂ ಸರಿಯಿಲ್ಲ ಅಂತಾರೆ**

### ರಫೇಲ್ ವಿಚಾರದಲ್ಲೂ ಸುಳ್ಳು

ಹಿಂದೆ ಮಹಾರಾಷ್ಟ್ರ ಚುನಾವಣೆಯಲ್ಲಿ 70 ಲಕ್ಷ ಮತದಾರರ ಸೇರ್ಪಡೆಯಾಗಿವೆ ಎಂದು ಹೇಳಿದ್ದರು. ಅದಾದ ಬಳಿಕ ಆಯೋಗ 40 ಲಕ್ಷ ಮತದಾರರ ಸೇರ್ಪಡೆಯಾಗಿದೆ ಎಂದು ಸ್ಪಷ್ಟನೆ ನೀಡಿತು. ಗುರುವಾರ ಸುದ್ದಿಗೋಷ್ಠಿಯಲ್ಲಿ ಒಂದು ಕೋಟಿ ಮತದಾರರು ಹೆಚ್ಚಾಗಿದ್ದಾರೆ ಎಂದು ಹೇಳಿದ್ದಾರೆ. ರಫೇಲ್ ವಿಚಾರದಲ್ಲೂ ಹೀಗೆ ಸುಳ್ಳು ಸಂಖ್ಯೆ ಹೇಳಿದ್ದರು. 2004, 2009ರಲ್ಲಿ ಯುಪಿಎ ಸರ್ಕಾರದ ಅವಧಿಯಲ್ಲೂ ಮಹಾರಾಷ್ಟ್ರದಲ್ಲಿ ಮತ ಪ್ರಮಾಣ ಹೆಚ್ಚಾಗಿದೆ. ಎನ್‌ಡಿಎ ಕಾಲದಲ್ಲೂ ಇದು ಹೆಚ್ಚಾಗಿದೆ. ಈ ಹಿಂದೆ ಮಹಾರಾಷ್ಟ್ರದಲ್ಲೂ ಇವರೇ ಗೆದ್ದಿದ್ದರಲ್ಲ ಎಂದು ಟಾಂಗ್ ಕೊಟ್ಟಿದ್ದಾರೆ.

## ಒಳ ಮೀಸಲು ವರದಿ: ಸಂಪುಟ ಸಭೆಯಲ್ಲಿ ಒಮ್ಮತ ಇದೆ

• ಉದಯವಾಹಿನಿ, ಬೆಂಗಳೂರು

ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲಾತಿ ಕುರಿತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್‌ದಾಸ್ ನೇತೃತ್ವದ ಏಕಸದಸ್ಯ ಆಯೋಗ ಸಲ್ಲಿಸಿದ ವರದಿಯ ಬಗ್ಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಮ್ಮತ ವ್ಯಕ್ತವಾಗಿದ್ದು, ಯಾರೊಬ್ಬರೂ ವಿರೋಧ ವ್ಯಕ್ತಪಡಿಸಿಲ್ಲ ಎಂದು ಗೊತ್ತಾಗಿದೆ. 'ಸಚಿವ ಸಂಪುಟ ಸಭೆಯಲ್ಲಿ ವರದಿಯನ್ನು ಮಂಡಿಸಲಾಯಿತು. ಆಯೋಗದ ವರದಿಯ ಬಗ್ಗೆ ಎಲ್ಲಾ ಸಚಿವರೂ ಸಹಮತ ಹೊಂದಿದ್ದಾರೆ.

ಸಣ್ಣ-ಪುಟ್ಟ ಲೋಪಗಳು ಇದ್ದರೆ ಸರಿಪಡಿಸಿಕೊಂಡು ಜಾರಿ ಮಾಡಲು ಎಲ್ಲರೂ ಒಪ್ಪಿದರು' ಎಂದು ಮೂಲಗಳು ಹೇಳಿವೆ. 'ಆದಿ ದ್ರಾವಿಡ, ಆದಿ ಕರ್ನಾಟಕ ಎಂದು ಪ್ರತ್ಯೇಕವಾಗಿ ಗುರುತಿಸಿ ಶೇ 1ರಷ್ಟು ಮೀಸಲಾತಿ ನೀಡುವ ಅಗತ್ಯ ಇರಲಿಲ್ಲ. ಈ ಎರಡೂ ಉಪ ಜಾತಿಗಳು ಬಲಗೈ ಅಥವಾ ಎಡಗೈ ಪಂಗಡದಲ್ಲೇ ಬರುತ್ತವೆ. ಅದನ್ನು ಪರಿಷ್ಕರಿಸುವುದು ಸೂಕ್ತ ಎಂದು ಹಿರಿಯ ಸಚಿವರೊಬ್ಬರು ಅಭಿಪ್ರಾಯ ವ್ಯಕ್ತಪಡಿಸಿದರು' ಎಂದು ಮೂಲಗಳು ತಿಳಿಸಿವೆ.

ಸಚಿವ ಸಂಪುಟದಲ್ಲಿ ವರದಿಯನ್ನು ಮಂಡಿಸಿಯಾಗಿದೆ. ಇಂದೇ ಅಂಗೀಕರಿಸಿದರೆ ಒಳ್ಳೆಯದು ಎಂದು ಮತ್ತೊಬ್ಬ ಹಿರಿಯ ಸಚಿವರು ಹೇಳಿದರು. ವರದಿ ಸುದೀರ್ಘವಾಗಿದ್ದು, ಎಲ್ಲರೂ ಒಂದು ಸಲ ಓದಿಕೊಂಡು ಬಂದರೆ ಸೂಕ್ತ ಎಂಬುದಾಗಿ ಸಿಎಂ ಸಿದ್ದರಾಮಯ್ಯ ಸಲಹೆ ನೀಡಿದರು' ಎಂದು ಮೂಲಗಳು ತಿಳಿಸಿವೆ.

ಸರ್ಕಾರ ರಚಿಸಿದ ಆಯೋಗವು ನೀಡಿದ ವರದಿ ಒಂದೋ ಯಥಾವತ್ತಾಗಿ ಅಂಗೀಕರಿಸಬೇಕು ಅಥವಾ ಸಣ್ಣಪುಟ್ಟ ಪರಿಷ್ಕರಣೆಯೊಂದಿಗೆ ಪುರಸ್ಕರಿಸಬೇಕು. ಇಲ್ಲವೇ ತಿರಸ್ಕರಿಸಬೇಕು. ಅದು ಬಿಟ್ಟರೆ ಬೇರೆ ದಾರಿ ಇಲ್ಲ' ಎಂದು ಸಿಎಂ ತಮ್ಮ ಸಹೋದ್ಯೋಗಿಗಳಿಗೆ ತಿಳಿಸಿದರು. 'ನಮ್ಮ ಸರ್ಕಾರವೇ ಆಯೋಗ ರಚಿಸಿ ವರದಿ ಪಡೆದಿರುವಾಗ, ತಿರಸ್ಕರಿಸುವುದು ಸರಿಯಲ್ಲ ಎಂದು ಬಹುತೇಕ ಸಚಿವರು ಅಭಿಪ್ರಾಯಪಟ್ಟರು' ಎಂದು ಮೂಲಗಳು ಹೇಳಿವೆ. 'ವಿಧಾನಸಭೆ ಚುನಾವಣೆ ಪೂರ್ವದಲ್ಲಿ ಚಿತ್ರದುರ್ಗದಲ್ಲಿ ನಡೆದ ಸಮಾವೇಶದಲ್ಲಿ ಒಳಮೀಸಲಾತಿ ಜಾರಿಯ ಬಗ್ಗೆ ವಾಗ್ದಾನ ಮಾಡಿದ್ದು, ಪ್ರಣಾಳಿಕೆಯಲ್ಲೂ ಸೇರಿಸಿದ್ದೇವೆ. ಹೀಗಿರುವಾಗ ಜಾರಿ ಮಾಡಲೇಬೇಕು' ಎಂದು ಪರಿಶಿಷ್ಟ ಜಾತಿಯನ್ನು ಪ್ರತಿನಿಧಿಸುವ ಎಲ್ಲಾ ಸಚಿವರು ಪ್ರತಿಪಾದಿಸಿದರು' ಎಂದು ಮೂಲಗಳು ತಿಳಿಸಿವೆ. 'ಆಗ ಮಧ್ಯ ಪ್ರವೇಶಿಸಿದ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು, ಎಲ್ಲರ ಸಹಮತ ಇರುವುದರಿಂದ ಎರಡು ದಿನಗಳಲ್ಲೇ ಮತ್ತೊಂದು ಸಭೆ ಕರೆದು ನಿರ್ಣಯ ತೆಗೆದುಕೊಳ್ಳಬಹುದು. ಇಲ್ಲವಾದರೆ ತಪ್ಪು ಸಂದೇಶ ಹೋಗುತ್ತದೆ' ಎಂದು ಹೇಳಿದರು

ಆಗ ಮಾತನಾಡಿದ ಡಿ.ಕೆ. ಶಿವಕುಮಾರ್, 'ವರದಿಯನ್ನು ತಿರಸ್ಕರಿಸುವುದು ಬೇಡ. ಎಲ್ಲಾ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜಾರಿ ಮಾಡೋಣ ಎಂದು ಸಲಹೆ ನೀಡಿದರು' ಎಂದು ಮೂಲಗಳು ಹೇಳಿವೆ. 'ಆಗಸ್ಟ್ 16ರಂದು ವಿಶೇಷ ಸಚಿವ ಸಂಪುಟ ಸಭೆ ನಡೆಸಿ ಚರ್ಚೆ ಮಾಡೋಣ ಎಂದು ಮುಖ್ಯಮಂತ್ರಿ ಹೇಳಿದರು' ಎಂದು ಮೂಲಗಳು ಹೇಳಿವೆ.



### ಪರಿಶಿಷ್ಟ ಸಮುದಾಯ ಸಚಿವರ ಸಭೆ

'ಆ.16 ಕ್ಕೂ ಮೊದಲೇ ಗೃಹ ಸಚಿವ ಜಿ.ಪರಮೇಶ್ವರ ಅವರ ನಿವಾಸದಲ್ಲಿ ಪರಿಶಿಷ್ಟ ಸಮುದಾಯದ ಸಚಿವರ ಸಭೆ ನಡೆಯಲಿದೆ. ವರದಿ ಶಿಫಾರಸಿನ ಜಾರಿಯ ಬಗ್ಗೆ ಎಡಗೈ ಮತ್ತು ಬಲಗೈ ಸಮುದಾಯದ ಸಚಿವರು ಸೇರಿ ಒಮ್ಮತದ ತೀರ್ಮಾನ ತೆಗೆದುಕೊಳ್ಳಲಿದ್ದೇವೆ' ಎಂದು ಹಿರಿಯ ಸಚಿವರೊಬ್ಬರು ತಿಳಿಸಿದರು.

## ಕರ್ನಾಟಕ ಬಾಡಿಗೆ ಕಾಯ್ದೆಗೆ ಮಹತ್ವದ ತಿದ್ದುಪಡಿ

■ ಬಾಡಿಗೆದಾರರು, ಮನೆ ಮಾಲೀಕರಿಗೆ ಶಾಕ್! ರೆಂಟ್ ನಿಗದಿಗೆ ಮುಂದು ■ ಕಾಯಿದೆಯಲ್ಲಿ ಬದಲಾವಣೆ ತರಲು ಮುಂದಾದ ಸರ್ಕಾರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಸರ್ಕಾರದಿಂದ ಬಾಡಿಗೆ ಕಾಯ್ದೆಗೆ ಮಹತ್ವದ ತಿದ್ದುಪಡಿ ಮಾಡಲಾಗುತ್ತಿದೆ. ಹೊಸ ನಿಯಮದಂತೆ ಬಾಡಿಗೆದಾರರಿಗೆ ಮಾತ್ರವಲ್ಲ, ಮಾಲೀಕರಿಗೂ ನಿಯಮ ಉಲ್ಲಂಘಿಸಿದರೆ ದೊಡ್ಡ ಮೊತ್ತದ ದಂಡ ಬೀಳಲಿದೆ. ಜತೆಗೆ ದುಬಾರಿ ಬಾಡಿಗೆಗೆ ಬ್ರೇಕ್ ಹಾಕಲು ಸರ್ಕಾರ ಮುಂದಾಗಿದ್ದು, ಮಾರುಕಟ್ಟೆಗೆ ಅನುಗುಣವಾಗಿ ಬಾಡಿಗೆ ದರ ನಿಗದಿ ಮಾಡಲು ಮುಂದಾಗಿದೆ.

ಕರ್ನಾಟಕ ರಾಜ್ಯದಲ್ಲಿ ಬಾಡಿಗೆ ಮನೆಗಳ ನಿಯಮಗಳನ್ನು ಬದಲಾಯಿಸಲು ಸರ್ಕಾರ ಮುಂದಾಗಿದ್ದು, ಕರ್ನಾಟಕ ಬಾಡಿಗೆ ಕಾಯ್ದೆ 1999ಕ್ಕೆ ತಿದ್ದುಪಡಿ ತರಲು ನಿರ್ಧರಿಸಿದೆ.

ಈ ತಿದ್ದುಪಡಿಯಿಂದ ಬಾಡಿಗೆ ಮನೆಗಳಲ್ಲಿ ವಾಸಿಸುವವರು ಮತ್ತು ಮನೆ ಮಾಲೀಕರು ಇಬ್ಬರಿಗೂ ಹೊಸ ನಿಯಮಗಳು ಅನ್ವಯಿಸುತ್ತವೆ. ಮುಖ್ಯವಾಗಿ, ಬಾಡಿಗೆ ಮನೆಯನ್ನು ಮಾಲೀಕರ ಅನುಮತಿ ಇಲ್ಲದೆ ಬೇರೆಯವರಿಗೆ ಬಾಡಿಗೆಗೆ ನೀಡಿದರೆ, ಈಗಿನ ದಂಡದ ಮೊತ್ತವನ್ನು 5000 ರೂಪಾಯಿಯಿಂದ 50,000 ರೂ.ಗೆ ಹೆಚ್ಚಿಸಲು ಸರ್ಕಾರ ತೀರ್ಮಾನಿಸಿದೆ. ಇದು ಶೇಕಡಾ 90ರಷ್ಟು ಹೆಚ್ಚಳವಾಗಲಿದೆ.

ಕೇವಲ ಬಾಡಿಗೆದಾರರಿಗೆ ಮಾತ್ರವಲ್ಲ, ಮನೆ ಮಾಲೀಕರಿಗೂ ದಂಡ ಬೀಳಲಿದೆ. ಬಾಡಿಗೆ ಮನೆಯನ್ನು ಬೇರೆಯವರಿಗೆ ಬಾಡಿಗೆಗೆ ನೀಡಲು ಅವಕಾಶ ಮಾಡಿಕೊಟ್ಟರೆ, ಅಂತಹ ಮನೆ ಮಾಲೀಕರಿಗೆ 3,000 ರೂಪಾಯಿಯಿಂದ 30,000 ರೂಪಾಯಿಗೆ ದಂಡ ಹೆಚ್ಚಳವಾಗಲಿದೆ. ಜೈಲು ಶಿಕ್ಷೆಯ ಬದಲು, ದಂಡದ ಮೊತ್ತವನ್ನು ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ.




**ಶೇಕಡಾ 90ರಷ್ಟು ಹೆಚ್ಚಳ**

**ಕಾಯ್ದೆಯಲ್ಲಿ ಬದಲಾವಣೆ ಮಾಡುತ್ತಿರುವ ಪ್ರಮುಖ ಅಂಶಗಳೇನು?**

ಅನಧಿಕೃತವಾಗಿ ಕಾರ್ಯನಿರ್ವಹಿಸುವ ಬ್ರೋಕರ್‌ಗಳಿಗೂ ಸರ್ಕಾರ ಬಿಸಿ ಮುಟ್ಟಿಸಲಿದೆ. ಕಾಯ್ದೆಯ ಸೆಕ್ಷನ್ 20ರ ಅಡಿಯಲ್ಲಿ ನೋಂದಣಿ ಮಾಡಿಸದ ಬ್ರೋಕರ್‌ಗಳಿಗೆ ದಿನಕ್ಕೆ 25000 ರೂಪಾಯಿ ದಂಡ ವಿಧಿಸಲಾಗುತ್ತದೆ. ಈ ಮೊದಲು, ಇದು 2000 ರೂಪಾಯಿ ಇತ್ತು. ಮತ್ತೆ ಮತ್ತೆ ತಪ್ಪು ಮಾಡಿದರೆ, ದಿನಕ್ಕೆ 20000 ರೂಪಾಯಿ ಹೆಚ್ಚುವರಿ ದಂಡ ಬೀಳುತ್ತದೆ.

ಬಾಡಿಗೆ ಒಪ್ಪಂದಗಳನ್ನು ಆನ್‌ಲೈನ್‌ನಲ್ಲಿ ನೋಂದಾಯಿಸಲು ಸರ್ಕಾರವು ಪೋರ್ಟಲ್ ಪ್ರಾರಂಭಿಸಿದೆ. ಇದರಿಂದ ಬಾಡಿಗೆಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಕಡಿಮೆ ಮಾಡಬಹುದು. ಅಲ್ಲದೆ, ಬಾಡಿಗೆ ವ್ಯವಹಾರದಲ್ಲಿ ಪಾರದರ್ಶಕತೆ ಕಾಪಾಡಬಹುದು. ನಗರ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಅನೌಪಚಾರಿಕ ಒಪ್ಪಂದಗಳು ನಡೆಯುತ್ತವೆ. ಇವುಗಳನ್ನು ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆ.

### ವಿಧಾನಸಭೆಯಲ್ಲಿ ಶೀಘ್ರ ಮಂಡನೆ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಅವರ ನೇತೃತ್ವದ ಸಮಿತಿಯು ಈ ತಿದ್ದುಪಡಿಗೆ ಒಪ್ಪಿಗೆ ನೀಡಿದೆ. ಶೀಘ್ರದಲ್ಲೇ ಇದನ್ನು ವಿಧಾನಸಭೆಯಲ್ಲಿ ಮಂಡಿಸಲಾಗುವುದು ಎಂದು ಕಾನೂನು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ಬೆಂಗಳೂರಿನಂತಹ ನಗರಗಳಲ್ಲಿ ಬಾಡಿಗೆ ಮನೆಗಳ ಸಂಖ್ಯೆ ಹೆಚ್ಚಾಗುತ್ತಿದೆ. ಇದರ ಜೊತೆಗೆ, ಮನೆ ಮಾಲೀಕರು ಮತ್ತು ಬಾಡಿಗೆದಾರರ ನಡುವಿನ ಜಗಳಗಳು ಕೂಡ ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ.

ಮಾರುಕಟ್ಟೆ ದರಕ್ಕೆ ಅನುಗುಣವಾಗಿ ಬಾಡಿಗೆ ದರಗಳನ್ನು ನಿಗದಿಪಡಿಸಲು ಸರ್ಕಾರ ಚಿಂತನೆ ನಡೆಸಿದೆ. ಇದರಿಂದ ಮನೆ ಮಾಲೀಕರಿಗೆ ಸರಿಯಾದ ಬಾಡಿಗೆ ಸಿಗುತ್ತದೆ. ಬಾಡಿಗೆದಾರರನ್ನು ರಕ್ಷಿಸಲು, ಏಕಾಏಕಿ ಬಾಡಿಗೆ ಏರಿಸುವುದನ್ನು ತಡೆಯಲು ಸಾಧ್ಯ ಆಗುತ್ತದೆ. ಮನೆ ಮಾಲೀಕರು ಬಾಡಿಗೆದಾರರನ್ನು ಮನೆಯಿಂದ ಹೊರಹಾಕುವ ಮೊದಲು, ಸೂಕ್ತ ನೋಟಿಸ್ ನೀಡಬೇಕು.

ಇದರಿಂದ ಬಾಡಿಗೆದಾರರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬಹುದು. ಕಡಿಮೆ ಬಾಡಿಗೆಗೆ ಮನೆ ನೀಡುವವರಿಗೆ ಸರ್ಕಾರ ತೆರಿಗೆ ವಿನಾಯಿತಿ ಮತ್ತು ಸಬ್ಸಿಡಿ ನೀಡಲು ಚಿಂತಿಸುತ್ತಿದೆ. ಇದರಿಂದ ಕಡಿಮೆ ಬೆಲೆಯ ಮನೆಗಳು ಸುಲಭವಾಗಿ ಲಭ್ಯವಾಗುವಂತೆ ನೋಡಿಕೊಳ್ಳಬಹುದು.

ಬಾಡಿಗೆಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಬೇಗನೆ ಇತ್ಯರ್ಥಪಡಿಸಲು, ಫಾಸ್ಟ್ ಟ್ರ್ಯಾಕ್ ವ್ಯವಸ್ಥೆಯನ್ನು ಜಾರಿಗೆ ತರಲು ಮುಂದಾಗಿದೆ. ಇದರಿಂದ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಬೇಗನೆ ಮುಗಿಸಬಹುದು. ಮನೆ ಮಾಲೀಕರು ಮತ್ತು ಬಾಡಿಗೆದಾರರು ಇಬ್ಬರಿಗೂ ಇದು ಅನುಕೂಲವಾಗುತ್ತದೆ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹10,331/Gram24ct ₹9,470/Gram22ct | ಬೆಳ್ಳಿ: ₹117.00/Gram

## ಸೂಟ್‌ಕೇಸ್‌ನಲ್ಲಿ ರೂ.30 ಲಕ್ಷ ನಗದು ಪತ್ತೆ

• ಉದಯವಾಹಿನಿ, ಬೆಂಗಳೂರು

ಅಮೃತಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಜಂಕ್ಷನ್‌ನಲ್ಲಿ ರಾತ್ರಿ ಅನುಮಾನಾಸ್ಪದವಾಗಿ ಪತ್ತೆಯಾದ ಸೂಟ್‌ಕೇಸ್‌ವೊಂದರಲ್ಲಿ ಲಕ್ಷಾಂತರ ರೂಪಾಯಿ ನಗದು ಪತ್ತೆಯಾಗಿದೆ. ಸೂಟ್‌ಕೇಸ್ ಗಮನಿಸಿದ್ದ ಸ್ಥಳೀಯರೊಬ್ಬರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಪೊಲೀಸರು ಬಂದು ಪರಿಶೀಲನೆ ನಡೆಸಿದಾಗ ಅದರಲ್ಲಿ ನಗದು ಇರುವುದು ಪತ್ತೆಯಾಗಿತ್ತು ಎಂದು ಮೂಲಗಳು ಹೇಳಿವೆ.

ಬಸ್ ಆಂಧ್ರಪ್ರದೇಶದಿಂದ ನಗರಕ್ಕೆ ಬರುತ್ತಿತ್ತು. ಅದರಲ್ಲಿ ಪ್ರಯಾಣಿಸಿದ್ದ ವ್ಯಕ್ತಿಯೊಬ್ಬರು ಹಣವನ್ನು ತಂದಿದ್ದರು. ಅಮೃತಹಳ್ಳಿ ಜಂಕ್ಷನ್ ಬಳಿ ಕೆಲವರು ಬಸ್‌ನಿಂದ ಇಳಿದಿದ್ದರು. ಅವರು ತಮ್ಮ ಸೂಟ್‌ಕೇಸ್ ಇಳಿಸಿಕೊಳ್ಳುವ ಭರದಲ್ಲಿ ನಗದು ತುಂಬಿದ್ದ ಸೂಟ್‌ಕೇಸ್ ಸಹ ಇಳಿಸಿಕೊಂಡಿದ್ದರು. ಸೂಟ್‌ಕೇಸ್ ತಮ್ಮದಲ್ಲ ಎಂಬುದು ಗೊತ್ತಾದಾಗ ರಸ್ತೆ ಬದಿಯಲ್ಲೇ ಬಿಟ್ಟು ಹೋಗಿದ್ದರು ಎನ್ನಲಾಗಿದೆ.

'ಮೆಜೆಸ್ಟಿಕ್‌ನಲ್ಲಿ ಇಳಿದಾಗ ತನ್ನ ಸೂಟ್‌ಕೇಸ್ ನಾಪತ್ತೆ ಆಗಿರುವುದು ಆ ವ್ಯಕ್ತಿಯ ಗಮನಕ್ಕೆ ಬಂದಿತ್ತು. ತಕ್ಷಣವೇ ಬಸ್ ಕ್ಲೀನರ್‌ಗೆ ಮಾಹಿತಿ ನೀಡಿದ್ದರು. ಕ್ಲೀನರ್ ಜತೆಗೆ ಅಮೃತಹಳ್ಳಿ ಠಾಣೆಗೆ ಬಂದು ನಗದು ತುಂಬಿದ್ದ ಸೂಟ್‌ಕೇಸ್ ತೆಗೆದುಕೊಂಡು ಹೋಗಿದ್ದಾರೆ. ಬ್ಯಾಂಕ್‌ನಿಂದ ಹಣ ಡ್ರಾ ಮಾಡಿದ್ದಕ್ಕೆ ಸಂಬಂಧಿಸಿದ ದಾಖಲೆಗಳನ್ನೂ ಸಲ್ಲಿಸಿದರು. ದಾಖಲೆ ನೀಡಿದ ಬಳಿಕ ಹಣ ವಾಪಸ್ ನೀಡಲಾಗಿದೆ. ಮದುವೆ ಸಮಾರಂಭದ ಖರ್ಚಿಗೆ ಆಂಧ್ರಪ್ರದೇಶದಿಂದ ಹಣ ತಂದಿದ್ದಾಗಿ ಆ ವ್ಯಕ್ತಿ ಹೇಳಿಕೆ ನೀಡಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

## ಕಾಂಗ್ರೇಸ್ ಯಾವತ್ತು ಹಿಟ್ ಅಂಡ್ ರನ್ ಮಾಡಲ್ಲ

• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್ ಯಾವತ್ತು ಹಿಟ್ ಅಂಡ್ ರನ್ ಮಾಡೋದಿಲ್ಲ. ಕರ್ನಾಟಕದಲ್ಲಿ ಮತಗಳ್ಳತನದ ಬಗ್ಗೆ ದಾಖಲಾತಿ ಇದೆ. ರಾಹುಲ್ ಗಾಂಧಿ ಬಿಡುಗಡೆ ಮಾಡ್ತಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಸ್ಪಷ್ಟಪಡಿಸಿದ್ದಾರೆ.

ರಾಹುಲ್ ಗಾಂಧಿಯಿಂದ ಚುನಾವಣೆ ಆಯೋಗದ ವಿರುದ್ಧ ಪ್ರತಿಭಟನೆ ಮಾಡ್ತಿರೋ ವಿಚಾರವಾಗಿ ವಿಧಾನಸೌಧದಲ್ಲಿ ಪ್ರತಿಕ್ರಿಯೆ ನೀಡಿದರು. ರಾಹುಲ್ ಗಾಂಧಿ ಇಂದು ದೆಹಲಿಯಲ್ಲಿ ಸುದ್ದಿಗೋಷ್ಠಿ ಮಾಡ್ತಾರೆ. ದೆಹಲಿಯಲ್ಲಿ ಮತಗಳ್ಳತನ ದಾಖಲೆ ಬಿಡುಗಡೆ ಆಗುತ್ತದೆ. ಅದಾದ ಮೇಲೆ ಚುನಾವಣೆ ಆಯೋಗ ಯಾರ ನಿಯಂತ್ರಣದಲ್ಲಿ ಕೆಲಸ ಮಾಡ್ತಿದೆ ಎಂದು ನೀವೇ ತೀರ್ಮಾನ ತೆಗೆದುಕೊಳ್ಳಿ. ಇವತ್ತು ದಾಖಲೆ ಬಿಡುಗಡೆ ಮಾಡ್ತಾರೆ.

ಆ. 8ರಂದು ಕರ್ನಾಟಕದಲ್ಲಿ ದಾಖಲಾತಿ ಬಿಡುಗಡೆ ಮಾಡ್ತಾರೆ ಎಂದು ತಿಳಿಸಿದ್ದಾರೆ. ಪ್ರತಿಭಟನೆಗೆ ಬಿಜೆಪಿ ವಿರೋಧ ವಿಚಾರವಾಗಿ ಮಾತನಾಡಿದ ಅವರು, ನಾವು ಆರೋಪನೇ ಮಾಡಿಲ್ಲ. ಮತಗಳ್ಳತನ ಆಗಿದೆ ಸಾಕ್ಷಿ ಕೊಡುತ್ತೇವೆ ಎಂದು ಹೇಳ್ತಾ ಇದ್ದೇವೆ. ಬಿಜೆಪಿ ಅವರು ಯಾಕೆ ಚುನಾವಣೆ ಆಯೋಗದ ವಕ್ತಾರರ ರೀತಿ ಮಾತಾಡ್ತಾರೆ. ಇಡಿ, ಐಟಿ, ಎಲ್ಲಾ ಸಂಸ್ಥೆಗಳಿಗೂ ಬಿಜೆಪಿ ಅವರು ವಕ್ತಾರರಂತೆ ಆಗಿದ್ದಾರೆ. ಆಯಾ ಸಂಸ್ಥೆಗಳಿಗೆ ವಕ್ತಾರರು ಇದ್ದಾರೆ ಅವರು ಮಾತಾಡಲಿ. ಬಿಜೆಪಿ ಅವರು ಯಾಕೆ ಮಾತಾಡಬೇಕು. ಕಾಂಗ್ರೆಸ್ ಯಾವತ್ತು ಹಿಟ್ ಅಂಡ್ ರನ್ ಮಾಡಲ್ಲ. ಎಲ್ಲಾ ದಾಖಲಾತಿ ಇವೆ. ದಾಖಲಾತಿ ನಿಮ್ಮ ಮುಂದೆ ಇಡುತ್ತೇವೆ. ಅದರ ಬಗ್ಗೆ ನೀವೇ ನಿರ್ಧಾರ ಮಾಡಿ ಎಂದಿದ್ದಾರೆ.

## ಬೆಂಗಳೂರು ಟೆಲ್ ಅವೀವ್ ನಡುವೆ ವಿಮಾನ ಸಂಪರ್ಕ ಹೊಂದಲು ಇಸ್ರೇಲ್ ಉತ್ಸುಕ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಮತ್ತು ಟೆಲ್ ಅವೀವ್ ನಡುವೆ ವಿಮಾನ ಸಂಪರ್ಕ ಹೊಂದಲು ಇಸ್ರೇಲ್ ಉತ್ಸುಕವಾಗಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದರು. 'ಇದು ಕೇವಲ ಆರು ಗಂಟೆಗಳ ಪ್ರಯಾಣವಾಗಲಿದೆ' ಎಂದು ಅವರು ಭಾರತದ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿದರು.

ಶೀಘ್ರದಲ್ಲಿಯೇ ಭಾರತಕ್ಕೆ ಭೇಟಿ ನೀಡಲು ನಾನು ಬಯಸುತ್ತೇನೆ ಎಂದೂ ಅವರು ತಿಳಿಸಿದರು. ಭಾರತ ಅಮೆರಿಕ ದೇಶಗಳು ಸುಂಕ ಸಮಸ್ಯೆಯನ್ನು ಪರಿಹರಿಸಲು ಸಾಮಾನ್ಯ ನೆಲೆಯನ್ನು ಕಂಡುಕೊಳ್ಳಬೇಕು ಎಂದು ಅವರು ಪ್ರತಿಕ್ರಿಯಿಸಿದರು ಗಾಜಾವನ್ನು ವಶಪಡಿಸಿಕೊಳ್ಳಲು ಇಸ್ರೇಲ್ ಬಯಸುವುದಿಲ್ಲ. ಹಮಾಸ್ ಅನ್ನು ನಾಶಪಡಿಸುವುದು ನಮ್ಮ ಏಕೈಕ ಗುರಿ. ಬಳಿಕ ಗಾಜಾಪಟ್ಟಿಯನ್ನು ತಾತ್ಕಾಲಿಕ ಸರ್ಕಾರಕ್ಕೆ ಹಸ್ತಾಂತರಿಸುತ್ತೇವೆ. ಈ ಯುದ್ಧವನ್ನು ಆದಷ್ಟು ಬೇಗ ಅಂತ್ಯಗೊಳಿಸುತ್ತೇವೆ' ಎಂದು ಅವರು ಉತ್ತರಿಸಿದರು.

## ವಿಷ ಸೇವಿಸಿದ್ದ ಎಂಜಿನೀಯರ್ ವಿದ್ಯಾರ್ಥಿನಿ ಸಾವು

• ಉದಯವಾಹಿನಿ, ಬೆಂಗಳೂರು

ಸಹಪಾಠಿಯಿಂದ ಕಿರುಕುಳ ಕ್ಕೊಳಗಾಗಿ ವಿಷ ಸೇವಿಸಿ ಜೀವನ್ಮರಣ ಹೋರಾಟ ನಡೆಸುತ್ತಿದ್ದ 20 ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾಳೆ. ಜುಲೈ 31ರಂದು ಆಕೆಯನ್ನು ಅಪಹರಿಸಲಾಗಿತ್ತು ಎಂದು ವರದಿಯಾಗಿದೆ. ಐಶ್ವರ್ಯ ಮತ್ತು ಸಾಮ್ರಾಟ್ ನಗರದ ಹೊರವಲಯದಲ್ಲಿರುವ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳಾಗಿದ್ದರು. ಐಶ್ವರ್ಯ ಮಂಡ್ಯದ ಎನ್‌ಇಎಸ್ ಬಡಾವಣೆ ನಿವಾಸಿಯಾಗಿದ್ದರೆ, ಸಾಮ್ರಾಟ್ ಸಾತನೂರಿನ ನಿವಾಸಿ. ತನ್ನೊಂದಿಗೆ ಸಂಬಂಧ ಬೆಳೆಸುವಂತೆ ಐಶ್ವರ್ಯಳನ್ನು ಪೀಡಿಸುತ್ತಿದ್ದ. ಆಕೆಯನ್ನು ಬಲವಂತವಾಗಿ ಸಾತನೂರಿನಲ್ಲಿರುವ ತನ್ನ ಚಿಕ್ಕಮ್ಮನ ಮನೆಗೆ ಕರೆದೊಯ್ದಿದ್ದಾನೆ ಆಕೆ ನಿರಾಕರಿಸಿದಾಗ, ಆಕೆಗೆ ವಿಷ ನೀಡಿದ್ದಾನೆ ಎಂದು ಆರೋಪಿಸಲಾಗಿದೆ. ಆತನ ಕಿರುಕುಳ ಸಹಿಸಲಾಗದೆ, ಐಶ್ವರ್ಯಾ ವಿಷ ಕುಡಿದು, ನಂತರ ತನ್ನ ಪೋಷಕರಿಗೆ ಕರೆ ಮಾಡಿ ಸಾಮ್ರಾಟ್ ತನ್ನನ್ನು ಸಾತನೂರಿಗೆ ಕರೆತಂದಿದ್ದಾನೆ ಎಂದು ತಿಳಿಸಿದ್ದಾಳೆ. ಜುಲೈ 30 ರಂದು ಐಶ್ವರ್ಯ ಮನೆಯಿಂದ ಹೊರಬಂದಾಗ, ಸಾಮ್ರಾಟ್ ಅವಳನ್ನು ತನ್ನೊಂದಿಗೆ ಬರುವಂತೆ ಒತ್ತಾಯಿಸಿದ್ದ, ನಂತರ ಅವಳನ್ನು ತನ್ನ ಚಿಕ್ಕಮ್ಮನ ಮನೆಯಲ್ಲಿ ಇರಿಸಿದ್ದನು ಎಂದು ಹೇಳಲಾಗುತ್ತದೆ. ಐಶ್ವರ್ಯಾಳ ತಾಯಿ ಮತ್ತು ಸಹೋದರ ಸಾತನೂರಿನ ಬಸ್ ನಿಲ್ದಾಣದ ಬಳಿ ಆಕೆಯನ್ನು ಕಂಡು ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಗೆ ಕರೆದೊಯ್ದರು. ಪೊಲೀಸರು ಆಕೆಯೊಂದಿಗೆ ಮಾತನಾಡುತ್ತಿದ್ದಾಗ ಆಕೆ ವಾಂತಿ ಮಾಡಿಕೊಳ್ಳಲು ಪ್ರಾರಂಭಿಸಿದಳು. ನಂತರವೇ ಆಕೆ ವಿಷ ಸೇವಿಸಿರುವುದು ಅವರಿಗೆ ತಿಳಿದುಬಂದಿತು ಎಂದು ಅಧಿಕಾರಿ ಹೇಳಿದರು. ಆರೋಪಿಯನ್ನು ಇನ್ನೂ ಬಂಧಿಸಲಾಗಿಲ್ಲ.

## ಬೆಂಗಳೂರಿಗೆ ಫಿಲಿಪೈನ್ಸ್ ಅಧ್ಯಕ್ಷರ ಭೇಟಿ: ರಾಜ್ಯಪಾಲರ ಜೊತೆ ಸಂವಾದ



• ಉದಯವಾಹಿನಿ, ಬೆಂಗಳೂರು


ಫಿಲಿಪೈನ್ಸ್ ಗಣರಾಜ್ಯದ ಅಧ್ಯಕ್ಷ ಫರ್ಡಿನ್ಯಾಂಡ್ ಆರ್. ಮಾರ್ಕೋಸ್ ಜ್ಯೂ. ಅವರು ಬೆಂಗಳೂರಿಗೆ ಭೇಟಿ ನೀಡಿದರು. ಈ ವೇಳೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಭೇಟಿಯಾಗಿ ಸಂವಾದ ನಡೆಸಿದರು.

ಈ ವೇಳೆ ಡಿಸಿಎಂ ಡಿಕೆಶಿ ಉಪಸ್ಥಿತರಿದ್ದರು. ರಾಜ್ಯಪಾಲರು ಕರ್ನಾಟಕದ ಜನತೆ ಪರವಾಗಿ ಫಿಲಿಪೈನ್ಸ್ ಅಧ್ಯಕ್ಷರಿಗೆ ಸ್ವಾಗತ ಕೋರಿ, ಭಾರತ ಮತ್ತು ಫಿಲಿಪೈನ್ಸ್ ನಡುವಿನ ಬೆಳೆಯುತ್ತಿರುವ ಸ್ನೇಹ ಪೂರ್ಣ ಸಂಬಂಧಗಳಿಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಭೇಟಿಯು ಸ್ನೇಹಪೂರ್ಣ ಮತ್ತು ಸೌಹಾರ್ದಪೂರ್ಣವಾಗಿ ನೆರವೇರಿದ್ದು, ಉಭಯ ರಾಷ್ಟ್ರಗಳ ನಡುವಿನ ಸಹಕಾರ ಮತ್ತು ಬಾಂಧವ್ಯದ ಬಲವರ್ಧನಕ್ಕೆ ಉತ್ತೇಜನ ನೀಡಿದೆ.

# ಪ್ರಧಾನಿ ನರೇಂದ್ರ ಮೋದಿ ಸ್ವಾಗತ ಕೋರಲು ಬಿಜೆಪಿ ತಯಾರಿ

### ಸಂಗೊಳ್ಳಿ ರಾಯಣ್ಣ ರೈಲ್ವೆ ಸ್ಟೇಷನ್‌ನಲ್ಲಿ ಬೆಂಗಳೂರು–ಬೆಳಗಾವಿ ನಡುವಿನ ವಂದೇ ಭಾರತ್ ರೈಲಿಗೆ ಚಾಲನೆ

• ಉದಯವಾಹಿನಿ, ಬೆಂಗಳೂರು



ಬಹು ನಿರೀಕ್ಷಿತ ನಮ್ಮ ಮೆಟ್ರೋ ಹಳದಿ ಮಾರ್ಗಕ್ಕೆ ಹಸಿರು ನಿಶಾನೆ ತೋರಲು ಆಗಸ್ಟ್ 10 ರಂದು ಬೆಂಗಳೂರಿಗೆ ಪ್ರಧಾನಿ ನರೇಂದ್ರ ಮೋದಿ ಆಗಮಿಸುತ್ತಿದ್ದಾರೆ. ಮಾರ್ಗದ ಪ್ರತಿಯೊಂದು ನಿಲ್ದಾಣದಲ್ಲಿಯೂ ಪ್ರಧಾನಿ ಸ್ವಾಗತ ಕೋರಲು ಬಿಜೆಪಿ ತಯಾರಿ ಮಾಡಿಕೊಂಡಿದೆ.

ಮೆಟ್ರೋ ಹಳದಿ ಮಾರ್ಗವನ್ನು ಪ್ರಧಾನಿ ಮೋದಿಯವರು ಲೋಕಾರ್ಪಣೆ ಮಾಡಲಿದ್ದಾರೆ. ಇದರಿಂದ ಸುಮಾರು 8 ಲಕ್ಷ ಜನರಿಗೆ ಅನುಕೂಲವಾಗಲಿದೆ. ಸಂಗೊಳ್ಳಿ ರಾಯಣ್ಣ ರೈಲ್ವೆ ಸ್ಟೇಷನ್‌ನಲ್ಲಿ ಬೆಂಗಳೂರು–ಬೆಳಗಾವಿ ನಡುವಿನ ವಂದೇ ಭಾರತ್ ರೈಲಿಗೆ ಚಾಲನೆ ನೀಡಲಿದ್ದಾರೆ. ಆ ಬಳಿಕ ನಮ್ಮ ಮೆಟ್ರೋ ರಾಗಿಗುಡ್ಡ ನಿಲ್ದಾಣಕ್ಕೆ ತೆರಳಿ ಅಲ್ಲಿಂದ ಎಲೆಕ್ಟ್ರಾನಿಕ್ ಸಿಟಿವರೆಗೂ ಮೆಟ್ರೋದಲ್ಲಿ ಪ್ರಯಾಣ ಮಾಡಲಿದ್ದಾರೆ.

**ನಮ್ಮ ಮೆಟ್ರೋ ಹಳದಿ ಮಾರ್ಗದ ಎಲ್ಲಾ ನಿಲ್ದಾಣಗಳಲ್ಲಿಯೂ ಸ್ವಾಗತ:** ಮೇಖ್ರಿ ವೃತ್ತ, ಚಾಲುಕ್ಯ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತ, ಸೌತ್‌ಎಂಡ್ ವೃತ್ತ, ನಮ್ಮ ಮೆಟ್ರೋ ಹಳದಿ ಮಾರ್ಗದ ಎಲ್ಲಾ 16 ನಿಲ್ದಾಣಗಳ ಬಳಿ ಸಾವಿರಾರು ಕಾರ್ಯಕರ್ತರು ಪ್ರಧಾನಿಯವರನ್ನು ಸ್ವಾಗತಿಸಲಿದ್ದಾರೆ, ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮಾಹಿತಿ ನೀಡಿದ್ದಾರೆ.

**ರೋಡ್ ಶೋ ಕ್ಯಾನ್ಸಲ್:** ಪ್ರಧಾನಿ ಮೋದಿ ಆಗಮನ ಹಿನ್ನೆಲೆ ಬಿಜೆಪಿಯಿಂದ ಹಮ್ಮಿಕೊಂಡಿದ್ದ ರೋಡ್ ಶೋವನ್ನು ಸಮಯದ ಕೊರತೆಯಿಂದ ರದ್ದು ಮಾಡಲಾಗಿದೆ.

ಹೀಗಾಗಿ, ಪ್ರತಿ ನಿಲ್ದಾಣದಲ್ಲಿ ಬಿಜೆಪಿ ಕಾರ್ಯಕರ್ತರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಿ ಮೋದಿಗೆ ಸ್ವಾಗತ ಕೋರಲು ನಿರ್ಧರಿಸಲಾಗಿದೆ.

**ಮೋದಿ ಸಹಕಾರದಿಂದ ಮೆಟ್ರೋ ಜಾಲ 100 ಕಿ.ಮೀಗೆ:** ''ಬೆಂಗಳೂರಿನ ಮೆಟ್ರೋ ಸಂಪರ್ಕ ಜಾಲ ಸುಮಾರು 100 ಕಿ.ಮೀ. ತಲುಪಲು ಪ್ರಧಾನಿ ಮೋದಿಯವರ ಸರಕಾರ ಮತ್ತು ಅವರು ಬೆಂಗಳೂರಿನ ಮೂಲಸೌಕರ್ಯಕ್ಕೆ ಕೊಟ್ಟ ಆದ್ಯತೆಯೇ ಕಾರಣ ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದ್ದಾರೆ.

ಇತ್ತೀಚಿನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2014ರಲ್ಲಿ ಮೋದಿಯವರು ಪ್ರಧಾನಿ ಆಗುವುದಕ್ಕೆ ಮೊದಲು ಮೆಟ್ರೋ ಸಂಪರ್ಕ ಜಾಲವಿದ್ದುದು 7.5 ಕಿ.ಮೀ. ಮಾತ್ರ. ಆ.10ರಂದು ಹಳದಿ ಮಾರ್ಗದ ಉದ್ಘಾಟನೆ ನಂತರ ಮೆಟ್ರೋ ಸಂಪರ್ಕ ಜಾಲ 100 ಕಿ.ಮೀ.ಗೆ ತಲುಪಲಿದೆ. ದಿಲ್ಲಿಬಳಿಕ ಅತಿ ಹೆಚ್ಚು ಸಂಪರ್ಕ ಜಾಲವಿರುವ ಹಾಗೂ ವಿಸ್ತರಣೆಯಾಗುತ್ತಿರುವ ಮೆಟ್ರೋ ನಮ್ಮ ಮೆಟ್ರೋ, ಎಂದು ತಿಳಿಸಿದರು. ಪ್ರಧಾನಿಯವರನ್ನು ಯಾರು ಕರೆಸಿದರು ಎಂಬುದಕ್ಕೆ ಉತ್ತರಿಸುವ ಅಗತ್ಯವಿಲ್ಲ.

**ಸಿಎಂ, ಡಿಸಿಎಂ ತಲೆ ಕೆಡಿಸಿಕೊಂಡಿಲ್ಲ**

**ಡಿಸಿಎಂ ಅವರು ಹಳದಿ ಮಾರ್ಗದಲ್ಲಿ ಸಂಚರಿಸಿದ್ದಾರೆ. ಇದು ಕೇಂದ್ರ ಹಾಗೂ ರಾಜ್ಯ ಸರಕಾರದ ಸಮಾನ ಪಾಲುದಾರಿಕೆಯ ಯೋಜನೆಯಾಗಿದ್ದು, ರಾಜ್ಯ ಸರಕಾರದ್ದೂ ದೊಡ್ಡ ಕೊಡುಗೆ ಇದೆ. ಕಳೆದ ಎರಡೂವರೆ ವರ್ಷಗಳಲ್ಲಿಸಿಎಂ, ಡಿಸಿಎಂ ಹಳದಿ ಮಾರ್ಗದ ಬಗ್ಗೆ ಒಂದು ದಿನವೂ ತಲೆ ಕೆಡಿಸಿಕೊಂಡಿಲ್ಲ. ಪ್ರಧಾನಿಯವರು ಉದ್ಘಾಟನೆಗೆ ಆಗಮಿಸುತ್ತಿದ್ದಾರೆ ಎನ್ನುತ್ತಿದ್ದಂತೆ ಪ್ರಚಾರ ಗಿಟ್ಟಿಸಿಕೊಳ್ಳಲು ಟೂರ್ ಹೊಡೆಯಲು ಶುರು ಮಾಡಿದ್ದಾರೆ ಎಂದು ತಿರುಗೇಟು ನೀಡಿದರು.**

ಮೆಟ್ರೋ ಶೀಘ್ರವಾಗಿ ಉದ್ಘಾಟನೆಯಾಗಬೇಕು, ವಿಳಂಬ ಸಲ್ಲದು ಎಂಬ ಕಾರಣಕ್ಕೆ ಪ್ರಧಾನಿಯವರು ಬರುತ್ತಿದ್ದಾರೆ. ಅವರು ಕರ್ನಾಟಕ, ದಿಲ್ಲಿಮಾತ್ರವಲ್ಲಭಾರತದ ಪ್ರಧಾನಿ. ಅವರ ಸ್ವಾಗತಕ್ಕೆ ಎಲ್ಲರೂ ಸಜ್ಜಾಗಿದ್ದಾರೆ, ಎಂದು ಹೇಳಿದರು.

## ಗ್ರಾಮ ಸಭೆ, ವಾರ್ಡ್‌ಸಭೆ ತಂತ್ರಾಂಶದಲ್ಲಿ ದಾಖಲು ಮಾಡಿ

• ಉದಯವಾಹಿನಿ, ಬೆಂಗಳೂರು



**ರಾಜ್ಯದ 5ನೇ ಹಣಕಾಸು ಆಯೋಗದ ಅಧ್ಯಕ್ಷ ಸಿ. ನಾರಾಯಣಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕೃತಿ ಕುರಿತು ಕೇರಳ ರಾಜ್ಯದ ನಿವೃತ್ತ ಮುಖ್ಯ ಕಾರ್ಯದರ್ಶಿ ಎಸ್.ಎಂ. ವಿಜಯಾನಂದ್ ಮಾತನಾಡಿದರು. ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಸಿ. ನಾಗಣ್ಣ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಪ್ರಮೋದ್ ಹೆಗಡೆ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ತಜ್ಞ ಸದಸ್ಯ ಡಿ.ಆರ್. ಪಾಟೀಲ, ಕರ್ನಾಟಕ ರಾಜ್ಯ ಪಂಚಾಯತ್ ಪರಿಷತ್ ಅಧ್ಯಕ್ಷ ವಿ.ವೈ. ಘೋರ್ಪಡೆ ಉಪಸ್ಥಿತರಿದ್ದರು.**

ಗ್ರಾಮ ಪಂಚಾಯಿತಿಗಳು ನಡೆಸುವ ತಿಂಗಳ ಸಭೆ, ಗ್ರಾಮ ಸಭೆ, ವಾರ್ಡ್‌ಸಭೆಗಳು ಕೂಡ 'ಪಂಚತಂತ್ರ' ತಂತ್ರಾಂಶದಲ್ಲಿ ದಾಖಲಾಗಬೇಕು. ಅದಕ್ಕೆ ಬೇಕಾದ ವೇದಿಕೆಗಳನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಪಂಚಾಯತ್‌ರಾಜ್ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಉಮಾ ಮಹಾದೇವನ್ ಹೇಳಿದರು.

5ನೇ ಹಣಕಾಸು ಆಯೋಗದ ನಿವೃತ್ತ ಸಮಾಲೋಚಕ ಎಂ.ಕೆ. ಕೆಂಪೇಗೌಡ ಅವರ ಕೃತಿ ಗ್ರಾಮ ಸುರಾಜ್ಯ ಇಂಗ್ಲಿಷ್ ಅವತರಣಿಕೆ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಕರ್ನಾಟಕವು ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಆದರೆ, ಇನ್ನೂ ಅನೇಕ ಕೆಲಸಗಳು ಆಗಬೇಕಿವೆ.

ಗ್ರಾಮ ಪಂಚಾಯಿತಿಗಳಲ್ಲಿ 82 ಸೇವೆಗಳನ್ನು ನೀಡಲಾಗುತ್ತಿದೆ. ಇನ್ನೂ 36 ಸೇವೆಗಳು ಸದ್ಯದಲ್ಲಿಯೇ ಸೇರ್ಪಡೆಗೊಳ್ಳಲಿವೆ. ಈ ವರ್ಷದ ಅಂತ್ಯಕ್ಕೆ 150 ಸೇವೆಗಳನ್ನು ಒದಗಿಸುವುದು ನಮ್ಮ ಗುರಿ' ಎಂದು ಹೇಳಿದರು.

ಪಂಚಾಯತ್ ರಾಜ್ ಇಲಾಖೆಯು ಇತರ ಇಲಾಖೆಗಳೊಂದಿಗೆ ಸಂವಹನ ಸಾಧಿಸಿ ಕೆಲಸ ಮಾಡಬೇಕಿದೆ. ಅದಕ್ಕಾಗಿ ಈಗಾಗಲೇ ಆರೋಗ್ಯ, ಕೃಷಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ತೋಟಗಾರಿಕೆ ಸೇರಿದಂತೆ 11 ಇಲಾಖೆಗಳನ್ನು ಸೇರಿಸಿ ನೀಲನಕ್ಷೆ ಮಾಡಲಾಗಿದೆ ಎಂದರು.

ಗ್ರಾಮ ಪಂಚಾಯಿತಿಗಳು ಸಕ್ರಿಯವಾಗಿ ಕೆಲಸ ಮಾಡಿದರೆ ಬಾಲ್ಯ ವಿವಾಹ ಸಹಿತ ಅನೇಕ ಸಾಮಾಜಿಕ ಪಿಡುಗುಗಳನ್ನು ದೂರ ಮಾಡಿ, ಗ್ರಾಮಗಳ ಅಭಿವೃದ್ಧಿ ಮಾಡಬಹುದು. ನಾಡ ಕಚೇರಿ, ತಾಲ್ಲೂಕು ಕಚೇರಿಗಳಿಗೆ ಜನರ ಹೋಗುವ ಅಗತ್ಯವಿಲ್ಲ, ಗ್ರಾಮದಲ್ಲೇ ಕೆಲಸಗಳಾಗುವಂತೆ ಮಾಡಲಾಗಿದೆ ಎಂದು ಹೇಳಿದರು.

## ಎಂಟು ವರ್ಷಗಳ ಬಳಿಕ ಆರೋಗ್ಯ ಇಲಾಖೆಯಲ್ಲಿ ಪಾರದರ್ಶಕ ವರ್ಗಾವಣೆ..!

• ಉದಯವಾಹಿನಿ, ಬೆಂಗಳೂರು

ಎಂಟು ವರ್ಷಗಳ ಬಳಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎಲ್ಲಾ ಸಿಬ್ಬಂದಿ ಉದ್ಯೋಗಿಗಳ ವರ್ಗಾವಣೆಯನ್ನು ಕೌನ್ಸೆಲಿಂಗ್ ಮೂಲಕ ಪಾರದರ್ಶಕವಾಗಿ ನಡೆಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಹೇಳಿದ್ದಾರೆ.

ಆರೋಗ್ಯ ಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂನ್ 19 ರಿಂದ ಜುಲೈ 3 ರವರೆಗೆ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಪ್ರಕ್ರಿಯೆ ನಡೆಸಲಾಗಿದ್ದು, 5,676 ಅಧಿಕಾರಿಗಳು ಸಿಬ್ಬಂದಿಯನ್ನು ವರ್ಗಾಯಿಸಲಾಗಿದೆ. ಇವರಲ್ಲಿ 21 ಮಂದಿ ಗ್ರೂಪ್ ಎ, 15 ಮಂದಿ ಗ್ರೂಪ್ ಬಿ, 4,046 ಮಂದಿ ಗ್ರೂಪ್ ಸಿ ಮತ್ತು 680 ಮಂದಿ ಗ್ರೂಪ್ ಡಿ ಗೆ ಸೇರಿದ್ದಾರೆ ಎಂದು ಹೇಳಿದರು.

ಆರೋಗ್ಯ ಇಲಾಖೆಯ ವರ್ಗಾವಣೆ ಪ್ರಕ್ರಿಯೆಯನ್ನು ತ್ವರಿತ ಹಾಗೂ ಪಾರದರ್ಶಕವಾಗಿ ನಡೆಸಿದ್ದು, ಬೆಂಗಳೂರಿನ ಆಯಕಟ್ಟಿನ ಜಾಗದಲ್ಲಿ ಉಳಿದಿದ್ದ ಹಲವು ಅಧಿಕಾರಿಗಳನ್ನು ಜಿಲ್ಲೆಯ ಹೊರಗೆ ಕಳುಹಿಸಿರುವುದು ಸೇರಿದಂತೆ ಒಟ್ಟು 5,676 ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ತಾಲ್ಲೂಕು ಆಸ್ಪತ್ರೆಗಳ ತಾಯಿ, ಮಕ್ಕಳ ಆರೈಕೆ ವಿಭಾಗದಲ್ಲಿ ದೀರ್ಘಕಾಲದಿಂದ ಖಾಲಿಯಿದ್ದ ಹುದ್ದೆಗಳ ಭರ್ತಿಗೆ ಆದ್ಯತೆ ನೀಡಲಾಗಿದೆ. ಪ್ರತಿ ತಾಲ್ಲೂಕು ಆಸ್ಪತ್ರೆಯಲ್ಲಿ ತಲಾ ಒಬ್ಬರು ಸ್ತ್ರೀರೋಗ ತಜ್ಞರು, ಅರವಳಿಕೆ ತಜ್ಞರು ಮತ್ತು ಮಕ್ಕಳ ತಜ್ಞರು ಇರುವಂತೆ ವರ್ಗಾವಣೆ ಪ್ರಕ್ರಿಯೆ ಮಾಡಲಾಗಿದೆ ಎಂದು ತಿಳಿಸಿದರು.

**ಅಲ್ಲದೇ ವಿಶೇಷವಾಗಿ ಪ್ರತಿಯೊಂದು ತಾಲ್ಲೂಕು ಆಸ್ಪತ್ರೆಗಳಲ್ಲಿ ಇಬ್ಬರು ಸ್ತ್ರೀರೋಗ ತಜ್ಞರು, ಮಕ್ಕಳ ತಜ್ಞರು ಅರವಳಿಕೆ ತಜ್ಞರು ನೇಮಕ ಮಾಡಲು ಕ್ರಮ ವಹಿಸಲಾಗುತ್ತಿದೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಅನುಮೋದನೆ ಪಡೆಯಲಾಗುವುದು.**



**ಇದರಿಂದಾಗಿ ತಾಲ್ಲೂಕು ಆಸ್ಪತ್ರೆಗಳಲ್ಲಿ ದಿನದ 24 ಗಂಟೆ ವೈದ್ಯರು ಲಭ್ಯತೆಯಿರಲಿದೆ ಎಂದು ಅವರು ಹೇಳಿದರು.**

## ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಆಗ್ರಹ

• ಉದಯವಾಹಿನಿ, ಬೆಂಗಳೂರು

ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ ಎಂಬ ಕಾರಣಕ್ಕೆ ಸಾರಿಗೆ ನಿಗಮಗಳು 30,000 ನೌಕರರಿಗೆ ನೀಡಿರುವ ಆಪಾದನಾ ಪತ್ರ ಮತ್ತು ಕಾರಣ ಕೇಳಿರುವ ನೋಟಿಸ್‌ಗಳನ್ನು ರದ್ದು ಮಾಡಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಆಗ್ರಹಿಸಿದೆ.

ಜಂಟಿ ಕ್ರಿಯಾ ಸಮಿತಿ ಈ ಬಗ್ಗೆ ಸಭೆ ನಡೆಸಿದೆ. 'ಮುಷ್ಕರವನ್ನು ಹಿಂಪಡೆದ ಮೇಲೆ ಇಂಥ ಸೇಡಿನ ಕ್ರಮಗಳನ್ನು ಕೈಗೊಂಡಿರುವುದು ಸರಿಯಲ್ಲ. ಈ ಕ್ರಮ ಕೈಗಾರಿಕಾ ಶಾಂತಿಗೆ ಧಕ್ಕೆ ತರುವುದಲ್ಲದೇ, ನೌಕರರನ್ನು ಹತಾಶೆಗೆ ದೂಡುತ್ತದೆ. ನೈತಿಕ ಸ್ಥೈರ್ಯ ಕುಸಿಯಲು ಕಾರಣವಾಗುತ್ತದೆ. ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯುಆರ್‌ಟಿಸಿ, ಕೆಕೆಆರ್‌ಟಿಸಿ ಈ ನೋಟಿಸ್‌ಗಳನ್ನು ರದ್ದು ಮಾಡಬೇಕು ಎಂದು ಕಾರ್ಮಿಕ ಆಯುಕ್ತರನ್ನು ಒತ್ತಾಯಿಸಲಾಯಿತು. ಕೈಗಾರಿಕಾ ಶಾಂತಿ ನೆಲೆಸಿರುವುದರಿಂದ ಕ್ರಮ ಅನಗತ್ಯ ಎಂದು ಕಾರ್ಮಿಕ ಆಯುಕ್ತರು ನಿಗಮಗಳಿಗೆ ಸೂಚನೆ ನೀಡಿದ್ದಾರೆ. ನಿಗಮಗಳ ಆಡಳಿತ ಮಂಡಳಿ ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಜಂಟಿ ಕ್ರಿಯಾ ಸಮಿತಿಯ ಸಂಘಟನೆಗಳು ಒತ್ತಾಯಿಸಿವೆ. ನೌಕರರಿಗೆ ನೋಟಿಸ್ ನೀಡುವ ಉತ್ಸಾಹ ನೌಕರರ ಬೇಡಿಕೆಗಳನ್ನು ಇತ್ಯರ್ಥಪಡಿಸಲು ತೋರಿಸಿದ್ದರೆ ಮುಷ್ಕರ ಮಾಡುವ ಸನ್ನಿವೇಶ ಬರುತ್ತಿರಲಿಲ್ಲ ಎಂದು ಸಮಿತಿಯ ಪದಾಧಿಕಾರಿಗಳು ಟೀಕಿಸಿದ್ದಾರೆ. ವಿಧಾನಸಭೆಯ ಅಧಿವೇಶನ ಮುಗಿದ ಬಳಿಕ ಸಭೆ ಕರೆಯುವುದಾಗಿ ಸಿದ್ದರಾಮಯ್ಯ ತಿಳಿಸಿರುವುದರಿಂದ ಮುಂದಿನ ರಾಜಿ ಸಂಧಾನ ಸಭೆ ಅ.28ರಂದು ನಿಗದಿಯಾಗಿದೆ ಎಂದು ತಿಳಿಸಿದ್ದಾರೆ.




ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್‌ರ ಫೆಡರೇಷನ್ ಅಧ್ಯಕ್ಷ ಎಚ್.ವಿ. ಅನಂತಸುಬ್ಬರಾವ್, ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾ ಮಂಡಳಿ ಅಧ್ಯಕ್ಷ ಬಿ. ಜಯದೇವರಾಜೇ ಅರಸು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಫೆಡರೇಷನ್ ಸಿಐಟಿಯು ಅಧ್ಯಕ್ಷ ಎಚ್.ಡಿ. ರೇವಪ್ಪ, ಕೆಎಸ್‌ಆರ್‌ಟಿಸಿ ಎಸ್‌ಸಿ. ಎಸ್‌ಟಿ ಎಂಪ್ಲಾಯಿಸ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ರವಿಪ್ರಕಾಶ್, ಪರಿಶಿಷ್ಟ ಜಾತಿ/ಪಂಗಡಗಳ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸೋಮಣ್ಣವಿ., ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘದ ಅಧ್ಯಕ್ಷ ಜಗದೀಶ್ ಕೆ.ಆರ್.. ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ವಿಜಯಭಾಸ್ಕರ್ ಉಪಸ್ಥಿತರಿದ್ದರು.

## 14 ವರ್ಷದ ಬಾಲಕ ಗಂಧಾರ್ ಡೆತ್ ನೋಟ್ ಬರೆದು ಆತ್ಮಹತ್ಯೆ

• ಉದಯವಾಹಿನಿ, ಬೆಂಗಳೂರು

3 ದಿನಗಳ ಹಿಂದೆ ಬೆಂಗಳೂರಿನ ಚೆನ್ನಮ್ಮ ಕೆರೆ ಅಚ್ಚುಕಟ್ಟು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 14 ವರ್ಷದ ಬಾಲಕ ಗಂಧಾರ್ ಡೆತ್ ನೋಟ್ ಬರೆದು ಆತ್ಮಹತ್ಯೆ ಮಾಡಿಕೊಂಡಿದ್ದ ಮನೆಯಲ್ಲಿ ಯಾವುದೇ ಸಮಸ್ಯೆ ಇರಲಿಲ್ಲ, ಅಮ್ಮ ಅಮ್ಮ ಅಣ್ಣ ಎಲ್ಲರ ಜೊತೆಗೂ ಚೆನ್ನಾಗಿಯೇ ಇದ್ದ ಆ ಬಾಲಕ ಏಕಾಏಕಿ ನೇಣಿಗೆ ಶರಣಾಗಿದ್ದು ಎಲ್ಲರಿಗೂ ಶಾಕ್ ಆಗಿತ್ತು. ಈ ಪ್ರಕರಣದ ತನಿಖೆಗೆ ಇಳಿದಾಗ ಹಲವರು ಶಾಕಿಂಗ್ ವಿಚಾರಗಳು ಮುನ್ನೆಲೆಗೆ ಬಂದಿವೆ.

ರಾತ್ರಿ ಎಲ್ಲರ ಜೊತೆಗೆ ಊಟ ಮಾಡಿ ತನ್ನ ಪ್ರೀತಿಯ ನಾಯಿ ರಾಕಿ ಜೊತೆಗೆ ಮಲಗಿದ್ದ ಗಂಧಾರ್ ಬೆಳಗಿನ ವೇಳೆ ತನ್ನ ಕೊಠಡಿಯಲ್ಲಿ ನೇಣಿಗೆ ಶರಣಾಗಿದ್ದ. ನೇಣಿಗೆ ಶರಣಾಗುವ ಮೊದಲು ಒಂದು ಡೆತ್ ನೋಟ್ ಬರೆದಿದ್ದ. ಅದರಲ್ಲಿ ತಂದೆ ತಾಯಿಯನ್ನು ಉದ್ದೇಶಿಸಿ ನೀವು ನನ್ನನ್ನು ಹದಿನಾಲ್ಕು ವರ್ಷ ಚೆನ್ನಾಗಿಯೇ ಸಾಕಿದ್ದೀರಿ. ನಿಮ್ಮ ಜೊತೆಗೆ ನಾನು ತುಂಬಾ ಖುಷಿಯಾಗಿದ್ದೆ. ಆದರೆ ನಾನು ಹೋಗುವ ಸಮಯ ಬಂದಿದೆ. ನೀವು ಈ ಪತ್ರ ಓದುವ ವೇಳೆಗೆ ನಾನು ಸ್ವರ್ಗದಲ್ಲಿ ಇರುತ್ತೇನೆ ಎಂದು ಡೆತ್ ನೋಟ್ ಬರೆದಿದ್ದ. ಈ ಡೆತ್ ನೋಟ್ ನೋಡಿದ ಎಲ್ಲರಿಗೂ ಶಾಕ್ ಆಗಿತ್ತು. ಅದರಲ್ಲಿ ಯಾವುದೇ ನೆಗಟಿವ್ ವಿಚಾರಗಳಿಲ್ಲ, ಯಾರ ಮೇಲೂ ಆರೋಪಗಳಿಲ್ಲ. ಯಾವುದೇ ಸಮಸ್ಯೆ ಕೂಡ ಇಲ್ಲ. ಹೀಗಿದ್ದರೂ ಈ ಬಾಲಕ ಇಷ್ಟು ಚಿಕ್ಕವಯಸ್ಸಿಗೆ ಯಾಕೆ ಇಷ್ಟು ದೊಡ್ಡ ನಿರ್ಧಾರ ತೆಗೆದುಕೊಂಡ ಎಂಬ ಪ್ರಶ್ನೆ ಎದ್ದಿತ್ತು.



ಪ್ರಕರಣ ದಾಖಲಿಸಿ ಪೊಲೀಸರು ತನಿಖೆಗೆ ಇಳಿದಾಗ ಹಲವು ವಿಚಾರಗಳು ಬೆಳಕಿಗೆ ಬಂದಿವೆ. ಗಂಧಾರ್ ಜಪಾನೀಸ್ ಭಾಷೆಯಲ್ಲಿ ಬಿಡುಗಡೆಯಾಗಿ ವಿಶ್ವಾದ್ಯಂತ ಪ್ರಸಿದ್ಧಿ ಪಡೆದಿದ್ದ ಡೆತ್ ನೋಟ್ ವೆಬ್ ಸೀರಿಸ್ ಎಲ್ಲಾ ಸಂಚಿಕೆಯನ್ನು ತಪ್ಪದೇ ನೋಡುತ್ತಿದ್ದ. ಅಷ್ಟೇ ಅಲ್ಲದೇ ಆ ವೆಬ್ ಸಿರಿಸ್ ಬರುವ ಒಂದು ಪಾತ್ರವನ್ನು ಗಂಧಾರ್ ತನ್ನ ರೂಮಿನಲ್ಲಿ ಬಿಡಿಸಿದ್ದ.

## ಹೆಂಡತಿಗಾಗಿ ಕಳ್ಳ ಪೊಲೀಸ್ ಆದ, ಕಾನ್ಸ್‌ಟೇಬಲ್ ಸಸ್ಪೆಂಡ್ ಆದ!

• ಉದಯವಾಹಿನಿ, ಬೆಂಗಳೂರು

ಕಳ್ಳತನ ಆರೋಪದಲ್ಲಿ ಪೊಲೀಸ್ ಕಸ್ಟಡಿಯಲ್ಲಿದ್ದವನು ಹೆಂಡತಿಗೆ ಖುಷಿ ಪಡಿಸೋಕೆ ಪೊಲೀಸರ ಸಮವಸ್ತ್ರ ಧರಿಸಿ ವಿಡಿಯೋ ಕಾಲ್‌ನಲ್ಲಿ ಪೋಸ್ ಕೊಟ್ಟ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ಇದು ಕರ್ತವ್ಯ ನಿರ್ಲಕ್ಷ್ಯ ಎಂದು ಪರಿಗಣಿಸಿ ಪೊಲೀಸ್ ಕಾನ್ಸ್‌ಟೇಬಲ್‌ನನ್ನ ಅಮಾನತ್ತುಗೊಳಿಸಲಾಗಿದೆ. ಗೋವಿಂದಪುರ ಪೊಲೀಸ್ ಠಾಣೆಯ ಕಾನ್ಸ್‌ಟೇಬಲ್ ಸೋನಾರೆ ಹೆಚ್.ಆರ್ ಅಮಾನತ್ತುಗೊಂಡ ಕಾನ್ಸ್‌ಟೇಬಲ್. ತನಿಖೆಯ ವೇಳೆ ಕಾನ್ಸ್‌ಟೇಬಲ್ ಸೋನಾರೆ ಸಮವಸ್ತ್ರವನ್ನು ಕಳ್ಳ ಧರಿಸಿದ್ದ ಸ್ಕ್ರೀನ್‌ಶಾಟ್ ಬಹಿರಂಗಗೊಂಡಿದೆ. ತದನಂತರವೇ ಕಾನ್ ಸ್ಟೇಬಲ್‌ನನ್ನ ಅಮಾನತುಗೊಳಿಸಲಾಗಿದೆ.

# ರಾಜ್ಯಮಟ್ಟದ ಶಿಕ್ಷಕರ ವರ್ಗಾವಣೆ: ಪರಿಷ್ಕೃತ ವೇಳಾಪಟ್ಟಿ ಪ್ರಕಟ

### ಸರಕಾರಿ ಶಾಲಾ ಶಿಕ್ಷಕರ ವರ್ಗಾವಣೆಯ ಪರಿಷ್ಕೃತ ವೇಳಾಪಟ್ಟಿ–2 ಬಿಡುಗಡೆ ಮಾಡಲಾಗಿದೆ, ಶ್ರೇಣೀಕರಣ ಪ್ರಕ್ರಿಯೆ

• ಉದಯವಾಹಿನಿ, ಬೆಂಗಳೂರು

ತಾಂತ್ರಿಕ ಕಾರಣಗಳಿಂದ ತಡೆ ನೀಡಿದ್ದ ಸರಕಾರಿ ಶಾಲಾ ಶಿಕ್ಷಕರ ವರ್ಗಾವಣೆಯ ಪರಿಷ್ಕೃತ ವೇಳಾಪಟ್ಟಿ–2 ಅನ್ನು ಶಾಲಾ ಶಿಕ್ಷಣ ಇಲಾಖೆಯು ಬಿಡುಗಡೆ ಮಾಡಿದೆ. ಈ ಮೊದಲು ವೇಳಾಪಟ್ಟಿಯನ್ನು ಬಿಡುಗಡೆ ಮಾಡಿ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಲು ಮುಂದಾಗಿತ್ತು. ತಾಂತ್ರಿಕ ಸಮಸ್ಯೆ ಎದುರಾದ ಹಿನ್ನೆಲೆಯಲ್ಲಿ ಪರಿಷ್ಕರಣೆ ಮಾಡಿ ಇದೀಗ ಪರಿಷ್ಕೃತ ವೇಳಾಪಟ್ಟಿ ಬಿಡುಗಡೆ ಮಾಡಿದೆ.

ಅ ಪ್ರಕಾರವಾಗಿ, ಶುಕ್ರವಾರದಿಂದಲೇ ವರ್ಗಾವಣೆ ಪ್ರಕ್ರಿಯೆಗೆ ಚಾಲನೆ ಸಿಕ್ಕಿದೆ. ಆ.12ರಂದು ಹೆಚ್ಚುವರಿ ಶಿಕ್ಷಕರ ಮರು ಹೊಂದಾಣಿಕೆ ಪರಿಷ್ಕೃತ ಕರಡು ಪಟ್ಟಿ ಪ್ರಕಟಣೆ ಮಾಡಬೇಕಿದೆ. ಶಿಕ್ಷಕರ ಸಮರ್ಪಕ ಮರು ಹಂಚಿಕೆ ಕೌನ್ಸೆಲಿಂಗ್ ಮತ್ತು ಕೋರಿಕೆ, ಪರಸ್ಪರ ವರ್ಗಾವಣೆ, ನಿರ್ದಿಷ್ಟಪಡಿಸಿದ ಮತ್ತು ತಾಂತ್ರಿಕ ಸಹಾಯಕರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ವರ್ಗಾವಣೆ ಕ್ರಮಗಳು, ಸಾಮಾನ್ಯ ಕೋರಿಕೆ, ಪರಸ್ಪರ ವರ್ಗಾವಣೆ, ಜಿಲ್ಲಾಹಂತದ ವರ್ಗಾವಣೆ ಕೌನ್ಸೆಲಿಂಗ್ ಕ್ರಮ, ವಿಭಾಗೀಯ ಹಂತದ ವರ್ಗಾವಣೆ ಕ್ರಮಗಳು, ಅಂತರ ವಿಭಾಗೀಯ ಹಂತದ ವರ್ಗಾವಣೆ ಕ್ರಮಗಳು ಈ ಎಲ್ಲವಿಭಾಗಗಳಿಗೂ ಪ್ರತ್ಯೇಕ ಕಾಲಮಿತಿ ನಿಗದಿಪಡಿಸಿದೆ.

ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿರುವ ಹಾಗೂ ಇಲಾಖಾ ಶಿಸ್ತು ಕ್ರಮ ಎದುರಿಸುತ್ತಿರುವ ಶಿಕ್ಷಕರ ಅರ್ಜಿಗಳು ವರ್ಗಾವಣೆ ಕೌನ್ಸೆಲಿಂಗ್‌ಗೆ ಅರ್ಹವಾಗಿರುವುದಿಲ್ಲ ಎಂದು ಇಲಾಖೆ ಸ್ಪಷ್ಟಪಡಿಸಿದೆ. ಪ್ರಾಥಮಿಕ, ಪ್ರೌಢಶಾಲಾ ಸಹ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು ತತ್ಸಮಾನ ವೃಂದದ ನಿರ್ದಿಷ್ಟಪಡಿಸಿದ ಹುದ್ದೆಗಳನ್ನು ಲಿಖಿತ ಪರೀಕ್ಷೆ ನಡೆಸುವ ಮೂಲಕ ಭರ್ತಿ ಮಾಡಲಿದ್ದು, ಇದರ ವೇಳಾಪಟ್ಟಿಯನ್ನು ಕೂಡ ಇಲಾಖೆ ಬಿಡುಗಡೆ ಮಾಡಿದೆ. ಈ ಪ್ರಕ್ರಿಯೆಯು ಆ.13ರಿಂದ ಆರಂಭವಾಗಿ ಸೆ.3ರವರೆಗೆ ನಡೆಯಲಿದೆ.



**ಹೆಚ್ಚುವರಿಗೆ ಮಾನದಂಡಗಳು:** 2024–25ನೇ ಸಾಲಿನಲ್ಲಿ ರಾಜ್ಯದ ಸರಕಾರಿ ಪ್ರೌಢಶಾಲೆಗಳಲ್ಲಿ ಅವಶ್ಯಕ, ಹೆಚ್ಚುವರಿ ಹುದ್ದೆಗಳ ಮರು ಹಂಚಿಕೆಯ ಪ್ರಕ್ರಿಯೆಯ ಪರ್ಯಾಯ ವರ್ಷವೂ ಮಂಜೂರಾದ ಹುದ್ದೆಗಳು ಮತ್ತು ಅದರಲ್ಲಿಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು ರಾಜ್ಯ ಸರಕಾರ ಕಾಲಕಾಲಕ್ಕೆ ನಿಗದಿಪಡಿಸಿದ ಶಿಷ್ಯ – ಶಿಕ್ಷಕ ಅನುಪಾತದ ಆಧಾರದ ಮೇಲೆ ಸಮರ್ಪಕವಾಗಿ ಮರು ಹಂಚಿಕೆ ಮಾಡಲು ನಿರ್ಧರಿಸಿದೆ.

70ಕ್ಕಿಂತ ಕಡಿಮೆ ವಿದ್ಯಾರ್ಥಿಗಳನ್ನು 1ನೇ ವಿಭಾಗ, 71–140 ಎರಡನೇ ವಿಭಾಗ, 141–210 ಮೂರನೇ ವಿಭಾಗ, 211–280 ನಾಲ್ಕನೇ ವಿಭಾಗ, 281–350 ಐದನೇ ವಿಭಾಗಕ್ಕೆ ಪರಿಗಣಿಸಬೇಕು. ಮಂಜೂರಾದ ಒಟ್ಟು ವೃಂದ ಬಲ 52,360 ಹುದ್ದೆಗಳಲ್ಲಿ ಪ್ರತಿ ಎರಡು ವರ್ಷಗಳಿಗೊಮ್ಮೆ ಮಕ್ಕಳ ಹಾಗೂ ಶಿಕ್ಷಕರ ಅನುಪಾತಕ್ಕನುಗುಣವಾಗಿ ಎಸ್‌ಎಟಿಎಸ್ ತಂತ್ರಾಂಶದ ಆಧಾರದ ಮೇಲೆ ಸರಕಾರಿ ಪ್ರೌಢಶಾಲೆಗಳಲ್ಲಿ ವೃಂದ ಬಲದ ಜಿಲ್ಲಾವಾರು ಹಂಚಿಕೆ ಮಾಡಬೇಕಾಗಿರುವ ನಿರ್ವಹಣೆ ಅಕಾರವನ್ನು ಆಯುಕ್ತರಿಗೆ ನೀಡಲಾಗಿದೆ.

**ಒಂದೇ ಬಾರಿ ಪರಸ್ಪರ ವರ್ಗಾವಣೆ ನಿಯಮ ರದ್ದು**

**ಶಿಕ್ಷಕರ ವರ್ಗಾವಣೆ ಕಾಯಿದೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದ್ದು, ಶೀಘ್ರದಲ್ಲೇ ಅದರ ಕರಡು ನಿಯಮಗಳನ್ನು ಪ್ರಕಟಿಸುವ ಸಾಧ್ಯತೆಯಿದೆ. ಒಂದೇ ಬಾರಿ ಪರಸ್ಪರ ವರ್ಗಾವಣೆ ಸೇರಿ ಕೆಲವು ಕರಡು ನಿಯಮಗಳ ಬಗ್ಗೆ ಸಾರ್ವಜನಿಕರ ಆಕ್ಷೇಪಣೆಗಳನ್ನು ಆಹ್ವಾನಿಸಲಾಗುತ್ತದೆ ಮತ್ತು ಅದಕ್ಕೆ 15 ದಿನಗಳ ಕಾಲಾವಕಾಶ ನೀಡಲಾಗುತ್ತದೆ. ಆಕ್ಷೇಪಣೆಗಳ ಪರಿಶೀಲನೆಯ ನಂತರ, ಅಂತಿಮ ಅಧಿಸೂಚನೆ ಮತ್ತು ವರ್ಗಾವಣೆ ವೇಳಾಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ಮೂಲಗಳು ತಿಳಿಸಿವೆ.**

**ಶಿಕ್ಷಕರ ಪರಸ್ಪರ ಟ್ರಾನ್ಸ್‌ಫರ್ ಸಲೀಸು!**

**ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಒಂದಿಷ್ಟು ಹೊಸ ನಿಯಮಗಳನ್ನು ಜಾರಿಗೆ ತಂದಿದೆ. 'ಕರ್ನಾಟಕ ಶಿಕ್ಷಕರ ವರ್ಗಾವಣೆ ನಿಯಂತ್ರಣ ತಿದ್ದುಪಡಿ ವಿಧೇಯಕ'ಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದೆ. ಇದು ವರ್ಗಾವಣೆ ಪ್ರಕ್ರಿಯೆಯಲ್ಲಿ ಕೆಲವು ಪ್ರಮುಖ ಬದಲಾವಣೆಗಳನ್ನು ತರಲಿದೆ ಎಂದು ಹೇಳಲಾಗಿದೆ. ಹೊಸ ನಿಯಮಗಳ ಪ್ರಕಾರ, ಕನಿಷ್ಠ 5 ವರ್ಷಗಳ ಸೇವೆ ಪೂರ್ಣಗೊಳಿಸಿರುವ ಹಾಗೂ ನಿವೃತ್ತಿಗೆ 5 ವರ್ಷಗಳ ಸೇವಾವಧಿ ಬಾಕಿಯಿರುವ ಶಿಕ್ಷಕರು ಪರಸ್ಪರ ವರ್ಗಾವಣೆಗೆ ಮ್ಯೂಚುವಲ್ ಟ್ರಾನ್ಸ್‌ಫರ್) ಅರ್ಹರಾಗಿ ರುತ್ತಾರೆ.**

### ಜಿ.ವಿ. ಸೀತಾರಾಂ ಒಕ್ಕಲಿಗರ ಬಗ್ಗೆ ಅವಹೇಳನಕಾರಿಯಾಗಿ ಹೇಳಿಕೆ ಆರೋಪ

# ಮಾಜಿ ಸಂಸದ ಪ್ರತಾಪ್‌ಸಿಂಹ ಕಿಡಿ

**• ಉದಯವಾಹಿನಿ, ಎಚ್.ಡಿ.ಕೋಟೆ**



ಒಕ್ಕಲಿಗರ ಬಗ್ಗೆ ಅವಹೇಳನಾಕಾರಿಯಾಗಿ ಮಾತನಾಡಿದ್ದಾರೆ ಎನ್ನಲಾಗಿರುವ ಭೋವಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ. ಸೀತಾರಾಂ ಅವರನ್ನು ಗಡೀಪಾರು ಮಾಡಬೇಕು ಮತ್ತು ಅವರು ಕಬಿನಿ ಹಿನ್ನೀರಿನ ಪಕ್ಕದಲ್ಲಿ ಅಕ್ರಮವಾಗಿ ವಶಪಡಿಸಿಕೊಂಡಿರುವ ಜಮೀನನ್ನು ಕೂಡಲೇ ಜಿಲ್ಲಾಡಳಿತ ವಶಕ್ಕೆ ತೆಗೆದುಕೊಳ್ಳಬೇಕು ಎಂದು ಮಾಜಿ ಸಂಸದ ಪ್ರತಾಪ ಸಿಂಹ ಒತ್ತಾಯಿಸಿದ್ದಾರೆ.

ಪಟ್ಟಣದ ಬಾಪೂಜಿ ವೃತ್ತದಲ್ಲಿ ಎಚ್.ಡಿ.ಕೋಟೆ ಸರಗೂರು ತಾಲ್ಲೂಕು ಒಕ್ಕಲಿಗರ ಸಂಘದ ವತಿಯಿಂದ ಕ್ರಮಕ್ಕೆ ಒತ್ತಾಯಿಸಿ ನಡೆದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

**ಮಾಜಿ ಸಂಸದ ಪ್ರತಾಪ ಸಿಂಹ ಒತ್ತಾಯ**

''ರಾಜ್ಯದಲ್ಲಿ ಒಕ್ಕಲಿಗ ಸಮುದಾಯ ಸರ್ವ ಧರ್ಮ ಸಮನ್ವಯದ ಅನುಸಾರ ಉತ್ತಮ ಜೀವನ ನಡೆಸುತ್ತಿದೆ. ರಾಜ್ಯದ ಅಭಿವೃದ್ಧಿಗೆ ಒಕ್ಕಲಿಗ ಸಮುದಾಯ ತನ್ನದೇ ಕಾಣಿಕೆ ಕೊಟ್ಟಿದೆ. ಇಂದು ರಾಜ್ಯದ ಆದಾಯದಲ್ಲಿ ಅರ್ಧ ಪಟ್ಟನ್ನು ಕೆಂಪೇಗೌಡರು ನಿರ್ಮಿಸಿದ ಬೆಂಗಳೂರು ಕೊಡುತ್ತಿದೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ , ಮಾಜಿ ಮುಖ್ಯಮಂತ್ರಿ ದಿ.ಎಸ್.ಎಂ. ಕೃಷ್ಣ ಸೇರಿದಂತೆ ಅನೇಕ ಮಹನೀಯರು ರಾಜ್ಯಕ್ಕೆ ತಮ್ಮದೇ ಆದ ಕಾಣಿಕೆ ಕೊಟ್ಟಿದ್ದಾರೆ. ರಾಜ್ಯದಲ್ಲಿ ಒಕ್ಕಲಿಗರನ್ನು ಅನ್ನದಾತರು ಎನ್ನಲಾಗುತ್ತದೆ,'' ಎಂದು ಹೇಳಿದರು. ಪ್ರತಿಭಟನೆಯಲ್ಲಿ ಸಿ.ವಿ.ನಾಗರಾಜು, ಕೃಷ್ಣೇಗೌಡ, ರಾಜೇಂದ್ರ, ಆಗ್ರೋ ಗುರು, ಸಿದ್ದೇಗೌಡ, ಸಿ.ಎನ್. ನರಸಿಂಹೇಗೌಡ, ಡಿ. ಸುರೇಂದ್ರ ಗೌಡ, ಚೆಲುವೇ ಗೌಡ, ಸೂರ್ಯ ಕುಮಾರ್, ಬೋರೇಗೌಡ, ವೀರೇಗೌಡ, ಸತೀಶ್ ಗೌಡ, ಸೋಮೇಶ್, ಹರೀಶ್ ಗೌಡ, ಕುಮಾರ್ ಯಡತೊರೆ, ರಾಜಣ್ಣ, ಪ್ರದೀಪ್ ಕುಮಾರ್, ನಟರಾಜು, ಹೂ.ಕೆ. ಮಹೇಂದ್ರ, ಪಟೇಲ್ ರಾಜೇಗೌಡ, ಯಶವಂತ್ ಕುಮಾರ್, ಶಿವರಾಜು, ಯೋಗ ನರಸಿಂಹೇಗೌಡ ಮತ್ತಿತರರು ಭಾಗವಹಿಸಿದ್ದರು. ಪ್ರತಿಭಟನೆ ನಂತರ ಪಟ್ಟಣದ ಆಡಳಿತ ಸೌಧದಲ್ಲಿ ತಹಶೀಲ್ದಾರ್ ಶ್ರೀನಿವಾಸ್ ಅವರಿಗೆ ಮನವಿ ಸಲ್ಲಿಸಲಾಯಿತು. ಮುನ್ನೆಚ್ಚರಿಕೆ ಕ್ರಮವಾಗಿ ಕೆಎಸ್‌ಆರ್‌ಪಿ ತುಕಡಿಗಳನ್ನು ಕರೆಸಲಾಗಿತ್ತು.

> **ಕಬಿನಿ ಜಲಾಶಯ ನಿರ್ಮಾಣದಿಂದ ಮುಳುಗಡೆ ಆಗಿ ಪರಿಹಾರ ಕೊಟ್ಟಿರುವ ಕಾವೇರಿ ನಿಗಮದ ಜಮೀನನ್ನು ಅಧಿಕಾರ ಬಳಸಿ, ಅಕ್ರಮವಾಗಿ ಆರ್‌ಟಿಸಿ ಬರೆಸಿಕೊಂಡಿರುವ ಮತ್ತು ಹಾಲಿ ಜಿ. ವಿ.ಸೀತಾರಂ ಅವರ ಹೆಸರಿನಲ್ಲಿ ಇರುವ ಜಮೀನನ್ನು ಜಿಲ್ಲಾಧಿಕಾರಿಗಳು ಕೂಡಲೇ ವಶಕ್ಕೆ ಪಡೆಯಬೇಕು. ಕಬಿನಿ ಜಲಾಶಯದ ಹಿನ್ನೀರಿನ ಪಕ್ಕದಲ್ಲಿ ನೂರಾರು ಎಕರೆ ಜಮೀನುಗಳಿಗೆ ಆರ್‌ಟಿಸಿಗಳು ಹುಟ್ಟಿಕೊಂಡಿವೆ. ಇಂತಹ ಜಮೀನನ್ನು ವಶಕ್ಕೆ ಪಡೆಯುವ ಮೂಲಕ ಕಬಿನಿ ಸ್ವಚ್ಛತೆಗೆ ಜಿಲ್ಲಾಡಳಿತ ಮುಂದಾಗಬೇಕು ಎಂದು ಆಗ್ರಹಿಸಿದರು.**

## ನಟ ಕಮಲ್ ಹಾಸನ್ ವಿರುದ್ಧದ ದೂರು ವಾಪಸ್

**• ಉದಯವಾಹಿನಿ, ಕನಕಪುರ**

ಕನ್ನಡ ಹುಟ್ಟಿದ್ದು ತಮಿಳು ಭಾಷೆಯಿಂದ ಎಂದು ಹೇಳಿದ್ದ ಬಹುಭಾಷಾ ನಟ ಪಾರ್ಥಸಾರಥಿ ಶ್ರೀನಿವಾಸನ್ ಅಲಿಯಾಸ್ ಕಮಲ್ ಹಾಸನ್ ವಿರುದ್ಧ ಕನಕಪುರ ಜೆಎಂಎಫ್ ನ್ಯಾಯಾಲಯದಲ್ಲಿ ಜೂನ್ 30 ರಂದು ದಾಖಲಿಸಲಾಗಿದ್ದ ಖಾಸಗಿ ಕ್ರಿಮಿನಲ್ ದೂರನ್ನು (ಪಿಸಿಆರ್) ಹಿಂಪಡೆದಿರುವುದಾಗಿ ದೂರುದಾರ ಹೇಳಿದ್ದಾರೆ. ಕಮಲ್ ಹಾಸನ್ ಜುಲೈ 25 ರಂದು ರಾಜ್ಯಸಭಾ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಜನಪ್ರತಿನಿಧಿಗಳ ಕಾಯ್ದೆ ಪ್ರಕಾರ ಅವರ ವಿರುದ್ಧದ ಪ್ರಕರಣ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವ್ಯಾಪ್ತಿಗೆ ಬರುತ್ತದೆ. ಹಾಗಾಗಿ ಕನಕಪುರ ಜೆಎಂಎಫ್‌ಸಿಯಲ್ಲಿ ದಾಖಲಾಗಿದ್ದ ದೂರನ್ನು ಹಿಂಪಡೆದು ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ದೂರು ದಾಖಲಿಸುವೆ' ಎಂದು ದೂರುದಾರ ಶ್ರೀರಾಮ ಸೇನೆ ಜಿಲ್ಲಾಧ್ಯಕ್ಷ ನಾಗಾರ್ಜುನ್ ತಿಳಿಸಿದ್ದಾರೆ.

ಭಾಷಾ ವಿವಾದ ಸೃಷ್ಟಿಸಿದ ಕಮಲ್ ಹಾಸನ್ ಹೇಳಿಕೆ ನೀಡಿದ ಆ ಸಮಾರಂಭದಲ್ಲಿ ಭಾಗವಹಿಸಿದ್ದ ನಟ ಡಾ.ಶಿವರಾಜ್‌ಕುಮಾರ್ ಅವರನ್ನು ಪ್ರತ್ಯಕ್ಷ ಸಾಕ್ಷಿಯಾಗಿ ಪರಿಗಣಿಸುವಂತೆ ದೂರುದಾರರು ಮನವಿ ಮಾಡಿದ್ದರು. 'ಕನ್ನಡ ಭಾಷೆಯ ಉಗಮದ ಬಗ್ಗೆ ಕಮಲ್ ಹಾಸನ್ ವಿವಾದಾತ್ಮಕ ಹೇಳಿಕೆ ವೈಯಕ್ತಿಕವಾಗಿ ನೋವು ಮತ್ತು ಮಾನಸಿಕ ಖಿನ್ನತೆ ತಂದಿದೆ. ಕನ್ನಡಕ್ಕೆ ಅಪಮಾನ ಮಾಡಿದ ಅವರು ಕ್ಷಮೆ ಕೇಳದೆ ಉದ್ಧಟತನ ತೋರಿದ್ದಾರೆ' ಎಂದು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಸೆಕ್ಷನ್ 223ರ ಅಡಿ ಪಿಸಿಆರ್ ಸಲ್ಲಿಸಿದ್ದರು.

## ಮಿನಿ ನ್ಯೂಸ್

### ತಹಶೀಲ್ದಾರ್ ವಸತಿ ಗೃಹ ಆವರಣದ ಗಂಧದ ಮರ ಕಳವು

**• ಉದಯವಾಹಿನಿ, ಗುಬ್ಬಿ**

ಪಟ್ಟಣದ ಎಂ.ಜಿ. ರಸ್ತೆಯಲ್ಲಿರುವ ತಹಶೀಲ್ದಾರ್ ವಸತಿಗೃಹದ ಆವರಣದಲ್ಲಿದ್ದ ಗಂಧದ ಮರಗಳ ಪೈಕಿ ಒಂದನ್ನು ಮಧ್ಯ ಭಾಗದವರೆಗೆ ಕೊಯ್ದು, ಮತ್ತೊಂದನ್ನು ಬುಡಸಹಿತ ಕಡಿದು ಕದ್ದೊಯ್ದಿದ್ದಾರೆ. ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿ ಎದುರಿನ ವಸತಿ ಗೃಹದಲ್ಲಿ ಕಳ್ಳರು ಗಂಧದ ಮರ ಕೊಯ್ದು ಹಾಕಿದ್ದಾರೆ. ಪಟ್ಟಣದ ಹಳೆ ಪಿ.ಕೆ. ಕಾಲೊನಿ ಬಳಿಯ ಸರ್ಕಾರಿ ಶಾಲೆಯ ಮುಂಭಾಗ ವಿದ್ದ ಗಂಧದ ಮರವನ್ನೂ ಕಡಿದು ಬುಡವನ್ನು ಕದ್ದು ಒಯ್ದಿದ್ದಾರೆ.

### ಮಹಿಳೆಯ ಕೊಲೆ; ದೇಹವನ್ನು ತುಂಡರಿಸಿ ಪ್ಲಾಸ್ಟಿಕ್ ಚೀಲದಲ್ಲಿ ಎಸೆದರು!

**• ಉದಯವಾಹಿನಿ, ಕೊರಟಗೆರೆ**

ಮಹಿಳೆಯನ್ನು ಕೊಲೆ ಮಾಡಿ ದೇಹವನ್ನು ತುಂಡುಗಳಾಗಿ ಕತ್ತರಿಸಿ ಅಂಗಾಂಗಗಳನ್ನು ತಾಲ್ಲೂಕಿನ ಹೊಳವನಹಳ್ಳಿ, ಕೋಳಾಲ ಹಾಗೂ ಚನ್ನರಾಯನದುರ್ಗ ಹೋಬಳಿ ವ್ಯಾಪ್ತಿಯ ವಿವಿಧೆಡೆ ಎಸೆಯಲಾಗಿದೆ.

ಮಹಿಳೆ ದೇಹದ ಭಾಗಗಳನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ತುಂಬಿ ತಾಲ್ಲೂಕಿನ ಒಟ್ಟು ಐದು ಕಡೆ ಎಸೆಯಲಾಗಿದೆ. ಚಿಂಪುಗಾನಹಳ್ಳಿ ಬಳಿ ಗುರುವಾರ ನಾಯಿಯೊಂದು ಪ್ಲಾಸ್ಟಿಕ್ ಕವರ್ ಎಳೆದಾಡುತ್ತಿತ್ತು. ಇದನ್ನು ಗಮನಿಸಿದ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಪೊಲೀಸರು ಸ್ಥಳಕ್ಕೆ ಶ್ವಾನದಳ ಕರೆಸಿ ಪರಿಶೀಲಿಸಿದ್ದಾರೆ.

ಕೊಲೆಯಾದ ಮಹಿಳೆಯ ಹೆಸರು, ವಿವರ ಲಭ್ಯವಾಗಿಲ್ಲ. ಯಾವ ಕಾರಣಕ್ಕೆ ಕೊಲೆಯಾಗಿದೆ ಎಂಬ ಮಾಹಿತಿಯೂ ತಿಳಿದು ಬಂದಿಲ್ಲ. ರುಂಡ ಸೇರಿದಂತೆ ದೇಹದ ಇನ್ನೂ ಕೆಲವು ಭಾಗಗಳು ದೊರೆತಿಲ್ಲ. ಮೃತದೇಹದ ಉಳಿದ ಭಾಗಗಳಿಗೆ ಪೊಲೀಸರು ಕಾರ್ಯಾಚರಣೆ ಮುಂದುವರೆಸಿದ್ದಾರೆ.

### ಅರ್ಥಪೂರ್ಣ ಸ್ವಾತಂತ್ರ್ಯ ದಿನಾಚರಣೆಗೆ ಇಕ್ಬಾಲ್ ಹುಸೇನ್ ಸೂಚನೆ

**• ಉದಯವಾಹಿನಿ, ರಾಮನಗರ**

ಜಿಲ್ಲಾ ಕ್ರೀಡಾಂಗಣದಲ್ಲಿ ಆ. 15ರಂದು ಹಮ್ಮಿಕೊಂಡಿರುವ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಬೇಕು. ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ನಿರ್ದೇಶನ ನೀಡಿದರು.ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸ್ವಾತಂತ್ರ್ಯ ದಿನ ಕಾರ್ಯಕ್ರಮ ಕುರಿತು ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲಾ ಕ್ರೀಡಾಂಗಣದಲ್ಲಿ ವೇದಿಕೆ ನಿರ್ಮಾಣ, ಆಸನಗಳು, ಉತ್ತಮ ಮೈಕ್‌ಗಳ ವ್ಯವಸ್ಥೆ, ಕ್ರೀಡಾಂಗಣದ ಸ್ವಚ್ಛತೆ, ಕುಡಿಯುವ ನೀರು ಪೂರೈಕೆ, ಅಡಚಣೆಯಾಗದಂತೆ ನೋಡಿಕೊಳ್ಳಬೇಕು ಎಂದರು. ಕಾರ್ಯಕ್ರಮಕ್ಕೆ ನಿರಂತರ ವಿದ್ಯುತ್ ಪೂರೈಕೆಯಾಗಬೇಕು. ಶಿಷ್ಟಾಚಾರದಂತೆ ಆಮಂತ್ರಣ ಪತ್ರಿಕೆಗಳನ್ನು ಮುದ್ರಿಸಿ, ರಾಜ್ಯದ ಉಪ ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು. ವಿಧಾನಸಭೆ ಶಾಸಕರು, ವಿಧಾನ ಪರಿಷತ್ ಶಾಸಕರು ಸೇರಿದಂತೆ ವಿವಿಧ ಜನಪ್ರತಿನಿಧಿಗಳಿಗೆ ತಲುಪಿಸಬೇಕು ಎಂದು ಸಲಹೆ ನೀಡಿದರು.



ಹೆಚ್ಚುವರಿ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ ಮಾತನಾಡಿ, ಸೇವಾ ದಳದವರು ಧ್ವಜಾರೋಹಣ ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು. ಜಿಲ್ಲಾ ಕ್ರೀಡಾಂಗಣದಲ್ಲಿ ಆಸನದ ವ್ಯವಸ್ಥೆ, ವೇದಿಕೆ ನಿರ್ಮಾಣ, ತಗ್ಗು ಗುಂಡಿಗಳಿದ್ದರೆ ಮುಚ್ಚುವುದು ಸೇರಿದಂತೆ ವಿವಿಧ ಕೆಲಸಗಳನ್ನು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ನಿರ್ವಹಿಸಬೇಕು ಎಂದು ಹೇಳಿದರು. ಬೆಳಿಗ್ಗೆ 8 ಗಂಟೆಗೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕಚೇರಿಗಳಲ್ಲಿ ಧ್ವಜಾರೋಹಣ ನೆರವೇರಿಸಬೇಕು. ಧ್ವಜ ಖಾದಿ ಬಟ್ಟೆಯದ್ದೇ ಆಗಿರಬೇಕು. ಧ್ವಜಾರೋಹಣದ ಹಿಂದಿನ ದಿನವೇ ಈ ಬಗ್ಗೆ ತಾಲೀಮು ನಡೆಸಬೇಕು. ಧ್ವಜ ಸಂಹಿತೆಗೆ ಅಪಚಾರವಾಗದಂತೆ ಎಲ್ಲಾ ಅಧಿಕಾರಿಗಳು ಎಚ್ಚರ ವಹಿಸಬೇಕು. ಕಾರ್ಯಕ್ರಮದಲ್ಲಿ ನಾಡಗೀತೆ, ರೈತ ಗೀತೆಯನ್ನು ನುರಿತ ಕಲಾವಿದರಿಂದ ಹಾಡಿಸಬೇಕು. ಅಧಿಕಾರಿಗಳು ತಮ್ಮ ಕಚೇರಿಗಳಲ್ಲಿ ಧ್ವಜಾರೋಹಣ ನೆರವೇರಿಸಿದ ನಂತರ 9 ಗಂಟೆಗೆ ಜಿಲ್ಲಾ ಕ್ರೀಡಾಂಗಣಕ್ಕೆ ಬರಬೇಕು ಎಂದು ಸೂಚಿಸಿದರು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಮಚಂದ್ರಯ್ಯ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಶಿವಕುಮಾರ್. ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಬಿಲಾಲ್ ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಇದ್ದರು.

## 6 ಸಾವಿರ ರೈತರಿಂದ ವಿಧಾನಸೌಧ ಮುತ್ತಿಗೆಗೆ ನಿರ್ಧಾರ

**• ಉದಯವಾಹಿನಿ, ತುಮಕೂರು**



ತಾಲ್ಲೂಕಿನಲ್ಲಿ ಬಗರ್ ಹುಕುಂ ಅರ್ಜಿಗಳನ್ನು ವಜಾ ಮಾಡಿರುವುದನ್ನು ವಿರೋಧಿಸಿ 6 ಸಾವಿರ ರೈತರಿಂದ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಶಾಸಕ ಬಿ.ಸುರೇಶ್‌ಗೌಡ ಹೇಳಿದರು. ತಹಶೀಲ್ದಾರ್ ಕಚೇರಿಯಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ಸಭೆ ನಡೆಸಿದ ನಂತರ ಮಾತನಾಡಿದರು.

ತಾಲ್ಲೂಕಿನಲ್ಲಿ ಫಾರಂ 57ರಲ್ಲಿ 6 ಸಾವಿರ ಅರ್ಜಿಗಳು ಸಲ್ಲಿಕೆಯಾಗಿದ್ದು, ಅದರಲ್ಲಿ ಕೇವಲ 27 ಅರ್ಜಿಗಳು ಮಾತ್ರ ಸಾಗುವಳಿ ಚೀಟಿ ನೀಡಲು ಅರ್ಹವಾಗಿವೆ.

ಉಳಿದ ಅರ್ಜಿಗಳನ್ನು ತಿರಸ್ಕರಿಸಲಾಗಿದೆ ಎಂದು ತಹಶೀಲ್ದಾರ್ ಸಭೆಗೆ ಮಾಹಿತಿ ನೀಡಿದ್ದಾರೆ. ತಿರಸ್ಕೃತ ಅರ್ಜಿದಾರರೊಂದಿಗೆ ವಿಧಾನ ಮಂಡಲದ ಅಧಿವೇಶನದ ಸಮಯದಲ್ಲಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ತಿಳಿಸಿದರು. 2008 – 2013ರಲ್ಲಿ ಶಾಸಕನಾಗಿದ್ದ ಅವಧಿಯಲ್ಲಿ ನೀಡಿರುವಂತಹ ಸಾಗುವಳಿ ಚೀಟಿಗಳಿಗೆ ಈವರೆಗೂ ಖಾತೆ ಮಾಡಿಕೊಟ್ಟಿಲ್ಲ. ಪ್ರತಿನಿತ್ಯ ತಹಶೀಲ್ದಾರ್, ಜಿಲ್ಲಾಧಿಕಾರಿ ಕಚೇರಿ ಮುಂದೆ ರೈತರು ಕೈಕಟ್ಟಿ ನಿಲ್ಲಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರು.

> **ಕಳೆದ ಎರಡು ಮೂರು ದಶಕಗಳಿಂದ ಜಮೀನು ಉಳುಮೆ ಮಾಡುತ್ತಿದ್ದು, ವಿವಿಧ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಅನುಭವದಲ್ಲಿರುವ ರೈತರಿಗೆ ಜಿಲ್ಲಾಧಿಕಾರಿ ಸಾಗುವಳಿ ಚೀಟಿ ನೀಡದೆ, ಅರ್ಜಿ ತಿರಸ್ಕರಿಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.**

ಇದಕ್ಕೂ ಮುನ್ನ ಪ್ರಗತಿ ಪರಿಶೀಲನೆ ನಡೆಸಿದರು. ಸಭೆಗೆ ಗೈರಾಗಿದ್ದ ಅರಣ್ಯ ಇಲಾಖೆ ಅಧಿಕಾರಿ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಲು ತಹಶೀಲ್ದಾರ್‌ಗೆ ನಿರ್ದೇಶಿಸಿದರು. ಸಭೆಯಲ್ಲಿ ಸದಸ್ಯರಾದ ಕರೆರಂಗಯ್ಯ, ಶಿವರಾಜು, ರೂಪ ಮೋಹನ್, ತಹಶೀಲ್ದಾರ್ ರಾಜೇಶ್ವರಿ, ಸಣ್ಣಯ್ಯ ಉಪಸ್ಥಿತರಿದ್ದರು.

## ಸಾಮಾನ್ಯ ಸಭೆಯಲ್ಲಿ ಅಜೆಂಡ ಹರಿದು ಹಾಕಿದ ಸದಸ್ಯ : ಅಧ್ಯಕ್ಷ ಆಕ್ರೋಶ

**• ಉದಯವಾಹಿನಿ, ಚಿಂತಾಮಣಿ**



ನಗರಸಭೆ ಸದಸ್ಯ ಮೊಹ್ಮದ್ ಶಫೀಕ್ ಅವರು ಸಭೆಯ ಅಜೆಂಡಾ ಹರಿದು ಹಾಕಿದ ಹಿನ್ನೆಲೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಗದ್ದಲ ಮತ್ತು ಕೋಲಾಹಲ ಉಂಟಾಯಿತು. ಇದರಿಂದಾಗಿ ವಿವಿಧ ವಿಷಯಗಳ ಚರ್ಚೆಗೆ ವೇದಿಕೆಯಾಗಬೇಕಿದ್ದ ಸಭೆಯು ಗೊಂದಲದ ಗೂಡಾಗಿ ಪರಿಣಮಿಸಿತು. ಅಜೆಂಡಾ ಹರಿದು ಹಾಕುವ ಮೂಲಕ ಸದಸ್ಯ ಅಧ್ಯಕ್ಷ ಸ್ಥಾನಕ್ಕೆ ಅವಮಾನ ಮಾಡಿದ್ದಾರೆ ಎಂದು ಆರೋಪಿಸಲಾಯಿತು. ಹೀಗಾಗಿ, ಸಭೆಯು ಆರಂಭವಾದ ಒಂದೇ ಗಂಟೆಯಲ್ಲಿ ಮುಕ್ತಾಯವಾಯಿತು.

ನಗರಸಭೆ ಸಭಾಂಗಣದಲ್ಲಿ ನಗರಸಭೆ ಅಧ್ಯಕ್ಷ ಜಗನ್ನಾಥ್ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆ ಆಯೋಜಿಸಲಾಗಿತ್ತು ಸಭೆಯಲ್ಲಿ ಮಾತನಾಡಿದ 15ನೇ ವಾರ್ಡ್ ಸದಸ್ಯೆ ರೂಬಿಯಾ ಸುಲ್ತಾನ. ಅಧ್ಯಕ್ಷ ಮತ್ತು ಪೌರಾಯುಕ್ತ ಜೋಕರ್ ಎಂದು ಮೂದಲಿಸಿದರು. ಇದರಿಂದ ಆಕ್ರೋಶಗೊಂಡ ಅಧ್ಯಕ್ಷ ಜಗನ್ನಾಥ್, ವಾಗ್ವಾದಕ್ಕಿಳಿದರು.

> **ಸದಸ್ಯ ಹರೀಶ್ ಮಾತನಾಡಿ. ನಗರದ ವೃತ್ತವೊಂದರಲ್ಲಿ ಮಾಜಿ ಸಚಿವ ಆಂಜನೇಯ ರೆಡ್ಡಿ ಅವರ ಪುತ್ಥಳಿ ನಿರ್ಮಿಸಬೇಕು. ವಿವಿಧ ಪ್ರದೇಶಗಳಲ್ಲಿನ ನಿವಾಸಿಗಳಿಗೆ ಹಕ್ಕುಪತ್ರ ನೀಡಲಾಗಿದ್ದು, ಅವುಗಳಿಗೆ ಇ-ಖಾತೆ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.**

ಜೊತೆಗೆ ಶಫೀಕ್ ಕ್ಷಮೆ ಕೋರಬೇಕು ಎಂದು ಪಟ್ಟು ಹಿಡಿದರು. ನೀರಿನ ಸಮಸ್ಯೆ, ಯುಜಿಡಿ ಸಮಸ್ಯೆ ಕುರಿತು ಹಲವು ಬಾರಿ ನಗರಸಭೆ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಆದರೆ, ಯಾವುದೇ ಪ್ರಯೋಜನವಾಗಿಲ್ಲ.

> **ಆಗ ಮಧ್ಯ ಪ್ರವೇಶಿಸಿದ 17ನೇ ವಾರ್ಡ್ ಸದಸ್ಯ ಮೊಹ್ಮದ್ ಶಫೀಕ್. ಮಾತನಾಡಲು ಮೈಕ್ ಕೇಳಿದರು. ಮೂರು ತಿಂಗಳಿಗೆ ಒಮ್ಮೆ ಸಭೆ ನಡೆಸುತ್ತೀರಿ. ನೀವು ಪೌರಾಯಕ್ಕರ ರಿಮೋಟ್ ಕಂಟ್ರೋಲ್ ಎಂದು ಅಧ್ಯಕ್ಷರನ್ನು ಉದ್ದೇಶಿಸಿ ಹೇಳಿದರು. ಜೊತೆಗೆ ಸಭೆಯ ಪುಸ್ತಕವನ್ನು ಅಧ್ಯಕ್ಷರ ಎದುರು ಹರಿದು ಹಾಕಿದರು. ಅಧ್ಯಕ್ಷ ಜಗನ್ನಾಥ್,ಉಪಾಧ್ಯಕ್ಷೆ ರಾಣಿಯಮ್ಮ, ಆಡಳಿತ ಪಕ್ಷದ ಸದಸ್ಯರು ಶಫೀಕ್ ನಡೆಗೆ ತೀವ್ರ ಬೇಸರ ವ್ಯಕ್ತಪಡಿಸಿದರು.**

ಈ ಎಲ್ಲ ಸಮಸ್ಯೆಗಳ ಬಗ್ಗೆ ಹೇಳಿಕೊಳ್ಳಲು ಸಾಮಾನ್ಯಸಭೆಯಲ್ಲಿ ಅವಕಾಶ ನೀಡುತ್ತಿಲ್ಲ ಎಂದು ಕೆಲವು ಸದಸ್ಯರು ದೂರಿದರು.

## ಕೋಲಾರ: ಕಾರ್ಖಾನೆ ಮುಚ್ಚದಂತೆ ಸಿಐಟಿಯು ಒತ್ತಾಯ

**• ಉದಯವಾಹಿನಿ, ಕೋಲಾರ**



ಜಿಲ್ಲೆಯ ಮಾಲೂರು ಕೈಗಾರಿಕಾ ಪ್ರದೇಶದ ವರ್ಗಾ ಆಟ್ಯಾಸ್ಕೆಂಟ್ ಕಾರ್ಖಾನೆಯಲ್ಲಿ ಸುಳ್ಳು ದಾಖಲೆ ಮೂಲಕ ನಷ್ಟ ತೋರಿಸಿ ಕಾರ್ಖಾನೆ ಮುಚ್ಚಲು ಹೊರಟಿದ್ದಾರೆ. ಕಾರ್ಖಾನೆ ಮುಚ್ಚದಂತೆ ಕೂಡಲೇ ಕಾರ್ಮಿಕ ಇಲಾಖೆ, ಜಿಲ್ಲಾಡಳಿತ, ಜನಪ್ರತಿನಿಧಿಗಳು ಕ್ರಮ ವಹಿಸಬೇಕು' ಎಂದು ಸಿಐಟಿಯು ರಾಜ್ಯ ಉಪಾಧ್ಯಕ್ಷ ಎಚ್.ಎನ್. ಗೋಪಾಲಗೌಡ ಒತ್ತಾಯಿಸಿದರು ನಗರದ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಸುಮಾರು 20 ವರ್ಷದಿಂದ ಕಾರ್ಮಿಕರಾಗಿ ವರ್ಗಾ ಕಾರ್ಖಾನೆಯಲ್ಲಿ ಕಾರ್ಮಿಕರು ದುಡಿಯುತ್ತಿದ್ದಾರೆ.

ಆದರೆ, ಮಾಲೀಕ ವರ್ಗವು ನಷ್ಟದ ನೆಪದಲ್ಲಿ ಏಕಾಏಕಿ ಕೈಗಾರಿಕೆ ಮುಚ್ಚಲು ಹೊರಟಿದೆ. 81 ಕಾಯಂ ಕಾರ್ಮಿಕರನ್ನು ಕೆಲಸದಿಂದ ಹೊರಹಾಕಲು ಮುಂದಾಗಿದ್ದು, ಇದು ಕಾರ್ಮಿಕ ವಿರೋಧಿ ನೀತಿಯಾಗಿದೆ. ಕಾರ್ಖಾನೆ ಮುಚ್ಚುವ ಆದೇಶವನ್ನು ವಾಪಸು ಪಡೆದು ಕಾರ್ಮಿಕರ ಹಿತ ಕಾಪಾಡಲು ಸಂಬಂಧಿಸಿದವರು ಮಾಲೀಕರನ್ನು ಒತ್ತಾಯಿಸಬೇಕಿದೆ' ಎಂದರು. ಈ ಕೈಗಾರಿಕೆಯಲ್ಲಿ ಬುಲ್ಡೋಜರ್‌ಗೆ ಬೇಕಾಗುವ ವಿವಿಧ ಸಾಮಗ್ರಿಗಳನ್ನು ತಯಾರಿಸಿ ವಿದೇಶಕ್ಕೆ ರವಾನಿಸಲಾಗುತ್ತದೆ. ಇದರಿಂದಾಗಿ ಲಾಭದಾಯಕವಾಗಿ ಕಂಪನಿ ನಡೆಯುತ್ತಿದೆ. ಕಂಪನಿಯನ್ನು ಮೂರು ಹೆಸರಿನಲ್ಲಿ ನಾಮಕಾರಣ ಮಾಡಿಕೊಂಡು ಕಾಯಂ ಕಾರ್ಮಿಕರನ್ನು ಕೆಲಸಕ್ಕೆ ರಾಜೀನಾಮೆ ಕೊಡಿಸಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಹುನ್ನಾರವಿದೆ. ಈ ಮೂರು ಕೈಗಾರಿಕೆಗಳ ಮಾಲೀಕರು ಒಂದೇ ಕುಟುಂಬದವರು. ಪಾಲುದಾರಿಕೆಯಲ್ಲಿ ನಡೆಯುತ್ತಿದೆ ಎಂದು ಆರೋಪಿಸಿದರು

> **'ಕಂಪನಿಯನ್ನು ಮುಚ್ಚದಂತೆ ಕ್ರಮ ವಹಿಸಿ ಕಾರ್ಮಿಕರ ರಕ್ಷಣೆ ಮಾಡಲು ಈಗಾಗಲೇ ಹೋರಾಟ ನಡೆಸಲಾಗಿದೆ. ಕೂಡಲೇ ಜಿಲ್ಲಾಧಿಕಾರಿಯು ಮಾಲೀಕ ವರ್ಗವನ್ನು ಕರೆಸಿ ವರ್ಗಾ ಕಾರ್ಖಾನೆಯಲ್ಲಿ ದುಡಿಯುತ್ತಿರುವ ಕಾಯಂ ಕಾರ್ಮಿಕರಿಗೆ ಕೈಗಾರಿಕೆಯಲ್ಲಿ ಕೆಲಸದಲ್ಲಿ ಮುಂದುವರಿಸಲು ಕ್ರಮ ವಹಿಸಬೇಕು. ಇಲ್ಲದೇ ಹೋದರೆ ಮುಂದಿನ ದಿನಗಳಲ್ಲಿ ವಿವಿಧ ಸಂಘಸಂಸ್ಥೆಗಳ ನೇತೃತ್ವದಲ್ಲಿ ಉಗ್ರ ಹೋರಾಟ ನಡೆಸಲಾಗುವುದು' ಎಂದು ಎಚ್ಚರಿಕೆ ನೀಡಿದರು.**

## ಸುಸಜ್ಜಿತ ರಂಗಮಂದಿರ ನಿರ್ಮಾಣಕ್ಕೆ ಕ್ರಮ: ಶಾಸಕ ಸಿ.ಪಿ. ಯೋಗೇಶ್ವರ್ ಭರವಸೆ



**• ಉದಯವಾಹಿನಿ, ಚನ್ನಪಟ್ಟಣ**

ನಗರದಲ್ಲಿ ಸುಸಜ್ಜಿತ ರಂಗಮಂದಿರ ನಿರ್ಮಾಣಕ್ಕೆ ಶೀಘ್ರ ಕ್ರಮವಹಿಸಲಾಗುವುದು ಎಂದು ಶಾಸಕ ಸಿ.ಪಿ.ಯೋಗೇಶ್ವರ್ ಭರವಸೆ ನೀಡಿದರು.ನಗರದ ಶತಮಾನೋತ್ಸವ ಭವನದಲ್ಲಿ ಕೆಂಗಲ್ ಆಂಜನೇಯ ಸಾಂಸ್ಕೃತಿಕ ಕಲಾ ಟ್ರಸ್ಟ್ ಹಾಗೂ ಡಾ.ರಾಜ್ ಬಳಗ ವತಿಯಿಂದ ಈಚೆಗೆ ಆಯೋಜಿಸಿದ್ದ ದಕ್ಷ ಯಜ್ಞ ಪೌರಾಣಿಕ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪೌರಾಣಿಕ ನಾಟಕಗಳು ಭಾರತೀಯ ಸಂಸ್ಕೃತಿಯ ಪ್ರತಿಬಿಂಬ. ಜನಸಾಮಾನ್ಯರು ನಾಟಕದಲ್ಲಿ ಬರುವ ಉತ್ತಮ ಪಾತ್ರಗಳ ಆದರ್ಶಗಳನ್ನು ಮೈಗೂಡಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣವಾಗುತ್ತದೆ.

ಆಧುನಿಕತೆ ನಡುವೆ ಪೌರಾಣಿಕ ನಾಟಕಗಳು ಇಂದಿಗೂ ಜನಾಕರ್ಷಣೆ ಉಳಿಸಿಕೊಂಡಿವೆ. ಇಂತಹ ನಾಟಕಗಳಿಗೆ ಜನರ ಪ್ರೋತ್ಸಾಹ ಅಗತ್ಯ ಎಂದರು.

ಕಲಾವಿದ ಎಲೆಕೇರಿ ಮಂಜುನಾಥ್ ಅವರಿಗೆ ಬೊಂಬೆನಾಡು ಕಲಾರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಜೊತೆಗೆ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿದ ಕಲಾವಿದರಾದ ಗೋಪಾಲಗೌಡ, ರಾಂಪುರ ಮರಿಯಪ್ಪ, ಡಾ.ವಾಸುದೇವ್, ಎಲೆಕೇರಿ ನಾಗರಾಜು, ಎಸ್.ಎಂ.ರಾಜು, ಗೋವಿಂದಹಳ್ಳಿ ನಾಗರಾಜು, ಸುಮತಿ ಕುಮಾರ್ ಜೈನ್, ನಾಗವಾರ ಶಂಭುಗೌಡ, ಶಿವಲಿಂಗಯ್ಯ, ಎಂಟಿಆರ್ ತಿಮ್ಮರಾಜು, ಕೂಡೂರು ವೆಂಕಟೇಶ್ ಸೇರಿದಂತೆ ಹಲವರನ್ನು ಸನ್ಮಾನಿಸಲಾಯಿತು. ಗುರುಮಾದಯ್ಯ, ಎಲೆಕೇರಿ ರವೀಶ್, ರಾಂಪುರ ರಾಜಣ್ಣ, ಲಕ್ಷ್ಮಣ್, ಪುಟ್ಟಸ್ವಾಮಿಗೌಡ, ವಸಂತ ಕುಮಾರ್, ಮಹೇಶ್ ಕುಮಾರ್, ತೇಜಸ್, ಯೋಗೇಶ್ ಚಕ್ಕೆರೆ ಇತರರು ಹಾಜರಿದ್ದರು.

> **ಗೌಡಗೆರೆ ಚಾಮುಂಡೇಶ್ವರಿ ಬಸಪ್ಪನ ಕ್ಷೇತ್ರದ ಧರ್ಮದರ್ಶಿ ಡಾ.ಮಲ್ಲೇಶ್ ಗುರೂಜಿ ಮಾತನಾಡಿ, ಆಧುನಿಕತೆ, ಪಾಶ್ಚಾತ್ಯ ಸಂಸ್ಕೃತಿ ಹಾಗೂ ದೃಶ್ಯ ಮಾಧ್ಯಮಗಳ ಪ್ರಭಾವದಿಂದ ನಾಡಿನ ವೈಭವ ಮತ್ತು ಇತಿಹಾಸ ತಿಳಿಸುವಂತಹ ಕಲೆ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕಣ್ಮರೆಯಾಗುತ್ತಿದೆ. ರಂಗಭೂಮಿ ಕಲೆಯನ್ನು ಉಳಿಸಿ ಬೆಳೆಸುವ ಕಾರ್ಯವಾಗಬೇಕು ಎಂದು ತಿಳಿಸಿದರು.**

## ಗ್ರಾಮಗಳಲ್ಲಿನ ನೀರಿನ ಸಮಸ್ಯೆಗೆ ಸ್ಪಂದಿಸಿ: ಶಾಸಕ ಜಿ.ಕೆ.ವೆಂಕಟಶಿವಾರೆಡಿ

**• ಉದಯವಾಹಿನಿ, ಶ್ರೀನಿವಾಸಪುರ**




ನೀರಿನ ಸಮಸ್ಯೆ ಇರುವ ಗ್ರಾಮಗಳಲ್ಲಿ ತಕ್ಷಣ ನೀರಿನ ವ್ಯವಸ್ಥೆ ಮಾಡಬೇಕು. ಚರಂಡಿಗಳನ್ನು ಸ್ವಚ್ಛಗೊಳಿಸಿ ಬ್ಲೀಚಿಂಗ್ ಪೌಡರ್ ಹಾಕಬೇಕು. ಬೀದಿ ದೀಪಗಳು ಅಳವಡಿಸಬೇಕು ಎಂದು ಶಾಸಕ ಜಿ.ಕೆ.ವೆಂಕಟಶಿವಾರೆಡಿ ಸೂಚಿಸಿದರು. ಪಟ್ಟಣ ಹೊರವಲಯದ ಹೊಗಳಗೆರೆ ಕೃಷಿ ಮಾವು ಅಭಿವೃದ್ಧಿ ಮಂಡಳಿ ಸಭಾಂಗಣದಲ್ಲಿ ಅಧಿಕಾರಿಗಳ ಕೆಡಿಪಿ ಸಭೆಗೆ ಚಾಲನೆ ನೀಡಿ ಮಾತನಾಡಿದರು.

ಹಳ್ಳಿಗಳಲ್ಲಿ ಜೆಜೆಎಂ ಕಾಮಗಾರಿಗಳು ನಿಂತುಹೋಗಿದ್ದು, ಅವುಗಳನ್ನು ಪುನಾರಂಭಿಸಬೇಕು. ಗುಣಮಟ್ಟದೊಂದಿಗೆ ನಿಗದಿತ ಸಮಯದೊಳಗೆ ಕಾಮಗಾರಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸೂಚಿಸಬೇಕು. ಶುದ್ಧ ಕುಡಿಯುವ ನೀರಿಗಾಗಿ ಅಡಿಪಾಯ ಹಾಕಿರುವುದನ್ನು ಸಿಎಸ್‌ಆರ್ ಅನುದಾನದಲ್ಲಿ ಪೂರ್ಣಗೊಳಿಸಲು ಇಒ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಒಂದೆರಡು ತಿಂಗಳಲ್ಲಿ ಎಲ್ಲಾ ಶುದ್ಧನೀರಿನ ಘಟಕಗಳು ಪುನಾರಂಭಿಸಿಲು ಬೇಕಾದ ವ್ಯವಸ್ಥೆಗಳನ್ನು ಮಾಡಿಸಬೇಕು ಎಂದು ಹೇಳಿದರು. ಲಕ್ಷ್ಮಿಪುರ ಗ್ರಾಮದಲ್ಲಿ ಸರ್ಕಾರಿ ಶಾಲೆಗೆ ಸಂಬಂಧಿಸಿದಂತೆ ಕೋಟ್ಯಂತರ ಬೆಲೆಬಾಳುವ ಜಮೀನನ್ನು ಲಪಟಾಯಿಸಲು ಕೆಲವರು ಕಾದಿದ್ದು ಅದರಲ್ಲಿನ ಒಂದು ಗುಂಟೆಯನ್ನು ಬಿಡದಂತೆ ಎಚ್ಚರವಹಿಸಬೇಕು. ಬಿಇಒ ಹಾಗೂ ಪಿಡಿಒ ಅದಷ್ಟು ಬೇಗ ಇತ್ಯರ್ಥ ಮಾಡಬೇಕು ಎಂದರು.

# ಇಳಿಕೆಯತ್ತ ಸಾಗಿದ ಕೊಬ್ಬರಿ ಬೆಲೆ

### ಕ್ವಿಂಟಲ್ ಬೆಲೆ 31,606ಕ್ಕೆ ಏರಿಕೆಯಾಗುವ ಮೂಲಕ ಸಾರ್ವಕಾಲಿಕ ದಾಖಲೆ

**• ಉದಯವಾಹಿನಿ, ತುಮಕೂರು**



ಹಾವು ಏಣಿ ಆಟ ಮುಂದುವರಿಸಿದ್ದ ಉಂಡೆ ಕೊಬ್ಬರಿ ಧಾರಣೆ ಇತ್ತೀಚಿನ ಕೆಲವು ವಾರಗಳಿಂದ ಇಳಿಕೆಯತ್ತ ಸಾಗಿರುವುದು ರೈತರ ಆತಂಕವನ್ನು ಹೆಚ್ಚಿಸಿದೆ. ಮತ್ತಷ್ಟು ಕುಸಿದರೆ ಎಂಬ ಚಿಂತೆ ಆವರಿಸಿದೆ. ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಗರಿಷ್ಠ ದರ ಕ್ವಿಂಟಲ್ 26.500ಕ್ಕೆ ಇಳಿಕೆಯಾಗಿದೆ.

ಕನಿಷ್ಠ 124,000, 50 25,500 ಅವಕವಾಗಿತ್ತು. . 1,816 (4,224 230) ಒಂದು ವಾರದ ಅಂತರದಲ್ಲಿ ಕ್ವಿಂಟಲ್‌ಗೆ 1,606, ಸೋಮವಾರದ ಹರಾಜಿನಿಂದ ಹರಾಜಿನ ಹೊತ್ತಿಗೆ 1 ಸಾವಿರ ಕಡಿಮೆಯಾಗಿದೆ. ಒಂದು ತಿಂಗಳ ಅಂತರದಲ್ಲಿ ಕ್ವಿಂಟಲ್‌ಗೆ 5 ಸಾವಿರ ಕುಸಿತ ಕಂಡಂತಾಗಿದೆ.

**ಒಂದು ತಿಂಗಳಲ್ಲಿ ರೂ.5 ಸಾವಿರ ಇಳಿಕೆ**

ಕ್ವಿಂಟಲ್ ಬೆಲೆ 31,606ಕ್ಕೆ ಏರಿಕೆಯಾಗುವ ಮೂಲಕ ಸಾರ್ವಕಾಲಿಕ ದಾಖಲೆ ಬರೆದಿತ್ತು. ಜೂನ್ ತಿಂಗಳ ಕೊನೆಯವರೆಗೂ ಸತತವಾಗಿ ಬೆಲೆ ಏರಿಕೆಯತ್ತಲೇ ಸಾಗಿತ್ತು. ನಂತರದ ದಿನಗಳಲ್ಲಿ ಅಲ್ಪ ಪ್ರಮಾಣದಲ್ಲಿ ಇಳಿಕೆಯಾಗಿತ್ತು. ಜುಲೈ ತಿಂಗಳ ಮಧ್ಯದ ವೇಳೆಗೆ 28 ಸಾವಿರದಿಂದ 30 ಸಾವಿರದ ನಡುವೆ ಮಾರಾಟವಾಗುತಿತ್ತು. ಸ್ವಲ್ಪಮಟ್ಟಿನ ತೋಯ್ದಾಟದ ನಡುವೆ 28 ಸಾವಿರದ ಆಸುಪಾಸಿನಲ್ಲಿ ಸ್ಥಿರವಾಗಬಹುದು ಎಂದು ವರ್ತಕರು, ಖರೀದಿದಾರರು, ದಲ್ಲಾಳಿಗಳು, ರೈತರು ಭಾವಿಸಿದ್ದರು.

ಆದರೆ, ಮಾರುಕಟ್ಟೆಯ ಎಲ್ಲಾ ಲೆಕ್ಕಾಚಾರಗಳನ್ನು ತಲೆಕೆಳಗು ಮಾಡುವಂತೆ ಜುಲೈ ಮಧ್ಯ ಭಾಗದಿಂದ ಬೆಲೆ ಕುಸಿಯುತ್ತಲೇ ಇದೆ. ಆಗಸ್ಟ್ ತಿಂಗಳಲ್ಲೂ ಚೇತರಿಸುವ ಲಕ್ಷಣಗಳು ಕಾಣುತ್ತಿಲ್ಲ. ಮುಂದಿನ ದಿನಗಳಲ್ಲಿ ಕ್ವಿಂಟಲ್ 25 ಸಾವಿರ ಸಮೀಪದಲ್ಲಿ ಸ್ಥಿರವಾಗಬಹುದು. ಇದಕ್ಕಿಂತ ಇಳಿಕೆಯಾಗುವ ಸಾಧ್ಯತೆಗಳು ಕಡಿಮೆ ಎಂದು ಮಾರುಕಟ್ಟೆ ಮೂಲಗಳು ತಿಳಿಸಿವೆ. ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾದಂತೆ ದರ ಏರಿಕೆಯತ್ತ ಮುಖ ಮಾಡಿತ್ತು. ಕಳೆದ ಮಾರ್ಚ್‌ನಿಂದ ಜೂನ್ ಅಂತ್ಯದ ವರೆಗೆ ನಾಗಾಲೋಟದಲ್ಲಿ ಸಾಗಿತ್ತು. ಆದರೆ ಈಗ ಹಿನ್ನಡೆ ಕಂಡಿರುವುದು ರೈತರ ಆತಂಕವನ್ನು ಹೆಚ್ಚಿಸಿದೆ.

ಒಂದು ಹಂತದವರೆಗೆ ಬೆಲೆ ಇಳಿಕೆಯಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ವ್ಯತ್ಯಾಸ ಇರುವುದಿಲ್ಲ. ಅತ್ಯಲ್ಪ ಏರಿಳಿತ ಹೊರತುಪಡಿಸಿದರೆ ಮತ್ತಷ್ಟು ಕುಸಿಯುವ ಸಾಧ್ಯತೆಗಳು ಕಡಿಮೆ' ಎಂದು ವರ್ತಕರು ಹೇಳುತ್ತಾರೆ.

**ಕಂಪನಿಗಳ ಹಿಡಿತ:** ತಿಪಟೂರು ಕೊಬ್ಬರಿಯು ಎಣ್ಣೆ ಮಾರುಕಟ್ಟೆಯನ್ನು ಅವಲಂಬಿಸಿದೆ. ನಮ್ಮ ರೈತರು ಸರಿಯಾದ ರೀತಿಯಲ್ಲಿ ಕೊಬ್ಬರಿ ಸಂಸ್ಕರಣೆ ಮಾಡುತ್ತಿಲ್ಲ. ಪ್ರಕೃತಿ ವಿಕೋಪದಿಂದ ಗುಣಮಟ್ಟದಲ್ಲಿ ವ್ಯತ್ಯಾಸವಾಗುತ್ತದೆ. ಕೊಬ್ಬರಿ ಹಾಗೂ ಕೌಟು ದಾಸ್ತಾನು ದೊಡ್ಡ ಕಂಪನಿಗಳ ಹಿಡಿತದಲ್ಲಿದ್ದು ಬೆಲೆ ಏರಿಕೆ – ಇಳಿಕೆಗೆ ಕಾರಣವಾಗುತ್ತಿದೆ. ಯೋಗೀಶ್ ಕೊಬ್ಬರಿ ವರ್ತಕ ತಿಪಟೂರು

> **ಕುಸಿದ ಬೇಡಿಕೆ; ಎಣ್ಣೆಗೂ ಬಳಸುತ್ತಿಲ್ಲ**
>
> **ಉಂಡೆ ಕೊಬ್ಬರಿ ಬೆಲೆ ಏರಿಕೆಯಿಂದಾಗಿ ಉತ್ತರ ಭಾರತದ ರಾಜ್ಯಗಳಲ್ಲಿ ಬೇಡಿಕೆ ಕಡಿಮೆಯಾಗಿದೆ. ಆ ಭಾಗದ ವರ್ತಕರು ಖರೀದಿಸುವುದು ಕಡಿಮೆ ಮಾಡಿದ್ದು ಧಾರಣೆ ಕುಸಿಯುವಂತೆ ಮಾಡಿದೆ. ತಮಿಳುನಾಡು ಕೇರಳ ಭಾಗದಲ್ಲಿ ತೆಂಗಿನ ಕಾಯಿ ಸೀಸನ್ ಆರಂಭವಾಗಿದ್ದು ಮಾರುಕಟ್ಟೆಗೆ ಬರುತ್ತಿದೆ. ಕೊಬ್ಬರಿ ದುಬಾರಿಯಾದ ಕಾರಣಕ್ಕೆ ತಮಿಳುನಾಡು ಕೇರಳದಲ್ಲಿ ಕಡಿಮೆ ಬೆಲೆಗೆ ಸಿಗುವ ತೆಂಗಿನ ಕಾಯಿಗಳನ್ನೇ ಖರೀದಿಸಿ ಅದರ ಮೂಲಕವೇ ತೆಂಗಿನ ಎಣ್ಣೆ ಉತ್ಪಾದನೆ ಮಾಡಲಾಗುತ್ತಿದೆ. ಇದರಿಂದಾಗಿ ಎಣ್ಣೆ ಉತ್ಪಾದನೆಗೆ ನಮ್ಮ ರಾಜ್ಯದ ಕೊಬ್ಬರಿ ಬಳಕೆ ಕಡಿಮೆಯಾಗಿದೆ. ಹಾಗಾಗಿ ಬೆಲೆ ಇಳಿಕೆಯಾಗಿದೆ ಎಂದು ಮಾರುಕಟ್ಟೆ ಮೂಲಗಳು ತಿಳಿಸಿವೆ.**

## ಗೋಲಿಬಾರ್: ಹುತಾತ್ಮ ರೈತರ ಸ್ಮರಣೆ

**• ಉದಯವಾಹಿನಿ, ಬಾಗೇಪಲ್ಲಿ**



ಪಟ್ಟಣದ ಪ್ರವಾಸಿ ಮಂದಿರದ ಬಳಿಯ ಹುತಾತ್ಮ ರೈತರ ಸ್ಮಾರಕದ ಬಳಿ ಸಿಪಿಎಂ ಜಿಲ್ಲಾ ಸಮಿತಿ ವತಿಯಿಂದ ಹುತಾತ್ಮ ರೈತರ ದಿನ ಹಮ್ಮಿಕೊಳ್ಳಲಾಯಿತು.1980ರಲ್ಲಿ ನರಗುಂದ, ನವಲಗುಂದದಲ್ಲಿ ರೈತರ ಮೇಲೆ ನಡೆದ ಗೋಲಿಬಾರ್ ಖಂಡಿಸಿ, ಪಟ್ಟಣದಲ್ಲಿ ನಡೆದ ಕಮ್ಯೂನಿಸ್ಟರ ನಾಯಕತ್ವದಲ್ಲಿ ಪ್ರತಿಭಟನ ಮೆರವಣಿ ನಡೆಯಿತು. ಈ ಘಟನೆಯಲ್ಲಿ ತಾಲ್ಲೂಕಿನ ದದ್ದಿಮಪ್ಪ, ಆದಿನಾರಾಯಣರೆಡ್ಡಿ ಅವರು ಹುತಾತ್ಮರಾದರು. ರೈತರ ಹುತಾತ್ಮ ಸ್ಮಾರಕಕ್ಕೆ ಹೂವಿನ ಹಾರ ಹಾಕಿ ಕೆಂಪು ವಂದನೆಯ ಘೋಷಣೆ ಕೂಗಲಾಯಿತು.

ಪ್ರಜಾನಾಟ್ಯ ಕಲಾ ಮಂಡಲಿಯ ಪಿ.ಓಬಳರಾಜು, ಚನ್ನರಾಯಪ್ಪ, ಗೊಲ್ಲಪಲ್ಲಿ ಮಂಜುನಾಥ್ ತಂಡದವರು ಕ್ರಾಂತಿಗೀತೆಗಳನ್ನು ಹಾಡಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಲಿ ಸದಸ್ಯ ಎಂ.ಪಿ.ಮುನಿವೆಂಕಟಪ್ಪ, ಕ್ಷೇತ್ರದಲ್ಲಿ ಕುಡಿಯುವ ನೀರು, ಮನೆ, ನಿವೇಶನ ಹಂಚಿಕೆ, ಉಳುವವನಿಗೆ ಭೂಮಿ ಸೇರಿದಂತೆ ವಿವಿಧ ಹಕ್ಕುಗಳಿಗಾಗಿ 1970ರ ದಶಕದಿಂದ ಹೋರಾಟ ಮಾಡಲಾಗುತ್ತಿದೆ. ಆ ಹೋರಾಟಗಳನ್ನು ಕಾಂಗ್ರೆಸ್ ದಮನ ಮಾಡಿಕೊಂಡು ಬಂದಿದೆ ಎಂದರು.

ಸಿಪಿಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಸಿದ್ದಗಂಗಪ್ಪ ಮಾತನಾಡಿ, ಜಿಲ್ಲೆಯಲ್ಲಿ ಭೂಮಿಗಾಗಿ ಅರ್ಜಿ ಸಲ್ಲಿಸಿ ಹಲವು ವರ್ಷ ಕಳೆದರೂ, ಜನರಿಗೆ ಭೂಮಿ ಹಂಚಿಕೆ ಮಾಡಿಲ್ಲ ಎಂದು ದೂರಿದರು.

ರೈತ ಸಂಘ, ಹಸಿರು ಸೇನೆ ಪುಟ್ಟಣ್ಣಯ್ಯ ಬಣದ ತಾಲ್ಲೂಕು ಅಧ್ಯಕ್ಷ ಟಿ.ಲಕ್ಷ್ಮಿನಾರಾಯಣರೆಡ್ಡಿ ಮಾತನಾಡಿದರು. ಸಿಪಿಎಐ(ಎಂ) ಜಿಲ್ಲಾ ಸಮಿತಿ ಸದಸ್ಯ ಬಿಳ್ಳೂರು ನಾಗರಾಜ್, ಅಶ್ವಥ್ಯಪ್ಪ, ಮುಖಂಡರಾದ ಚನ್ನರಾಯಪ್ಪ, ಡಿ.ಟಿ.ಮುನಿಸ್ವಾಮಿ, ಜಿ.ಮುಸ್ತಾಫ, ಪಿ.ಒಬಳರಾಜು, ಗೊಲ್ಲಪಲ್ಲಿ ಮಂಜುನಾಥ್, ಜಿ.ಕೃಷ್ಣಪ್ಪ, ಜಹೀರ್ ಬೇಗ್, ಬೈರೆಡ್ಡಿ, ರಾಮಾಂಜಿ, ಲಕ್ಷ್ಮಣರೆಡ್ಡಿ, ರಶೀದ್, ಬಿ.ಎಚ್.ರಫೀಕ್, ಸೋಮಶೇಖರ್, ಈಶ್ವರರೆಡ್ಡಿ, ರವಣಪ್ಪ, ರವಣ, ನರಸಿಂಹರೆಡ್ಡಿ ಮತ್ತಿತರರು ಇದ್ದರು.

> **1980ರಲ್ಲಿ ನಮ್ಮ ತಂದೆ ಎನ್ .ವಿ.ನಾಗಭೂಷಣಾಚಾರಿ, ಎಚ್.ಎಸ್. ರಾಮರಾವ್, ಜಯರಾಮರೆಡ್ಡಿ ಸೇರಿದಂತೆ 36 ಮಂದಿ ಕಮ್ಯೂನಿಸ್ಟ್ ನಾಯಕರು ಪ್ರತಿಭಟನಾ ಮೆರವಣಿಗೆ ಮಾಡಿದರು. ಈ ಮೆರವಣಿಗೆಯಲ್ಲಿ 10 ಸಾವಿರ ರೈತರು ಭಾಗವಹಿಸಿದ್ದರು. ಕ್ಷೇತ್ರದಲ್ಲಿ ಕಮ್ಯೂನಿಸ್ಟ್ ಹೋರಾಟ ದಮನ ಮಾಡಲು, ಅಂದಿನ ಕಾಂಗ್ರೆಸ್ ಸರ್ಕಾರವು ರೈತರ ಮೇಲೆ ಲಾಠಿ ಪ್ರಹಾರ ನಡೆಸಿ, ಗೋಲಿಬಾರ್ ಮಾಡಿತು' ಎಂದು ಹೇಳಿದರು.**
>
> **ಕಮ್ಯೂನಿಸ್ಟ್ ಹೋರಾಟಗಾರ ಪುತ್ರ ಚಂದ್ರಶೇಖರ್**

ಅಂತರಾಳದಿಂದ..
EDITORIAL

# ದ್ವೇಷ ಹಾಗೂ ಹಿಂಸೆಯ ವಿಷ; ವ್ಯಾಪಕ ಹೋರಾಟದ ಸಮಯ

ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ಸರ್ಕಾರಿ ಶಾಲೆಗಳಲ್ಲಿ ದಿನವೂ ಅನುಸರಿಸಬೇಕಾದ 25 ಅಂಶಗಳನ್ನು ಪಟ್ಟಿ ಮಾಡಿ ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ. ಬೆಳಗಾವಿ ಮತ್ತು ಶಿವಮೊಗ್ಗದ ಶಾಲೆಗಳಲ್ಲಿ ಕುಡಿಯುವ ನೀರಿಗೆ ವಿಷ ಬೆರೆಸಿದ ಪ್ರಕರಣಗಳು ವರದಿಯಾದ ಹಿನ್ನೆಲೆಯಲ್ಲಿ, ಮಕ್ಕಳ ಸುರಕ್ಷತೆಗಾಗಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳನ್ನು ಶಿಕ್ಷಣ ಇಲಾಖೆ ಪಟ್ಟಿಮಾಡಿದೆ. ಶಿಕ್ಷಣ ಹಕ್ಕು ಕಾಯ್ದೆ ಹಾಗೂ ಮಕ್ಕಳ ಸುರಕ್ಷತಾ ನೀತಿ ಅನ್ವಯ ಈ ಪಟ್ಟಿಯನ್ನು ರೂಪಿಸಲಾಗಿದೆ. ಕುಡಿಯುವ ನೀರಿಗೆ ವಿಷ ಬೆರೆಸಿದ ಎರಡೂ ಘಟನೆಗಳು ಮಕ್ಕಳ ಸುರಕ್ಷತೆಯ ಬಗ್ಗೆ ಕಳವಳ ಹುಟ್ಟಿಸುವಂತಹವು. ವಿಶೇಷವಾಗಿ, ಬೆಳಗಾವಿಯ ಘಟನೆ ಹೆಚ್ಚು ಹೇಯವಾದುದು ಹಾಗೂ ಕೋಮುದ್ವೇಷದಿಂದ ಪ್ರೇರಿತವಾದುದು. ಶಾಲೆಯಲ್ಲಿನ ಮುಸ್ಲಿಂ ಸಮುದಾಯದ ಮುಖ್ಯ ಶಿಕ್ಷಕರ ವಿರುದ್ಧ ಅಪಪ್ರಚಾರ ಮಾಡಲು ಹಾಗೂ ಅವರನ್ನು ವರ್ಗ ಮಾಡಿಸುವ ಉದ್ದೇಶದಿಂದ ದುಷ್ಕೃತ್ಯ ನಡೆದಿದ್ದು, ವಿಷ ಬೆರೆತ ನೀರು ಕುಡಿದು ಕೆಲವು ವಿದ್ಯಾರ್ಥಿಗಳು ಆಸ್ಪತ್ರೆಗೆ ದಾಖಲಾಗಬೇಕಾಯಿತು.



ಈ ಪ್ರಕರಣದಲ್ಲಿ ಶ್ರೀರಾಮ ಸೇನೆಯ ಮುಖಂಡ ಸಾಗರ್ ಪಾಟೀಲ್ ಸೇರಿದಂತೆ ಮೂವರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಧಾರ್ಮಿಕ ಅಸಹಿಷ್ಣುತೆಯ ದ್ವೇಷಪೂರಿತ ಕಾರ್ಯಸೂಚಿ ಜಾರಿಗೊಳಿಸಲು ಮಕ್ಕಳನ್ನು ಗುರಿ ಮಾಡಿಕೊಂಡಿರುವುದು ಧಾರ್ಮಿಕ ಮೂಲಭೂತವಾದದ ವಿಕೃತ ಸ್ವರೂಪವನ್ನು ಅನಾವರಣಗೊಳಿಸುವಂತಿದೆ. ರಾಜಕಾರಣದಲ್ಲಿ ಧರ್ಮಾಂಧತೆಯನ್ನು ಬೆರೆಸುವುದು ಹಾಗೂ ತಾವು ನಿರ್ಲಜ್ಜೆಯಿಂದ ವರ್ತಿಸಬಹುದೆಂದು ದುಷ್ಕರ್ಮಿಗಳು ನಂಬಿರುವುದು ಪರಿಸ್ಥಿತಿ ತೀವ್ರವಾಗಿ ವಿಷಮಗೊಂಡಿರುವುದನ್ನು ಸೂಚಿಸುವಂತಿದೆ. ರಾಜಕೀಯ ಸಿದ್ಧಾಂತಗಳು ಕುರುಡು ದ್ವೇಷವಾಗಿ ರೂಪುಗೊಂಡಾಗ.

**ದುರ್ಘಟನೆಗೆ ಸಂಬಂಧಿಸಿದಂತೆ ಖಂಡನೆ, ತನಿಖೆಗೆ ಒತ್ತಾಯ, ಆಕ್ರೋಶ, ಯಾವುದೂ ಇಲ್ಲದೆ, ಬಿಜೆಪಿ ಮೌನವಹಿಸಿರುವುದು ಅಚ್ಚರಿ ಹುಟ್ಟಿಸುವಂತಿದೆ. ಮುಗ್ಧ ಮಕ್ಕಳ ಜೀವಗಳು ಅಪಾಯಕ್ಕೆ ಸಿಲುಕಿದ ಸಂದರ್ಭದಲ್ಲಿ ವಹಿಸುವ ಮೌನ ಹಾಗೂ 'ಅನುಕೂಲಸಿಂಧು ಆಕ್ರೋಶ ವ್ಯಕ್ತಪಡಿಸುವುದು ಅಷಾಢಭೂತಿತನ ಮಾತ್ರವಾಗಿರದೆ, ದುಷ್ಕೃತ್ಯದಲ್ಲಿ ಭಾಗಿಯಾದಂತೆಯೂ ಹೌದು. ಶಾಲೆಗಳಲ್ಲಿ ವಹಿಸಬೇಕಾದ ಮುನ್ನಚ್ಚರಿಕಾ ಕ್ರಮಗಳ ಕುರಿತು ಶಿಕ್ಷಣ ಇಲಾಖೆ ಹೊರಡಿಸಿರುವ ಸುತ್ತೋಲೆ ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಅಗತ್ಯವಾಗಿದ್ದ ಕ್ರಮ.**

ಅಮಾಯಕ ಮಕ್ಕಳನ್ನೂ ಆ ದ್ವೇಷ ಗುರಿಯಾಗಿಸಿಕೊಳ್ಳುತ್ತದೆ ಎನ್ನುವುದಕ್ಕೆ ಬೆಳಗಾವಿಯ ಶಾಲೆಯಲ್ಲಿ ನಡೆದ ಘಟನೆ ಉದಾಹರಣೆಯಂತಿದೆ. ಆ ದುಷ್ಕೃತ್ಯದ ಜವಾಬ್ದಾರಿಯನ್ನು ಶ್ರೀರಾಮಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್, ಬಿಜೆಪಿ ನಾಯಕರಾದ ಬಿ.ವೈ. ವಿಜಯೇಂದ್ರ ಮತ್ತು ಆರ್. ಅಶೋಕ ಅವರು ತೆಗೆದುಕೊಳ್ಳುತ್ತಾರೆಯೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶ್ನಿಸಿರುವುದು ಸೂಕ್ತವಾಗಿದೆ. ಶಾಲೆಗಳ ಮುಖ್ಯ ಶಿಕ್ಷಕರು ತರಗತಿಗಳು ಆರಂಭವಾಗುವ ಮುನ್ನ ಶಾಲಾ ಪರಿಸರದ ತಪಾಸಣೆ ನಡೆಸುವುದು ಇನ್ನು ಮುಂದೆ ಕಡ್ಡಾಯವಾಗಲಿದೆ. ನೀರಿನ ಗುಣಮಟ್ಟದ ಪರೀಕ್ಷೆ. ನೀರಿನ ಟ್ಯಾಂಕ್‌ಗಳಿಗೆ ಬೀಗ ಹಾಕಿರುವುದನ್ನು ಹಾಗೂ ಶೌಚಾಲಯಗಳು ಶುಚಿಯಾಗಿ ಇರುವುದನ್ನು ಖಚಿತ ಪಡಿಸಿಕೊಳ್ಳುವುದು. ಪ್ರಥಮ ಚಿಕಿತ್ಸೆಯ ಪೆಟ್ಟಿಗೆಗಳು ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳುವುದು ಸೇರಿದಂತೆ ಪರಿಶೀಲನೆಯ ಎಲ್ಲಾ ಸಂಗತಿಗಳನ್ನೂ 'ವಿದ್ಯಾರ್ಥಿ ಸಾಧನೆಯ ಟ್ರ್ಯಾಕಿಂಗ್ ವ್ಯವಸ್ಥೆ' (ಸ್ಯಾಟ್ಸ್) ಪೋರ್ಟಲ್‌ನಲ್ಲಿ ಪ್ರತಿನಿತ್ಯ ದಾಖಲಿಸ ಬೇಕಾಗಿದೆ. ಆದರೆ, ಮಕ್ಕಳ ಸುರಕ್ಷತೆಗೆ ಸಂಬಂಧಿಸಿದ ಮುನ್ನೆಚ್ಚರಿಕಾ ಕ್ರಮಗಳು ಕಾಗದದ ಮೇಲಷ್ಟೇ ಉಳಿಯದಂತೆ ಸರ್ಕಾರ ಎಚ್ಚರಿಕೆ ವಹಿಸಬೇಕಾಗಿದೆ.

ತಮಗೆ ಸಂಬಂಧಿಸದ ಯುದ್ಧದಲ್ಲಿ ಮಕ್ಕಳು ಅಪಾಯಕ್ಕೆ ಗುರಿಯಾಗಬಾರದು. ವಿಷ, ಪೂರ್ವಗ್ರಹ ಅಥವಾ ಸ್ವಚ್ಛತೆಯ ಕೊರತೆಯಂತಹ ಕಾರಣಗಳೊಂದಿಗೆ ಮಕ್ಕಳ ಹಿತಾಸಕ್ತಿಯನ್ನು ರಾಜಿ ಮಾಡಿಕೊಳ್ಳುವಂತೆಯೂ ಆಗಬಾರದು. ಬೆಳಗಾವಿ ದುಷ್ಕೃತ್ಯಕ್ಕೆ ಕಾರಣರಾದವರ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಬೇಕಾಗಿದೆ. ನ್ಯಾಯಾಲಯದ ಚೌಕಟ್ಟನ್ನು ಮೀರಿ ಇಂಥ ಹೇಯ ಹಿಂಸೆಗೆ ಕಾರಣವಾಗುವ ದ್ವೇಷದ ಮನಃಸ್ಥಿತಿಯನ್ನು ತಿರಸ್ಕರಿಸುವ ನಿಟ್ಟಿನಲ್ಲಿ ಸಮಾಜ ಸಂವೇದನಾಶೀಲ ಆಗಬೇಕಿದೆ. ಇಂಥ ದುಷ್ಕೃತ್ಯಗಳಿಗೆ ವಿಭಜಕ ಮನಃಸ್ಥಿತಿಯ ರಾಜಕಾರಣಿಗಳು, ಶಿಕ್ಷೆಯ ಭಯವಿಲ್ಲದೆ ಅತಿರೇಕದಿಂದ ವರ್ತಿಸುವ ಗುಂಪುಗಳು ಮಾತ್ರವಲ್ಲದೆ, ಎಲ್ಲವನ್ನೂ ಸಹಿಸಿಕೊಳ್ಳುವ ಸಮಾಜದ ಉದಾಸೀನ ಪ್ರವೃತ್ತಿಯೂ ಕಾರಣವಾಗಿದೆ.

**ನಮ್ಮ ಮುಂದಿರುವ ಆಯ್ಕೆಯು ಸ್ಪಷ್ಟವಾಗಿದೆ:** ವಿಷಕಾರಿ ಕಾರ್ಯಸೂಚಿ ಯನ್ನು ಒಗ್ಗಟ್ಟಿನಿಂದ ವಿರೋಧಿಸುವುದು ಅಥವಾ ಸಮಾಜದ ಮಾನವೀಯ ಸಂರಚನೆ ದ್ವೇಷದ ಉರಿಗೆ ಬಲಿಯಾಗುತ್ತಿರುವುದನ್ನು ನೋಡಿಕೊಂಡು ನಿಷ್ಕ್ರಿಯರಾಗಿರುವುದು.

# ಬಾಪು - ಪಾಪು

ವಿಶ್ವಾಸ್.ಡಿ.ಗೌಡ




**ಸತ್ಯ ಹರಿಶ್ಚಂದ್ರನಂತಾಗುವೆ**

ಒಂದು ರವಿವಾರದ ಮಧ್ಯಾಹ್ನದ ಹೊತ್ತು ಮನೆ ಜಗಲಿಯಲ್ಲಿ ಕುಳಿತಿದ್ದ ಮೋಹನನು ಕಣ್ಣೀರು ಸುರಿಸುತ್ತಿರುವುದನ್ನು ಗಮನಿಸಿದ ಅವನ ಅಕ್ಕ ರಲಿತ, ತಾಯಿಯನ್ನು ಕರೆದುಕೊಂಡು ಬಂದಿದ್ದಳು. ಮಗನ ಬಳಿಗೆ ಹೋದ ತಾಯಿ, ಏನಾಯಿತು ಮೋನೂ ಎಂದು ಪ್ರೀತಿಯಿಂದ ಪ್ರಶ್ನಿಸಿದ್ದರು. ಆದರೆ, ತನ್ನ ಅಳುವಿನ ಕಾರಣವನ್ನು ಹೇಳಲು ಮೋನುವಿಗೆ ನಾಚಿಕೆಯಾಗಿತ್ತು.

**ನಡೆದದ್ದು ಇಷ್ಟು:** ಹಿಂದಿನ ದಿನದ ಸಂಜೆ, ಮೋಹನನು ಶಾಲೆಯ ಪಕ್ಕದ ಮೈದಾನದಲ್ಲಿ ಪ್ರದರ್ಶಿಸಲ್ಪಡುತ್ತಿದ್ದ ಸತ್ಯ ಹರಿಶ್ಚಂದ್ರ ನಾಟಕ ನೋಡಲು ಹೋಗಿದ್ದನು. ಎಂತಹಾ ಕಷ್ಟ ಎದುರಾದರೂ ಸತ್ಯವನ್ನಲ್ಲದೆ ಬೇರೇನನ್ನೂ ಹೇಳಲಾರನೆಂದು ಜಗತ್ಪಸಿದ್ಧನಾಗಿದ್ದವನು ಮಹಾರಾಜ ಸತ್ಯ ಹರಿಶ್ಚಂದ್ರ. ಅವನನ್ನು ಪರೀಕ್ಷೆ ಮಾಡುವ ಉದ್ದೇಶದಿಂದ ವಿಶ್ವಾಮಿತ್ರನೆಂಬ ಮುನಿಯು ಹರಿಶ್ಚಂದ್ರನಿಗೆ ಬಗೆ ಬಗೆಯಲ್ಲಿ ಕಾಡಿಸಿ, ಅವನಿಂದ ಒಂದು ಸುಳ್ಳನ್ನಾದರೂ ಹೇಳಿಸಲು ಯತ್ನಿಸುತ್ತಿದ್ದನು. ಆದರೆ, ಎಲ್ಲಾ ಕಷ್ಟಗಳನ್ನೂ ಧೈರ್ಯದಿಂದ ಎದುರಿಸುವ ಹರಿಶ್ಚಂದ್ರನನ್ನು ರಾಜಾ ನೋಡುತ್ತಿರುವುದು ಮೆಚ್ಚಿಕೊಳ್ಳುತ್ತಲೇ, ತಾನು ನಾಟಕವೆಂಬುದನ್ನೂ ಮರೆತ ಮೋಹನನು ದುಃಖದಿಂದ ಬಿಕ್ಕಳಿಸಿ ಬಿಕ್ಕಳಿಸಿ ಅತ್ತಿದ್ದನು.

ಮರುದಿನವೂ ನಾಟಕದ ಗುಂಗಿನಲ್ಲೇ ಇದ್ದ ಮೋಹನನು ನಾಟಕದ ದೃಶ್ಯಗಳನ್ನು ನೆನಪಿಸಿಕೊಳ್ಳುತ್ತ, ತಾನು ಕೂಡಾ ರಾಜಾ ಹರಿಶ್ಚಂದ್ರನಂತೆ ಸತ್ಯಸಂಧನಾಗಬೇಕೆಂದು ಯೋಚಿಸುತ್ತಾ ಅಂಗಳದಲ್ಲಿ ಕುಳಿತಿದ್ದನು. ಅವನ ಅರಿವಿಲ್ಲದೆ ಸುರಿದ



ಕಣ್ಣೀರನ್ನು ತಪ್ಪಾಗಿ ತಿಳಿದ ರಲಿತಕ್ಕ, ಮನೆಯವರೆಲ್ಲ ಹೊರಗೆ ಬಂದು ಅಳುವ ಮೋಹನನನ್ನು ನೋಡುವಂತೆ ಮಾಡಿಬಿಟ್ಟಿದ್ದಳು. ಮೋಹನನ ಅಳುವಿನ ಕಾರಣವನ್ನು ತಿಳಿದ ಹಿರಿಯವರೆಲ್ಲ ಅವನ ಬಗ್ಗೆ ಹೆಮ್ಮೆಪಟ್ಟರು. ತಾಯಿಯು ತನ್ನ ಮಗನ ತಲೆಯನ್ನು ಅಭಿಮಾನದಿಂದ ಸವರುತ್ತಾ, ಸತ್ಯ ಹರಿಶ್ಚಂದ್ರನಂತೆ ಆಗುವ ನಿನ್ನ ಆಸೆ ನೆರವೇರಲಿ' ಎಂದು ಆಶೀರ್ವಾದ ಮಾಡಿದ್ದರು.

**ಮದುವೆಯೂ ಆಯಿತು :** ಆ ದಿನಗಳಲ್ಲಿ ದೇಶಾದ್ಯಂತ ಬಾಲ್ಯವಿವಾಹ'ವೆಂಬ ಪದ್ಧತಿ ಆಚರಣೆಯಲ್ಲಿತ್ತು. ಮಕ್ಕಳು ಆಟವಾಡುವ ಸಣ್ಣ ವಯಸ್ಸಿನಲ್ಲೇ ಮದುವೆ ಮಾಡಿಸುವುದು ಒಳ್ಳೆಯದು ಎಂಬುದಾಗಿ ನಂಬಿದ್ದ ಹಿರಿಯರು, ಅಂತಹ ಮದುವೆ ಸಮಾರಂಭಗಳನ್ನು ಬಹಳ ಅದ್ದೂರಿಯಾಗಿಯೇ ನಡೆಸುತ್ತಿದ್ದರು.

ಆಗ ದೇಶವನ್ನಾಳುತ್ತಿದ್ದ ಬ್ರಿಟಿಷರ ಕಾನೂನುಗಳಂತೆ ಬಾಲ್ಯವಿವಾಹ ಪದ್ಧತಿಯು ಅಪರಾಧವಾಗಿದ್ದಿರಲಿಲ್ಲ. ದೊಡ್ಡ ದೊಡ್ಡ ಸಿರಿವಂತರ ಕುಟುಂಬದಲ್ಲಿ ನಡೆಯುತ್ತಿದ್ದ ಬಾಲ್ಯವಿವಾಹದ ಸಂಭ್ರಮಗಳಲ್ಲಿ ಸರಕಾರದ ಹಿರಿಯ ಅಧಿಕಾರಿಗಳೂ ಭಾಗವಹಿಸಿ ಶುಭ ಹಾರೈಸುತ್ತಿದ್ದರು. ಮೋಹನದಾಸನಿಗಿಂತ ಒಂಬತ್ತು ವರ್ಷ ಹಿರಿಯನಾಗಿದ್ದ ಅಣ್ಣ ಲಕ್ಷ್ಮೀದಾಸನಿಗೆ ಅದಾಗಲೇ ಮದುವೆಯಾಗಿತ್ತು.

ಮೋಹನನಿಗಿಂತ ಎರಡು ವರ್ಷ ಹಿರಿಯವನಾಗಿದ್ದ ಸಣ್ಣಣ್ಣ ಕರ್ಸನ್ ದಾಸನಿಗೂ, ಒಂದು ವರ್ಷ ಹಿರಿಯವನಾಗಿದ್ದ ನೆಂಟರ ಹುಡುಗನೊಬ್ಬನಿಗೂ ಜೊತೆಯಲ್ಲೇ ಮದುವೆ ನಿಶ್ಚಯವಾಗಿತ್ತು.

ಎರಡು ಮದುವೆಗಳ ಜೊತೆಯಲ್ಲೇ ಮೋಹನನಿಗೂ ಮದುವೆ ಮಾಡಿದರೆ, ವೆಚ್ಚದಲ್ಲಿ ಉಳಿತಾಯವಾಗುತ್ತದೆ ಎಂಬ ಯೋಚನೆ ಯಿಂದ, ಮತ್ತೊಬ್ಬಳು ಹುಡುಗಿಯನ್ನು ಹುಡುಕಿ, ಮೋಹನನಿಗೂ ಮದುವೆ ನಿಶ್ಚಯ ಮಾಡಿದ್ದರು.

**ಜನ್ಮ ಮತ್ತು ಕರ್ಮ:** ಒಂದು ಮಧ್ಯಾಹ್ನ ಮೋಹನದಾಸನು ಆಟವಾಡಲೆಂದು ಶಾಲೆಯ ಬಯಲಿಗೆ ನಡೆದುಕೊಂಡು ಹೋಗುತ್ತಿದ್ದನು. ಅರ್ಧ ದಾರಿಯಲ್ಲಿದ್ದಾಗ ಮಳೆ ಸುರಿಯ ತೊಡಗಿದ್ದರಿಂದ ರಸ್ತೆಬದಿಯ ಅಂಗಡಿಯೊಂದರ ನಿಂತನು. ಮಳೆಯಿಂದ ತೋಯ್ಯುವುದರಿಂದ ತಪ್ಪಿಸಿಕೊಳ್ಳಬಯಸಿದ್ದ ನಾಲ್ಕು ಮಂದಿ ಹಿರಿಯರೂ ಅಲ್ಲಿ ನಿಂತಿದ್ದರು.

ಅದೇ ಹೊತ್ತಿಗೆ ಸರಿಯಾಗಿ, ಕಪ್ಪು ಬಣ್ಣದ ಯುವಕನೊಬ್ಬ ಅಲ್ಲಿಗೆ ಓಡೋಡಿ ಬಂದನು. ಆದರೆ ಅವನು ಅಂಗಡಿಯ ಮಾಡಿನ ನೆರಳಿಗೆ ಬಾರದೆ, ಸ್ವಲ್ಪವೇ ದೂರದಲ್ಲಿದ್ದ ಮರವೊಂದರ ಕೆಳಗೆ ಹೋಗಿ ನಿಂತುಕೊಂಡನು. ಅದನ್ನು ಕಂಡ ಮೋಹನದಾಸನಿಗೆ ಆಶ್ಚರ್ಯವಾಯಿತು. ತನ್ನ ಬಳಿಗೆ ಬಂದು ಮಾಡಿನ ಅಡಿಯಲ್ಲಿ ನಿಂತುಕೊಳ್ಳುವಂತೆ ಆ ಕಪ್ಪು ಯುವಕನನ್ನು ಗಟ್ಟಿ ಧ್ವನಿಯಲ್ಲಿ ಕರೆದನು. ಆದರೆ, ಆ ಯುವಕನು ಮೋಹನದಾಸನ ಮಾತನ್ನು ಕೇಳಿಯೂ ಕೇಳಿಸಿಕೊಳ್ಳದವನಂತೆ ಕಲ್ಲಿನಂತೆ ನಿಂತುಬಿಟ್ಟಿದ್ದನು.

ಆಗ, ಜೋರಾಗಿ ನಕ್ಕ ಅಂಗಡಿಯ ಮಾಲಕನು ಮೋಹನದಾಸನಿಗೆ ತಿಳಿಯಹೇಳುವಂತೆ, 'ನೋಡು ಮಗೂ ಅದು ಅವರವರ ಕರ್ಮದ ಫಲ. ಅವನು ಪೂರ್ವಜನ್ಮದಲ್ಲಿ ಪಾಪ ಮಾಡಿದ್ದನು. ಕರ್ಮದ ಫಲವನ್ನು ತನ್ನ ಜತೆಗೆ ಹೊತ್ತುಕೊಂಡು ಬಂದು ಈ ಜನ್ಮದಲ್ಲಿ ನೀಚಕುಲದಲ್ಲಿ ಹುಟ್ಟಿದ್ದಾನೆ. ಆದ್ದರಿಂದ ಅವನಿಗೆ ನಮ್ಮಂತವರ ಜೊತೆಗೆ ನಿಲ್ಲುವ ಹಕ್ಕು ಇಲ್ಲ' ಎಂದನು. ಹಿಂದಿನ ಜನ್ಮದಲ್ಲಿ ಪಾಪ ಮಾಡಿದ್ದರೆ ಈ ಜನ್ಮದಲ್ಲಿ ಮಳೆಗೆ ಒದ್ದೆಯಾಗಿ ನಿಲ್ಲಬೇಕೆನ್ನುವ ವಾದ, ಮೋಹನದಾಸನಿಗೆ ಬಹಳ ತಮಾಷೆಯಾಗಿ ಕಂಡಿತು. ಹಾಗಾದರೆ, ತಾನು ಹಿಂದಿನ ಜನ್ಮದಲ್ಲಿ ಒಳ್ಳೆಯ ಕೆಲಸ ಮಾಡಿದ್ದಿರಬೇಕು. ಆದ್ದರಿಂದ ತಾನು ಉತ್ತಮ ಕುಲದಲ್ಲಿ ಹುಟ್ಟಿರುವೆ. ಅದೇ ಕಾರಣದಿಂದ ತಾನೀಗ ಹೊರಗೆ ಹೋಗಿ ನಿಂತರೂ, ಸುರಿಯುತ್ತಿರುವ ಮಳೆ ನೀರಿಗೆ ತಾನು ಒದ್ದೆಯಾಗಬಾರದು. ಹೀಗೆಂದು ಯೋಚಿಸಿದ ಮೋಹನದಾಸನು, ತಾನು ನಿಂತಿರುವಲ್ಲಿಂದ ಓಡಿ ಹೋಗಿ ಆ ಮರದ ಅಡಿಯಲ್ಲಿ ಯುವಕನ ಬಳಿ ನಿಂತುಬಿಟ್ಟನು. ಆದರೆ ಅವನು ನಿರೀಕ್ಷಿಸಿದಂತೆ ಮಳೆ ನಿಲ್ಲಲಿಲ್ಲ. ಪೂರ್ವಜನ್ಮದ ಪಾಪ ಪುಣ್ಯದ ಫಲಗಳು ಎಂಬ ನಂಬಿಕೆಗಳೆಲ್ಲ ಹಸಿ ಹಸಿ ಸುಳ್ಳು ಎಂಬುದು ಅವನಿಗೆ ಅರ್ಥವಾಗಿತ್ತು..

# ಜಂಟಿ ಉದ್ಯಮ ಸ್ಥಾಪನೆಗೆ ಎಡಿಎಫ್‌ಸಿ ಜೊತೆಗೆ ಸಹಭಾಗಿತ್ವ ಮಾಡಿಕೊಂಡ ಎಸ್‌ಎಂಪಿಪಿ

• ಉದಯವಾಹಿನಿ, ಬೆಂಗಳೂರು

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ 'ಮೇಕ್ ಇನ್ ಇಂಡಿಯಾ, ಮೇಕ್ ಫಾರ್ ದಿ ವರ್ಲ್ಡ್' ಪರಿಕಲ್ಪನೆಗೆ ಪೂರಕವಾಗಿ ಭಾರತದ ಪ್ರಮುಖ ರಕ್ಷಣಾ ತಂತ್ರಜ್ಞಾನ ಕಂಪನಿಯಾದ ಎಸ್‌ಎಂಪಿಪಿ ಲಿಮಿಟೆಡ್ ಜಂಟಿ ಉದ್ಯಮ ಸ್ಥಾಪಿಸುವ ಇಧ್ದೇಶದಿಂದ ಫಿಲಿಪೈನ್ಸ್‌ನ ಏಷಿಯಾ ಡಿಫೆನ್ಸ್ ಆಂಡ್ ಫೈರ್‌ಪವರ್ ಕಾರ್ಪೊರೇಷನ್ (ಎಡಿಎಫ್‌ಸಿ) ಜೊತೆಗೆ ಒಂದು ಐತಿಹಾಸಿಕ ಒಪ್ಪಂದಕ್ಕೆ ಸಹಿ ಹಾಕಿದೆ. ಪ್ರಸ್ತಾಪಿತ ಜಂಟಿ ಉದ್ಯಮದ ಕೇಂದ್ರ ಕಚೇರಿಯು ಫಿಲಿಪೈನ್ಸ್‌ನಲ್ಲಿ ಇರಲಿದೆ. ರಿಪಬ್ಲಿಕ್ ಆಕ್ಟ್ ನಂ. 12024ರ ಅಡಿಯಲ್ಲಿ ಫಿಲಿಪೈನ್ಸ್ ಸರ್ಕಾರದ ಸ್ವಾವಲಂಬಿ ರಕ್ಷಣಾ ನೀತಿಗೆ ಅನುಗುಣವಾಗಿ ಎಸ್‌ಎಂಪಿಪಿಯ ಅತ್ಯಾಧುನಿಕ ರಕ್ಷಣಾ ಉತ್ಪನ್ನಗಳ ಉತ್ಪಾದನೆ, ಜೋಡಣೆ ಮತ್ತು ವಿತರಣೆ ಮಾಡಲಾಗುತ್ತದೆ. ಈ ಮೂಲಕ ಎಸ್‌ಎಂಪಿಪಿ ಸಂಸ್ಥೆಯು ಆಗ್ನೇಯ ಏಷಿಯಾಗೆ ವಿಸ್ತರಣೆ ಹೊಂದುತ್ತಿರುವುದು ಮಾತ್ರವೇ ಅಲ್ಲ, ಈ ನಡೆಯು ಸ್ವದೇಶಿ ರಕ್ಷಣಾ ಉತ್ಪನ್ನಗಳು ಮತ್ತು ತಂತ್ರಜ್ಞಾನವನ್ನು ರಫ್ತು ಮಾಡುವ ಭಾರತದ ಸಾಮರ್ಥ್ಯವನ್ನು ತೋರಿಸುತ್ತದೆ.

ಈ ಕುರಿತು ಮಾತನಾಡಿರುವ ಎಸ್‌ಎಂಪಿಪಿ ಲಿಮಿಟೆಡ್‌ನ ಸಿಇಓ ಶ್ರೀ ಅಶಿಶ್ ಕನ್ಸಾಲ್ ಅವರು, ಈ ಜಂಟಿ ಉದ್ಯಮವು ಭಾರತದ ಶ್ರೇಷ್ಠ ರಕ್ಷಣಾ ಉತ್ಪನ್ನಗಳನ್ನು ಅಗತ್ಯ ರಾಷ್ಟ್ರಗಳಿಗೆ ಒದಗಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ.

ಆತ್ಮನಿರ್ಭರ ಭಾರತ ಪರಿಕಲ್ಪನೆಗೆ ಪೂರಕವಾಗಿ ನಮ್ಮ ಸ್ವದೇಶಿ ತಂತ್ರಜ್ಞಾನಗಳು. ಉತ್ಪನ್ನಗಳನ್ನು ವಿದೇಶಕ್ಕೆ ತೆಗೆದುಕೊಂಡು ಹೋಗುತ್ತಿರುವುದು ನಮಗೆ ಹೆಮ್ಮೆಯ ಕ್ಷಣವಾಗಿದೆ. ನಮ್ಮ ತಂತ್ರಜ್ಞಾನ ಮತ್ತು ಜ್ಞಾನವನ್ನು ಹಂಚಿಕೊಳ್ಳುವ ಮೂಲಕ ಸ್ಥಿರವಾದ, ಸ್ವಾವಲಂಬಿ ರಕ್ಷಣಾ ವ್ಯವಸ್ಥೆಯನ್ನು ನಿರ್ಮಿಸಲು ನಾವು ಫಿಲಿಪೈನ್ಸ್‌ಗೆ ಸಹಾಯ ಮಾಡುತ್ತಿದ್ದೇವೆ'' ಎಂದರು.

**ಈ ಕುರಿತು ಎಡಿಎಫ್‌ಸಿಯ ಚೇರ್ ಮನ್ ಮತ್ತು ಸಿಇಓ ಜೆರುಯೆಲ್ ಡಿ. ಸಾಂಚೆಜ್ ಅವರು ಮಾತನಾಡಿ, ಈ ಸಹಭಾಗಿತ್ವದ ಮೂಲಕ ಫಿಲಿಪೈನ್ಸ್‌ನ ಸಶಸ್ತ್ರ ಪಡೆಗಳಿಗೆ ಅತ್ಯಾಧುನಿಕ ರಕ್ಷಣಾ ತಂತ್ರಜ್ಞಾನ ಒದಗಿಸುವುದರ ಜೊತೆಗೆ ಸ್ಥಳೀಯರಿಗೆ ಉದ್ಯೋಗಾವಕಾಶ ನೀಡಲಿದ್ದೇವೆ. ಫಿಲಿಪೈನ್ಸ್ ರಕ್ಷಣೆ ವಿಚಾರದಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದೆ'' ಎಂದು ಹೇಳಿದರು.**

ಈ ಜಂಟಿ ಉದ್ಯಮದಲ್ಲಿ ಫಿಲಿಪಿನೋ ಪಾಲುದಾರು ಹೆಚ್ಚಿನ ಪಾಲು ಅಂದ್ರೆ, ಕನಿಷ್ಠ ಶೇ.60ರಷ್ಟು ಒಡೆತನ ಹೊಂದಿರುತ್ತಾರೆ. ಒಪ್ಪಂದದ ಭಾಗವಾಗಿ ಎಸ್‌ಎಂಪಿಪಿ ತನ್ನ ಸ್ವದೇಶಿ ತಂತ್ರಜ್ಞಾನವನ್ನು ಒದಗಿಸುತ್ತದೆ, ಜೊತೆಗೆ ಉತ್ಪಾದನೆಗೆ ನೆರವಾಗುತ್ತದೆ. ಈ ಉತ್ಪನ್ನಗಳು ಒಂದು ದಶಕದಿಂದ ಭಾರತೀಯ ಸಶಸ್ತ್ರ ಪಡೆಯ ಸಿಬ್ಬಂದಿಯ ಅನೇಕ ಜೀವಗಳನ್ನು ಉಳಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿರುವುದು ಗಮನಾರ್ಹ. ಈ ಜಂಟಿ ಉದ್ಯಮದ ಭಾಗವಾಗಿ ಫಿಲಿಪಿನೋ-ನೇತೃತ್ವದ ಉತ್ಪಾದನಾ ಘಟಕ ಆರ್‌ಡಿ ಸಾಮರ್ಥ್ಯವನ್ನು ಶೀಘ್ರವೇ ನಿರ್ಮಿಸಲಾಗುತ್ತದೆ. ಇದರ ಬಹುಪಾಲು ಮೇಲ್ವಿಚಾರಣೆಯನ್ನು ಫಿಲಿಪಿನೋ ಬೋರ್ಡ್ ನಡೆಸಲಿದೆ.




# ಮಾಲೂರುವರೆಗೆ ನಮ್ಮ ಮೆಟ್ರೊ ವಿಸ್ತರಣೆ ಇಲ್ಲ: ಕೇಂದ್ರ ಸರ್ಕಾರ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ನಮ್ಮ ಮೆಟ್ರೊವನ್ನು ಕೋಲಾರ ಜಿಲ್ಲೆಯ ಮಾಲೂರಿನ ತನಕ ವಿಸ್ತರಿಸುವ ಯಾವುದೇ ಪ್ರಸ್ತಾವ ಇಲ್ಲ ಎಂದು ಕೇಂದ್ರ ವಸತಿ ಹಾಗೂ ನಗರ ವ್ಯವಹಾರ ಸಚಿವಾಲಯ ಸ್ಪಷ್ಟಪಡಿಸಿದೆ.



ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಕೋಲಾರ ಸಂಸದ ಎಂ. ಮಲ್ಲೇಶಬಾಬು ಕೇಳಿದ ಪ್ರಶ್ನೆಗೆ ಇಲಾಖೆಯ ರಾಜ್ಯ ಸಚಿವ ತೋಖಾನ್ ಸಾಹು ಉತ್ತರ ನೀಡಿ, 'ಯೋಜನೆಯ ಪ್ರಸ್ತಾವ ರೂಪಿಸುವ ಹೊಣೆ ರಾಜ್ಯ ಸರ್ಕಾರದ್ದು. ರಾಜ್ಯದಿಂದ ಪ್ರಸ್ತಾವ ಬಂದ ಸಂದರ್ಭದಲ್ಲಿ ಕೇಂದ್ರದಿಂದ ಹಣಕಾಸಿನ ನೆರವು ನೀಡಲಾಗುತ್ತದೆ' ಎಂದರು.



# ಹೃದಯ ಸಮಸ್ಯೆ ಪತ್ತೆ ಹಚ್ಚಿದ ನಾರಾಯಣ ಹೆಲ್ತ್‌ನ ಎಐ

• ಉದಯವಾಹಿನಿ, ಬೆಂಗಳೂರು

ಪ್ರತಿಷ್ಠಿತ ನಾರಾಯಣ ಹೆಲ್ತ್ ಆಸ್ಪತ್ರೆಯ ನಾರಾಯಣ ಹೆಲ್ತ್ ಕ್ಲಿನಿಕಲ್ ರಿಸರ್ಚ್ ತಂಡ ಮತ್ತು ನಾರಾಯಣ ಹೆಲ್ತ್‌ನ ಅನಾಲಿಟಿಕ್ಸ್, ಎಐ ವಿಭಾಗವಾದ ಮೇಧಾ ಎಐ ಇಂದು ಮಹತ್ವದ ಘೋಷಣೆ ಮಾಡಿದ್ದು, ಈ ಎರಡೂ ತಂಡಗಳು ಸೇರಿ ತಕ್ಷಣವೇ ಹೃದಯ ಸಮಸ್ಯೆಯನ್ನು ಪತ್ತೆ ಹಚ್ಚ ಬಲ್ಲ ಎಐ ಮಾಡೆಲ್ ಅನ್ನು ಅಭಿವೃದ್ಧಿ ಪಡಿಸಿದೆ. ಈ ಮಾಡೆಲ್ ಸಾಮಾನ್ಯ ಇಸಿಜಿ ಚಿತ್ರಣದಿಂದ ಹೃದಯದ ಕಾರ್ಯಕ್ಷಮತೆಯನ್ನು ಪತ್ತೆ ಹಚ್ಚಬಲ್ಲ, ಅದರಲ್ಲೂ ನಿರ್ದಿಷ್ಟವಾಗಿ ಲೆಫ್ಟ್ ವೆಂಟ್ರಿಕ್ಯುಲರ್ ಇಜೆಕ್ಷನ್ ಫ್ರಾಕ್ಷನ್ ಅನ್ನು ತಕ್ಷಣವೇ ಪತ್ತೆ ಹಚ್ಚಬಲ್ಲ ಒಂದು ಅತ್ಯಂತ ಪ್ರಮುಖ ಎಐ ಮಾಡೆಲ್ ಆಗಿದ್ದು, ರೋಗ ನಿರ್ಣಯ ವಿಭಾಗದಲ್ಲಿ ಮಹತ್ವದ ಗೆಲುವಾಗಿದೆ. ಈ ಮಾದರಿಯನ್ನು ವೈದ್ಯಕೀಯ ಕಾರ್ಯನಿರ್ವಹಣೆಯಲ್ಲಿ ಸುಗಮವಾಗಿ ಸಂಯೋಜಿಸುವಂತೆ ವಿನ್ಯಾಸಗೊಳಿಸಲಾಗಿದ್ದು, ಹೃದಯ ವೈಫಲ್ಯವನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಲು ಮತ್ತು ಸೀಮಿತ ಸಂಪನ್ಮೂಲ ಇರುವ ಸ್ಥಳಗಳಲ್ಲಿ ರೋಗನಿರ್ಣಯ ವ್ಯವಸ್ಥೆಯನ್ನು ಸುಧಾರಿಸಲು ಈ ಮಾದರಿ ಬಳಕೆಯಾಗಲಿದೆ.

ಈ ಅದ್ಭುತ ಆವಿಷ್ಕಾರವು ಲಕ್ಷಾಂತರ ರೋಗಿಗಳ ರೋಗನಿರ್ಣಯ ವಿಚಾರದಲ್ಲಿನ ಒಂದು ಪ್ರಮುಖ ಕೊರತೆಯನ್ನು ನೀಗಿಸಲಿದೆ. ಭಾರತದಾದ್ಯಂತ ಸುಮಾರು 10 ಮಿಲಿಯನ್ ಜನರಿಗೆ ಹೃದಯ ವೈಫಲ್ಯ ಸಮಸ್ಯೆ ಕಾಡುತ್ತದೆ. ಅದರಲ್ಲಿ ವಾರ್ಷಿಕವಾಗಿ 1.8 ಮಿಲಿಯನ್ ಮಂದಿ ಆಸ್ಪತ್ರೆಗೆ ಸೇರಿಕೊಳ್ಳುತ್ತಾರೆ. ಆದರೆ ಹೃದಯ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಬಲ್ಲ ಅತ್ಯಂತ ಉನ್ನತ ಸೌಲಭ್ಯವಾಗಿರುವ ಇಕೋಕಾರ್ಡಿಯೋಗ್ರಫಿ (ಇಕೋ) ಬಹಳಷ್ಟು ಕಡೆಗಳಲ್ಲಿ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ದೊರೆಯುವುದು ಕಷ್ಟ.

ಈ ಹಿನ್ನೆಲೆಯಲ್ಲಿ ನಾರಾಯಣ ಹೆಲ್ತ್‌ನ ಎಐ ಮಾದರಿಯು ಎಲ್ಲೆಡೆ ಲಭ್ಯವಿರುವ ಇಸಿಜಿ ಯಂತ್ರಗಳು ಮತ್ತು ಕ್ಲೌಡ್ ಆಧಾರಿತ ವಿಶ್ಲೇಷಣೆಯ ಮೂಲಕ ರೋಗಿಗಳ ಹೃದಯ ಕಾಯಕ್ಷಮತೆಯನ್ನು ಎಲ್ಲಿ ಬೇಕಾದರೂ ಮೌಲ್ಯಮಾಪನ ಮಾಡಬಲ್ಲ ಅತ್ಯುನ್ನತ ವ್ಯವಸ್ಥೆಯನ್ನು ಒದಗಿಸುತ್ತದೆ. 1,00,000ಕ್ಕೂ ಹೆಚ್ಚು ಇಸಿಜಿ ಚಿತ್ರಣಗಳು ಇಕೋಕಾರ್ಡಿ ಯೋಗ್ರಾಮ್ ವರದಿಗಳ ಜೋಡಣೆಯ ಆಧಾರದ ಮೇಲೆ ಎಐ ಮಾದರಿಯನ್ನು ತರಬೇತಿಗೊಳಿಸಲಾಗಿದ್ದು, ಈ ಮಾದರಿಯು ಅತ್ಯುತ್ತಮ ಫಲಿತಾಂಶವನ್ನು ಒದಗಿಸಿದೆ. 14 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 57,000ಕ್ಕೂ ಹೆಚ್ಚು ರೋಗಿಗಳನ್ನು ಈ ಮೂಲಕ ಪರೀಕ್ಷೆ ಮಾಡಲಿದ್ದು, ಈ ಮಾದರಿಯು ಅದರಲ್ಲಿ ತೀವ್ರ ಕಡಿಮೆ ಇಎಫ್ (35%) ಹೊಂದಿರುವ ಶೇ.97ರಷ್ಟು ಮಂದಿಯನ್ನು ಪತ್ತೆ ಹಚ್ಚಿದೆ. ವಿಶೇಷವೆಂದರೆ ಇದರಲ್ಲಿ ಬಹಳಷ್ಟು ರೋಗಿಗಳು ಇಕೋಕಾರ್ಡಿಯೋಗ್ರಫಿ ಹೊಂದುವ ಸರಾಸರಿ 58 ದಿನಗಳ ಮೊದಲೇ ಅವರಲ್ಲಿ ಹೃದಯ ಸಮಸ್ಯೆ ಇರುವುದಾಗಿ ಪತ್ತೆ ಹಚ್ಚಲಾಗಿತ್ತು. ನಾರಾಯಣ ಹೆಲ್ತ್‌ನ ಸಂಸ್ಥಾಪಕ ಅಧ್ಯಕ್ಷರಾದ ಡಾ. ದೇವಿ ಶೆಟ್ಟಿ ಅವರು, ನಾರಾಯಣ ಹೆಲ್ತ್ ನ ಗ್ರೂಪ್ ಸಿಇಓ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಡಾ. ಇಮ್ಯಾನುಯೆಲ್ ರೂಪರ್ಟ್ ಅವರು, ನಾರಾಯಣ ಹೆಲ್ತ್ ನ ಚೀಫ್ ಸೈಂಟಿಫಿಕ್ ಆಫೀಸರ್ ಮತ್ತು ಈ ಯೋಜನೆಯ ಪ್ರಮುಖ ಸಂಶೋಧಕರಾದ ಡಾ. ಪ್ರದೀಪ್ ನಾರಾಯಣ್ ಅವರು, ನಾರಾಯಣ ಹೆಲ್ತ್ ನ ಚೀಫ್ ಮೆಡಿಕಲ್ ಆಫೀಸರ್ ಡಾ. ಪಿ. ಎಂ. ಉತಪ್ಪ ಅವರು, ನಾರಾಯಣ ಹೆಲ್ತ್ ನ ಸೀನಿಯರ್ ಕನ್ಸಲ್ಟೆಂಟ್ ಕಾರ್ಡಿಯಾಕ್ ಇಪಿ ಕೋಲಿಜಿಯಂನ ಸ್ಟ್ರಾಟೆಜಿಕ್ ಲೀಡ್ ಆಗಿರುವ ಡಾ. ದೀಪಕ್ ಪದ್ಮನಾಭನ್ ಉಪಸ್ಥಿತರಿದ್ದರು.

**ಈ ಆವಿಷ್ಕಾರವು ಕೇವಲ ಎಐ ಮಾಡೆಲ್ ಅನ್ನು ಮೀರಿದ ಆವಿಷ್ಕಾರವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ವೈದ್ಯಕೀಯ ಪರಿಣತಿಯನ್ನು, ಸಂಶೋಧನೆಯನ್ನು ಅತ್ಯಾಧುನಿಕ ತಂತ್ರಜ್ಞಾನವನ್ನು ಸಂಯೋಜಿಸಿ ನೈಜ ಸಮಸ್ಯೆಗಳನ್ನು ದೊಡ್ಡ ಪ್ರಮಾಣದಲ್ಲಿ ಪರಿಹರಿಸಬೇಕು ಎಂಬ ನಾರಾಯಣ ಹೆಲ್ತ್ ಸಂಸ್ಥೆಯ ಧ್ಯೇಯವನ್ನು ಪ್ರತಿಬಿಂಬಿಸುತ್ತದೆ. ಸರಳ ಇಸಿಜಿಯ ಮೂಲಕ ಹೃದಯ ವೈಫಲ್ಯವನ್ನು ತಕ್ಷಣವೇ ಪತ್ತೆ ಮಾಡು ಈ ವ್ಯವಸ್ಥೆಯು ರೋಗನಿರ್ಣಯವನ್ನು ಉತ್ತಮಗೊಳಿಸುವುದು ಮಾತ್ರವೇ ಅಲ್ಲ ಜನಸಾಮಾನ್ಯರಿಗೆ ಈ ವ್ಯವಸ್ಥೆಯನ್ನು ಸುಲಭವಾಗಿ ಲಭ್ಯವಾಗಿಸುವ ವಿಚಾರದಲ್ಲಿ ಬಹಳ ದೊಡ್ಡ ಮುನ್ನಡೆಯಾಗಿದೆ. ಈ ಎಐ ಮಾಡೆಲ್ ಆಸ್ಪತ್ರೆಯ ಸೀಮಿತ ಆವರಣವನ್ನು ಮೀರಿ ಉತ್ತಮ-ಗುಣಮಟ್ಟದ ವೈದ್ಯಕೀಯ ಸೇವೆ ಒದಗಿಸಲು, ತ್ವರಿತ ನಿರ್ಧಾರ ಕೈಗೊಳ್ಳಲು, ಆರಂಭಿಕ ಹಂತದಲ್ಲಿ ಸಮಸ್ಯೆ ಪತ್ತೆ ಹಚ್ಚಲು ಮತ್ತು ಉತ್ತಮ ಫಲಿತಾಂಶಗಳನ್ನು ಪಡೆಯಲು ನೆರವಾಗುತ್ತದೆ. ಈ ಆವಿಷ್ಕಾರವು ಜಾಗತಿಕ ವೈದ್ಯಕೀಯ ಕ್ಷೇತ್ರದ ಭವಿಷ್ಯದಲ್ಲಿ ಮುಂಚೂಣಿಯಲ್ಲಿ ನಿಲ್ಲಬಲ್ಲ ಭಾರತದ ಸಾಮರ್ಥ್ಯವನ್ನು ತೋರಿಸಿದೆ'' ಎಂದು ಹೇಳಿದರು. ನಾರಾಯಣ ಹೆಲ್ತ್‌ನ ಸಂಸ್ಥಾಪಕ, ಅಧ್ಯಕ್ಷರಾದ ಡಾ. ದೇವಿ ಶೆಟ್ಟಿ**

ರಾಮಾಯಣ



ಶ್ರೀರಾಮನು ಪಾದುಕೆಗಳನ್ನು ಕೊಟ್ಟು ಭರತನನ್ನು ಕಳುಹಿಸಿದ್ದು

• ಹಿಂದಿನ ಸಂಚಿಕೆಯಿಂದ

## 112 ನೆಯ ಅಧ್ಯಾಯ

ಈ ಪಟ್ಟಣವು ರಾಹುವಿನಿಂದ ತುಡು ಕಲ್ಪಟ್ಟ ಚಂದ್ರನ ಸಮೀಪದಲ್ಲಿ ಕಾಂತಿ ಗುಂದಿರುವ ರೋಹಿಣೀ ನಕ್ಷತ್ರದಂತೆ ಒಪ್ಪುತ್ತಿದೆ. ಬೇಸಿಗೆಯಲ್ಲಿ ಅತ್ಯಂತ ಬಿಸಿಲಿನಿಂದ ಕಂಗೆಟ್ಟ ಹಂಸಪಕ್ಷಿ ಕೊಳರ್ವಕ್ಕಿ ಮೊದಲಾದ ಪಕ್ಷಿಗಳುಳ್ಳದ್ದಾಗಿ ನೀರು ಕಾದ ಕಾರಣ ತಳಸೇರಿದ ಮೀನು, ಮೊಸಳೆ. ಆನೆ ಮತ್ತು ನೀರಾನೆಗಳುಳ್ಳ, ಗಾಳಿಯಿಂದ ಶೋಭೆಗೊಂಡಿರುವ ಕೃಶವಾದ ಗಿರಿನದಿಯಂತಿದೆ. ಹೋಮಕಾಲದಲ್ಲಿ ಹವಿಸ್ಸಿನಿಂದ ಪ್ರಜ್ವಲಿಸುವ ಯಕ್ಷೇಶ್ವರನ ಜ್ವಾಲೆಯು ಥಟ್ಟನೆ ಆರಿಹೋದಂತಿದೆ. ಈ ನಗರವು ರಣರಂಗದಲ್ಲಿ ಗಜಾಶ್ವರಥಗಳನ್ನು ಕಳೆದುಕೊಂಡು ಧ್ವಜಪಟವು ಉರುಳಿ ವೀರರು ನಶಿಸಿಹೋಗಿರುವ ಸೈನ್ಯದಂತೆ ತೇಜೋಹೀನವಾಗಿದೆ. ವೈದಿಕರು ಯಜ್ಞ ಮುಗಿದಮೇಲೆ ತಮ್ಮ ಉಪಕರಣಗಳನ್ನು ತೆಗೆದುಕೊಂಡು ಹೊರಟುಹೋಗಲು. ಅಗ್ನಿಯಿಲ್ಲದ ಯಜ್ಞವೇದಿಯಂತೆ ಕಾಣುತ್ತದೆ. ಕೊಟ್ಟಿಗೆಯಲ್ಲಿ ವ್ಯವಭವು ಹೊರಟುಹೋಗಲು ವ್ಯಥೆಪಡುತ್ತ ಹುಲ್ಲನ್ನೂ ತಿನ್ನದೆ ಬೇಸರದಿಂದ ನಿಂತಿರುವ ಹಸುವಿನಂತಿದೆ. ದಿವ್ಯರತ್ನಗಳೆಲ್ಲವೂ ಕಳಚಿಹೋಗಲು ಕಾಂತಿಹೀನವಾಗಿ ಕಾಣುವ ಮುತ್ತಿನ ಸರದಂತಿದೆ. ಪುಣ್ಯಕ್ಷಯದಿಂದ ತಾರೆಯೊಂದು ಗಗನದಿಂದ ನೆಲಕ್ಕೆ ಬಿದ್ದಂತಿದೆ. ವಸಂತಕಾಲವು ಕಳೆದ ಮೇಲೆ ಹೂವುಗಳಿಲ್ಲದೆ ಭ್ರಮರಗಳು ಚದರಿಹೋಗಲು ಕಳ್ಳಿಚ್ಚಿನಿಂದ ಸುಟ್ಟು ಹೋದ ವನಲತೆಯಂತಿದೆ. ಈ ನಗರದಲ್ಲಿರುವ ಅಂಗಡಿಬೀದಿಯಲ್ಲಿ ವ್ಯಾಪಾರವಿಲ್ಲದೆ ಜನಸಂಚಾರವಿಲ್ಲದೆ ಹೋಗಿರುವುದರಿಂದ ಇದು. ಮೋಷದಿಂದ ಚಂದ್ರನಕ್ಷತ್ರಗಳು ಮುಚ್ಚಿಹೋಗಿರುವಾಗ ಕಾಣುವ ಆಕಾಶದಂತಿದೆ. ನೀರಿಲ್ಲದೆ ಜಲಚರಪ್ರಾಣಿಗಳಿಲ್ಲದೆ ನೈದಿಲೆಯಿಲ್ಲದೆ ಇರುವ ಕೆರೆಯಂತಿದೆ. ಭರತನು ಮೇಲ್ಕಂಡಂತೆ ನುಡಿಯುತ್ತ ಸುಮಂತ್ರನನ್ನು ಕುರಿತು ಮತ್ತೆ ಹೀಗೆಂದನು: ಅಯೋಧ್ಯಾಪಟ್ಟಣದಲ್ಲಿ ತಾಳ ಮದ್ದಳೆ ಗೀತ ಭೇರಿ ಮೊದಲಾದ ಯಾವ ಯಾವ ಗಂಭೀರ ಧ್ವನಿಗಳೂ ಕೇಳಿಸುವುದಿಲ್ಲ. ಊರ ಹೊರಗೆ ವಸರಿಸಿ ಪರಿಮಳಿಸುವ ಪುಷ್ಪರಸಗಂಧವನ್ನು ಕಾಣೆನು, ಪಟ್ಟಣದೊಳಗೆ ವಿನೋದಾರ್ಥವಾಗಿ ಸಂಚರಿಸುವ ಜನರ ರಥದ ಗಾಲಿಗಳ ಚೀತ್ಕಾರವೂ ಕುದುರೆಗಳ ಹೇಹಿತರವವೂ ಆನೆಗಳ ಬೃಂಹಿತಧ್ವನಿಯೂ ಕೇಳಿಸುವುದಿಲ್ಲ. ಪಟ್ಟಣದೊಳಗೆ ಯೌವನಸ್ಥರಾದ ಸೊಗಸುಗಾರರು ಯಾವಾಗಲೂ ಹೂವು ಮುಡಿದುಕೊಂಡು ಅನರ್ಘ್ಯವಾದ ಕುಂಕುಮ ಕಸ್ತೂರಿ ಪನುಗು ಜವಾಜಿಗಳಿಂದ ಸರ್ವಾಂಗಲೇಪನವನ್ನು ಮಾಡಿಕೊಂಡು ಸಂಚರಿಸುತ್ತ ವಿನೋದವಾಗಿರುವುದನ್ನು ಕಾಣೆನು. ಶ್ರೀರಾಮನ ಅಗಲಿಕೆಯಿಂದುಂಟಾದ ಮನೋವ್ಯಥೆಯಿಂದ ಅಯೋಧ್ಯಾಪಟ್ಟಣವು ಉತ್ಸಾಹವಿಲ್ಲದೆ ಭಯಂಕರವಾಗಿ ತೋರುತ್ತಿದೆ. ಶ್ರೀ ರಾಮನು ಸೀತಾ ಲಕ್ಷ್ಮಣ ಸಮೇತನಾಗಿ ತಿರುಗಿ ಬರಲು ಈ ಪಟ್ಟಣವು ವಸಂತೋತ್ಸವಗಳಿಂದಲೂ ಅತ್ಯಂತ ಹರ್ಷಯುಕ್ತರಾದ ನಟ ವಿಟ ಗಾಯಕರಿಂದಲೂ ಇಟ್ಟಣಿಸಿ ನಯನೋತ್ಸವಕರವಾಗಿ ಯಾವಾಗ ತೋರುವುದೊ ಎಂದು ಅನೇಕಪ್ರಕಾರದಲ್ಲಿ ಹಂಬಲಿಸುತ್ತ ದಶರಥರಾಯನ ಅರಮನಗೆ ಹೋಗಿ ಸಿಂಹಗಳಿಲ್ಲದ ಗುಹೆಯಂತೆಯೂ ಸೂರ್ಯಪ್ರಭೆಯಿಲ್ಲದ ಹಗಲಿನಂತೆಯೂ ಕಂಗೊಳಿಸದಿದ್ದ ಅಂತಃಪುರವನ್ನು ಕಂಡು ದುಃಖಾತಿಶಯದಿಂದ ಮುಖಕಾಂತಿಗುಂದಿ ಕಣ್ಣೀರು ತುಂಬಿ ವಿಷಣ್ಣನಾದನು.

ಮುಂದುವರಿಯುವುದು...

ಕಲಾ ಸಾಹಿತ್ಯ



ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

# ಡಾ:ವಿ ಕೆ ಗೋಕಾಕ್‌ರವರ 116ನೇ ವರ್ಷದ ಜನ್ಮಜಯಂತಿ

ಡಾ:ವಿ ಕೆ ಗೋಕಾಕ್ ರವರು 1909 ಆಗಸ್ಟ್ 09 ರಂದು ಧಾರವಾಡ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು. ತಂದೆ ಕೃಷ್ಣರಾವ್, ತಾಯಿ ಸುಂದರಬಾಯಿ. ಗೋಕಾಕರು ಗುಣಮಟ್ಟದ ಶಿಕ್ಷಣವನ್ನು ದೇಶ-ವಿದೇಶಗಳಲ್ಲಿ ಪಡೆದು ಶಿಕ್ಷಣ ಶ್ರೀಮಂತರಾಗಿ ಶಿಕ್ಷಣ ಕ್ಷೇತ್ರದಲ್ಲಿ ಹಲವು ಹುದ್ದೆಗಳಲ್ಲಿ ಗಣನೀಯ ಸೇವೆಯನ್ನು ಮಾಡಿದವರ ಪೈಕಿ ಒಬ್ಬರಾಗಿರುತ್ತಾರೆ. ಗೋಕಾಕರು ಬಹುಮುಖ ಪ್ರತಿಭಾವಂತರಾಗಿದ್ದು, ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಉತ್ತಮ ಕೃತಿಗಳನ್ನು ರಚಿಸಿದ್ದಾರೆ. ಕಲೋಪಾಸಕ ಪಯಣ, ಸಮುದ್ರಗೀತೆಗಳು, ತ್ರಿವಿಕ್ರಮರ ಆಕಾಶ ಗಂಗೆ,ನವ್ಯ ಕವಿತೆಗಳು, ಬಾಳ ದೇಗುಲದಲ್ಲಿ, ದ್ಯಾವಾಪೃಥಿವಿ, ಕಾಶ್ಮೀರ ಚಿಂತನ ಮೊದಲಾದ ಕವನ ಸಂಕಲಗಳನ್ನು ರಚಿಸಿದ್ದಾರೆ.


ಜನನಾಯಕ, ವಿಮರ್ಶಕ ವೈದ್ಯ, ಯುಗಾಂತರ, ಮುನಿದ ಮಾರಿ ಎಂಬ ನಾಟಕಗಳನ್ನು ರಚಿಸಿದ್ದಾರೆ.

ಕನ್ನಡದ ಸಾಹಿತ್ಯಕ್ಕೆ ಹೊಸ ಸ್ವರೂಪವನ್ನು ನೀಡಿ ಅದರ ಮುಂದಿನ ಬೆಳವಣಿಗೆಗೆ ದಾರಿತೋರಿ ಕೊಟ್ಟು ನವ್ಯಕಾವ್ಯದ ಪ್ರವರ್ತಕರು ಎಂದು ಗುರುತಿಸಲ್ಪಟ್ಟವರು.

ಕನ್ನಡ ಸಾಹಿತ್ಯದ ಕಾವ್ಯ, ನಾಟಕ, ಕಾದಂಬರಿ, ಪ್ರವಾಸ ಕಥನ, ಜೀವನ ಚರಿತ್ರೆ ಈ ಎಲ್ಲಾ ಪ್ರಕಾರಗಳಲ್ಲಿ ಶ್ರೇಷ್ಠ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯವನ್ನು ಶ್ರೀ ಮಂತಗೊಳಿಸಿದರು. ಗೋಕಾಕರು ಕನ್ನಡ ಮತ್ತು ಇಂಗ್ಲಿಷ್ ಭಾಷೆ ಎರಡರಲ್ಲಿಯೂ ಪಾಂಡಿತ್ಯಗಳಿಸಿ ಕೃತಿ ರಚನೆ ಮಾಡಿದ ಅನನ್ಯ ಲೇಖಕರು.

ಕರ್ನಾಟಕದಲ್ಲಿ ಗೋಕಾಕರು ಮನೆಮಾತಾಗಿದ್ದು ಅವರು ಕರ್ನಾಟಕದಲ್ಲಿ ಕನ್ನಡದ ಸ್ಥಾನಮಾನಗಳ ಬಗ್ಗೆ ನೀಡಿದ ಮಹತ್ವದ ವರದಿ ಗೋಕಾಕ್ ವರದಿ ಎಂದು ಪ್ರಸಿದ್ಧವಾದ ಕಾರಣಕ್ಕಾಗಿ ಕನ್ನಡದ ಶ್ರೇಷ್ಠತೆಯನ್ನು ಅದರ ಹಿರಿಮೆಯನ್ನು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಸಾರಿ ಅದಕ್ಕೆ ವಿಶ್ವಖ್ಯಾತಿಯನ್ನು ತಂದುಕೊಟ್ಟ ಕೀರ್ತಿ ಅವರದಾಗಿದೆ.ಕನ್ನಡ ಸಾಹಿತ್ಯ ಲೋಕಕ್ಕೆ ಅಪೂರ್ವ ಕೃತಿಗಳನ್ನು ನೀಡಿದ ಅನನ್ಯ ಪ್ರತಿಭಾವಂತ ಲೇಖಕರಾದ ಗೋಕಾಕರಿಗೆ ಹಲವಾರು ಪ್ರಶಸ್ತಿ ಪುರಸ್ಕಾರಗಳು ಸಂದಿವೆ.

**ಅವುಗಳಲ್ಲಿ ಮುಖ್ಯವಾದವು;** ಭಾರತ ಸಿಂಧು ರಶ್ಮಿ ಎಂಬ ಮಹಾಕಾವ್ಯಕ್ಕೆ ಜಾನಪೀಠ ಪ್ರಶಸ್ತಿ, ಪದ್ಮ ಶ್ರೀ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿದ್ದು, ಅಮೇರಿಕೆಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿತು ಹಾಗೂ ಇನ್ನೂ ಹಲವಾರು ಪ್ರಶಸ್ತಿಗಳು ದೊರೆತಿವೆ. ವಿಕೆ ಗೋಕಾಕ್ ರವರು ಕನ್ನಡ ಸಾಹಿತ್ಯ ಆಕಾಶದಲ್ಲಿ ಉಜ್ವಲ ನಕ್ಷತ್ರವಾಗಿ ಪ್ರಕಾಶಿಸುತ್ತಿರುವ ಅನನ್ಯ ಕವಿ, ನಾಟಕಕಾರ, ಕಾದಂಬರಿಕಾರ, ವಿಮರ್ಶಕರಾಗಿದ್ದರು. ವಿಕೆ ಗೋಕಾಕ್ ರವರು ತನ್ನ 83 ನೇ ವಯಸ್ಸಿನಲ್ಲಿ ಅಂದರೆ 1992 ಏಪ್ರಿಲ್ 28 ರಂದು ವಯೋಸಹಜದಿಂದ ಸ್ವರ್ಗಸ್ಥರಾದರು.



ಡಾ.ವಿಕೆ ಗೋಕಾಕ್ ರವರ 116 ನೇ ವರ್ಷದ ಜನ್ಮ ದಿನವಾದ ಇಂದು ಅವರ ಜನ್ಮದಿನಾಚರಣೆಯ ಪ್ರಯುಕ್ತ ಕನ್ನಡ ಸಾಹಿತ್ಯ ಹಿರಿಯ ಚೇತನರವರನ್ನು ಕನ್ನಡ ಮನಸ್ಸುಳ್ಳ ನಾವೆಲ್ಲರೂ ಅವರನ್ನು ಸ್ಮರಿಸಿ,ನೆನೆಯುತ್ತಾ ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರೆಯಲೆಂದು ಕನ್ನಡ ಸಾಹಿತ್ಯ ಲೋಕದ ಪರಿವಾರರ ಪರವಾಗಿ ಕಣ್ಣಿಗೆ ಕಾಣದ ಕಲ್ಪನೆಯ ಆ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

## ಉಗರಗೋಳ-ಯಲ್ಲಮ್ಮನಗುಡ್ಡ ಸಂಚಾರ ಸ್ಥಗಿತ: ಭಕ್ತರ ಪರದಾಟ

• ಉದಯವಾಹಿನಿ ಉಗರಗೋಳ

ಗ್ರಾಮದಲ್ಲಿ ಶುಕ್ರವಾರ ಸುರಿದ ಧಾರಾಕಾರ ಮಳೆಯಿಂದಾಗಿ ಉಗರಗೋಳ- ಯಲ್ಲಮ್ಮನಗುಡ್ಡ ಮಾರ್ಗದಲ್ಲಿನ ಹಳ್ಳ ಉಕ್ಕಿ ಹರಿಯುತ್ತಿದೆ. ಇದರಿಂದಾಗಿ ಸಂಚಾರ ಸ್ಥಗಿತಗೊಂಡಿದ್ದು, ಸಾವಿರಾರು ಭಕ್ತರು ಪರದಾಡಿದರು.

ಆಗಸ್ಟ್ 9ರಂದು ಯಲ್ಲಮ್ಮನಗುಡ್ಡದಲ್ಲಿ ನೂಲು ಹುಣ್ಣಿಮೆ ಅಂಗವಾಗಿ ಜಾತ್ರೆ ನೆರವೇರಲಿದೆ. ಇದಕ್ಕಾಗಿ ಶುಕ್ರವಾರ ಸಂಜೆಯಿಂದಲೇ ಗದಗ, ಕೊಪ್ಪಳ, ಬಾಗಲಕೋಟೆ, ವಿಜಯಪುರ ಜಿಲ್ಲೆಗಳಿಂದ ಉಗರಗೋಳ ಮಾರ್ಗವಾಗಿ ಗುಡ್ಡಕ್ಕೆ ಭಕ್ತರ ದಂಡು ಹರಿದುಬರುತ್ತಿದೆ. ಆದರೆ, ಮಧ್ಯಾಹ್ನ 3ರಿಂದ ಎರಡು ತಾಸಿಗೂ ಅಧಿಕ ಹೊತ್ತು ಧಾರಾಕಾರ ಮಳೆಯಾಗಿ ಸಂಪರ್ಕ ಕಡಿತಗೊಂಡಿದ್ದು, ಹಳ್ಳದ ಎರಡೂ ಬದಿ ನೂರಾರು ವಾಹನಗಳು ಸಾಲುಗಟ್ಟಿ ನಿಂತಿವೆ. ಕೆಲವು ಭಕ್ತರು ಸುತ್ತು ಬಳಸಿ ಪರ್ಯಾಯ ಮಾರ್ಗಗಳಲ್ಲಿ ಸಂಚರಿಸುತ್ತಿದ್ದಾರೆ. ಇನ್ನೂ ಕೆಲವರು ಅಪಾಯವನ್ನೂ ಲೆಕ್ಕಿಸದೆ, ಹಳ್ಳದ ನೀರಿನಲ್ಲೇ ದಾಟುತ್ತಿರುವುದು ಕಂಡುಬರುತ್ತಿದೆ.

## 100 ಹಾಸಿಗೆಗಳ ಆಸ್ಪತ್ರೆಗೆ ಅನುಮೋದನೆ ಬಾಬಾಸಾಹೇಬ ಪಾಟೀಲ

• ಉದಯವಾಹಿನಿ ಚನ್ನಮ್ಮನ ಕಿತ್ತೂರು

ಇಲ್ಲಿಯ ಸಮುದಾಯ ಆರೋಗ್ಯ ಕೇಂದ್ರವನ್ನು 100 ಹಾಸಿಗೆ ಆಸ್ಪತ್ರೆಯನ್ನಾಗಿ ಮೇಲ್ದರ್ಜೇಗೇರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರಕಿದೆ' ಎಂದು ಶಾಸಕ ಬಾಬಾಸಾಹೇಬ ಪಾಟೀಲ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಗುರುವಾರ ಮಾತನಾಡಿ,33.78 ಕೋಟಿ ಅಂದಾಜು ವೆಚ್ಚದಲ್ಲಿ ತಾಲ್ಲೂಕು ಆಡಳಿತ ಸೌಧದ ಬಳಿ ಈ ನೂತನ ಆಸ್ಪತ್ರೆ ನಿರ್ಮಾಣವಾಗಲಿದೆ. ಇದರಿಂದ ಸಾರ್ವಜನಿಕರಿಗೆ ಹೆಚ್ಚು ಅನುಕೂಲವಾಗಲಿದೆ ಎಂದರು.

ಹಿಂದೆ ಎಸ್‌ಡಿಪಿಯ 19 ಕೋಟಿ ಅನುದಾನದಲ್ಲಿ 50 ಹಾಸಿಗೆ ಆಸ್ಪತ್ರೆ ನಿರ್ಮಾಣ ಕಾಮಗಾರಿ ಮಾರ್ಪಡಿಸಿ ಈಗ 100 ಹಾಸಿಗೆ ಆಸ್ಪತ್ರೆ ನಿರ್ಮಾಣಕ್ಕೆ ಸರ್ಕಾರ ಅನುಮೋದನೆ ನೀಡಿದ್ದು, ಈ ಭಾಗದ ಜನರಿಗೆ ಸಂತಸ ತಂದಿದೆ' ಎಂದು ಹೇಳಿದರು. ಹಿಂದಿನ ಸರ್ಕಾರದ ಅವಧಿಯಲ್ಲಿ ಪಟ್ಟಣದಿಂದ ಸುಮಾರು 6 ಕಿ.ಮೀ ಅಂತರದಲ್ಲಿ ಈಗಾಗಲೇ ಅಡಿಪಾಯ ಹಾಕಲು 3.21 ಕೋಟಿ ಅನಗತ್ಯ ವೆಚ್ಚ ಮಾಡಿದ್ದಾರೆ. ಇದಕ್ಕೆ ಕಾರಣವಾಗಿರುವ ತಪ್ಪಿತಸ್ಥ ಅಧಿಕಾರಿಗಳನ್ನು ಗುರುತಿಸಿ, ಕ್ರಮ ಕೈಗೊಳ್ಳಲು ಸರ್ಕಾರ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿದೆ' ಎಂದು ಹೇಳಿದರು.

## ಧಾರಾಕಾರ ಮಳೆ ತುಂಬಿ ಹರಿದ ಹಳ್ಳಗಳು

• ಉದಯವಾಹಿನಿ, ಬಾದಾಮಿ

ಗುಡುಗು ಸಿಡಿಲಿನ ಆರ್ಭಟದಿಂದ ತಾಲ್ಲೂಕಿನಾದ್ಯಂತ ವ್ಯಾಪಕವಾಗಿ ಸುರಿದ ಧಾರಾಕಾರ ಮಳೆಯಿಂದ ಹಳ್ಳಕೊಳ್ಳಗಳು ಭರ್ತಿಯಾಗಿ ತುಂಬಿ ಹರಿದವು. ಬಾದಾಮಿ-ಬಾಗಲಕೋಟೆ ರಸ್ತೆಯಲ್ಲಿದ್ದ ಕೊಂಕಣಕೊಪ್ಪ ಗ್ರಾಮದ ಸಮೀಪದ ಹಳ್ಳವು ತುಂಬಿ ಹರಿಯಿತು. ಬಾದಾಮಿ ಸುತ್ತಲಿನ ಬೆಟ್ಟಗಳ ಪರಿಸರದಿಂದ ಬರುವ ಸಿದ್ದನಗವಿ ಹಳ್ಳ, ಕೋಣಮ್ಮ ದೇವಾಲಯದ ಹಳ್ಳ, ಸಾಬರಪಡಿ ಹಳ್ಳ, ಪಾರಾದ ಬಾವಿ ಹಳ್ಳ ಮತ್ತು ಅಡ್ಡ ಹಳ್ಳಗಳು ಭರ್ತಿಯಾಗಿ ಹರಿದವು. ಹಳ್ಳಗಳು ತುಂಬಿ ಹರಿದಿದ್ದರಿಂದ ಕೊಳವೆ ಬಾವಿಗಳ ಅಂತರ್ಜಲಮಟ್ಟ ಅಧಿಕವಾಗಿವೆ ಎಂದು ರೈತರು ಹೇಳಿದರು.

ಮಳೆಯಿಂದ ಹೆಸರು ಬೆಳೆಗಳು ಜಲಾವೃತವಾಗಿವೆ. ಬೇಲೂರ, ಹೆಬ್ಬಳ್ಳಿ ಮತ್ತು ಹಲಕುರ್ಕಿ ಭಾಗದ ಪ್ರದೇಶದಲ್ಲಿ ಮೊದಲು ಬಿತ್ತನೆ ಮಾಡಿದ ಹೆಸರು ಬೆಳೆ ಜಲಾವೃತವಾಗಿವೆ. ಕೊಯ್ಲಿಗೆ ಬಂದ ಹೆಸರು ಕೈಗೆ ಬಾರದಂತಾಗಿದೆ' ಎಂದು ರೈತ ಭೀಮಪ್ಪ ಹೊಸಮನಿ ಹೇಳಿದರು.

## ಅಂಚೆ ಸೇವೆಯಲ್ಲಿ ವ್ಯತ್ಯಯ

• ಉದಯವಾಹಿನಿ, ಹುಬ್ಬಳ್ಳಿ

ದೂರದ ಊರಿನ ಪ್ರೀತಿಯ ಸಹೋದರರಿಗೆ ಸಹೋದರಿಯರು ಪ್ರತಿ ವರ್ಷ ಭಾರತೀಯ ಅಂಚೆ ಇಲಾಖೆ ಮೂಲಕ ಯಾವುದೇ ಸಮಸ್ಯೆಯಿಲ್ಲದೇ ರಾಖಿ ಕಳುಹಿಸುತ್ತಿದ್ದರು. ಆದರೆ, ಈ ವರ್ಷ ಭಾರತೀಯ ಅಂಚೆ ಇಲಾಖೆ ನೂತನವಾಗಿ ಅಳವಡಿಸಿಕೊಂಡಿರುವ ಐ.ಟಿ 2.0 ತಂತ್ರಜ್ಞಾನ ಮತ್ತು ಸಂಪರ್ಕ ಜಾಲದ ಸರ್ವರ್‌ನಲ್ಲಿ ಕಾಣಿಸಿಕೊಂಡ ಸಮಸ್ಯೆಯಿಂದ ಅಂಚೆ ಸೇವೆಯಲ್ಲಿ ದಿಢೀರ್ ವ್ಯತ್ಯಯ ಉಂಟಾಗಿದೆ. ಸ್ಪೀಡ್ ಪೋಸ್ಟ್, ರಿಜಿಸ್ಟರ್ ಪೋಸ್ಟ್, ಪಾರ್ಸಲ್ ಸೇವೆ, ಅಂಚೆ ವಿಮೆ ಹಾಗೂ ಮನಿ ಆರ್ಡರ್ ಸೇವೆಗಳಲ್ಲಿ ಕಳೆದ ಕೆಲ ದಿನಗಳಿಂದ ಗ್ರಾಹಕರು ತೊಂದರೆ ಅನುಭವಿಸುವಂತಾಗಿದೆ.

ರಾಜ್ಯದಲ್ಲಿ ಜೂನ್ 23ರಿಂದ ಪ್ರಾಯೋಗಿಕವಾಗಿ ಈ ತಂತ್ರಜ್ಞಾನ ಅನುಷ್ಠಾನಕ್ಕೆ ಬಂದಿದೆ. ಆ. 4ರಂದು ದೇಶದ ಹಲವು ರಾಜ್ಯಗಳು ಏಕಕಾಲಕ್ಕೆ ಈ ಸೇವೆಗೆ ತೆರೆದುಕೊಂಡಿದ್ದರಿಂದ ಸರ್ವರ್‌ನಲ್ಲಿ ಸಮಸ್ಯೆ ಕಾಣಿಸಿತು. ರಾಜ್ಯದಲ್ಲಿ ಕಳೆದ ಬುಧವಾರ ಮಧ್ಯಾಹ್ನದ ಬಳಿಕ ಸೇವೆ ಮರಳಿದರೂ ತೀರಾ ನಿಧಾನಗತಿಯಲ್ಲಿದೆ. ಆ. 9ರಂದು ರಕ್ಷಾಬಂಧನ ಹಬ್ಬ ಇರುವುದರಿಂದ ರಾಖಿ ಹಿಡಿದು ಅಂಚೆ ಕಚೇರಿಗೆ ತೆರಳಿದ ಸಹೋದರಿಯರು, ಮಹಿಳೆಯರು ನಿರಾಸೆಯಿಂದ ಮರಳಿದರು.

ಬಹುತೇಕರು ಬೆಳಿಗ್ಗೆಯಿಂದ ಸಂಜೆವರೆಗೂ ಸರತಿಯಲ್ಲೇ ನಿಂತು ಸುಸ್ತಾದರು. ಅಲ್ಲದೇ, ಶ್ರಾವಣ ಮಾಸದಲ್ಲಿ ದೇವಾಲಯಗಳಿಗೆ ಮನಿ ಆರ್ಡರ್ ಮೂಲಕ ಕಾಣಿಕೆ, ದೇಣಿಗೆ ಕಳುಹಿಸಲು ಪ್ರಯತ್ನಿಸಿ ಭಕ್ತರೂ ವಿಫಲರಾದರು.

## ತಾಯಿ ಎದೆಹಾಲು ಅಮೃತ ಆರೋಗ್ಯಾಧಿಕಾರಿ ಡಾ.ಫಾತಿಮಾ

• ಉದಯವಾಹಿನಿ ಆಲೂರು

ತಾಯಿಯ ಎದೆ ಹಾಲಿನಲ್ಲಿ ಮಗುವಿಗೆ ಬೇಕಾದ ಎಲ್ಲಾ ಪೋಷಕಾಂಶಗಳು ಹೇರಳವಾಗಿ ಅಡಕವಾಗಿದೆ. 6 ತಿಂಗಳವರೆಗೆ ತಾಯಿ ಹಾಲಲ್ಲದೆ ಶಿಶುವಿಗೆ ಬೇರೆ ಏನನ್ನೂ ನೀಡಬಾರದು' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ನಿಸಾರ್ ಫಾತಿಮಾ ತಿಳಿಸಿದರು. ತಾಲ್ಲೂಕು ಆಸ್ಪತ್ರೆ ಹಾಗೂ ಹಾಸನದ ರಾಜೀವ್ ನರ್ಸಿಂಗ್ ಕಾಲೇಜು ಆಶ್ರಯದಲ್ಲಿ ಇಲ್ಲಿ ಏರ್ಪಡಿಸಿದ್ದ ವಿಶ್ವ ಸ್ತನ್ಯಪಾನ ಸಪ್ತಾಹದ ಸಮಾರೋಪದಲ್ಲಿ ಮಾತನಾಡಿದರು. ಸೌಂದರ್ಯ ಪ್ರಜ್ಞೆ, ಉದ್ಯೋಗಿ ಎಂಬ ನೆಪದಲ್ಲಿ ಶಿಶುವಿಗೆ ತಾಯಿ ಹಾಲು ಕೊಡುವುದನ್ನು ಯಾವುದೇ ಕಾರಣಕ್ಕೂ ನಿಲ್ಲಿಸಬಾರದು. ಮಕ್ಕಳಿಗೆ ಉತ್ತಮ ಪೌಷ್ಟಿಕ ಆಹಾರಗಳಾದ ಸೊಪ್ಪು, ತರಕಾರಿ, ಮೊಳಕೆಕಟ್ಟಿದ ಕಾಳುಗಳು, ಹಳದಿ ಹಣ್ಣುಗಳು ಹಾಗೂ ಮೊಟ್ಟೆ, ಮೀನು, ಮಾಂಸಗಳನ್ನು ನೀಡಬೇಕು. ಪ್ರತಿ ವರ್ಷ ಆಗಸ್ಟ್ 1 ರಿಂದ ಆಗಸ್ಟ್ 7ನೇ ದಿನಾಂಕದವರೆಗೆ ವಿಶ್ವ ಸ್ತನ್ಯಪಾನ ಸಪ್ತಾಹ ಆಚರಣೆ ಮಾಡುತ್ತಿದ್ದು, ಆಶಾ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಆರೋಗ್ಯ ಇಲಾಖೆ ಸಿಬ್ಬಂದಿ ಎದೆ ಹಾಲಿನ ಮಹತ್ವದ ಬಗ್ಗೆ ಅರಿವು ಮೂಡಿಸುತ್ತಿದ್ದಾರೆ ಎಂದರು. ತಾಲ್ಲೂಕು ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞ ಡಾ. ಕಿರಣ್, ಮಗು ಹುಟ್ಟಿದ ಒಂದು ಗಂಟೆಯೊಳಗೆ ತಾಯಿ ಹಾಲನ್ನು ತಪ್ಪದೆ ಕುಡಿಸಬೇಕು. ಈ ಹಾಲಿನಲ್ಲಿ ಕೊಲೆಸ್ಟ್ರಾಮ್ ಇದ್ದು, ಮಗುವಿನ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಎಂದರು.

## ಕಲ್ಯಾಣ ಕರ್ನಾಟಕ ಪ್ರತ್ಯೇಕ ಸಚಿವಾಲಯ ರಚಿಸಿ: ಚನ್ನಬಸವಾನಂದ ಶ್ರೀ

• ಉದಯವಾಹಿನಿ ಬೀದರ್

ಕಲ್ಯಾಣ ಕರ್ನಾಟಕ ಪ್ರತ್ಯೇಕ ಸಚಿವಾಲಯ ರಚಿಸಿ ವಿಧಾನ ಮಂಡಲ ಅಧಿವೇಶನ ನಡೆಸಬೇಕು ಎಂಬಿತ್ಯಾದಿ ಬೇಡಿಕೆಗಳ ಈಡೇರಿಕೆಗೆ ಸಹಕರಿಸಬೇಕೆಂದು ಕಲ್ಯಾಣ ಕರ್ನಾಟಕ 371 ಜೆ ಸಮಗ್ರ ಅಭಿವೃದ್ಧಿ ಹೋರಾಟ ಸಮಿತಿಯ ಗೌರವಾಧ್ಯಕ್ಷರಾದ ಪೂಜ್ಯ ಶ್ರೀ ಡಾ. ಚನ್ನಬಸವಾನಂದ ಸ್ವಾಮೀಜಿ ತಿಳಿಸಿದ್ದಾರೆ.

ಕಲ್ಯಾಣ ಕರ್ನಾಟಕ ಸಮಗ್ರ ಅಭಿವೃದ್ಧಿ ಹೋರಾಟ ಸಮಿತಿಯ ವತಿಯಿಂದ ಕಲಬುರಗಿಯಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಅಧ್ಯಕ್ಷ ಪ್ರೊ. ಗೋವಿಂದರಾವ ಅವರಿಗೆ ಮನವಿ ಪತ್ರ ಸಲ್ಲಿಸಿದ ಬಳಿಕ ಪ್ರಕಟಣೆ ಹೊರಡಿಸಿದ್ದಾರೆ.

ನೇಮಕಾತಿ ಮತ್ತು ಪದೋನ್ನತಿಯಲ್ಲಿ ಹಾಗೂ ಕ.ಕ. ಭಾಗದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ಕ.ಕ. ದ ಅರಣ್ಯ ಸಂಪತ್ತಿಗೆ ಮಹತ್ವ ನೀಡಿ ಏಳು ಕೋಟಿ ಸಸಿ ನೆಡುವ ಕಾರ್ಯಕ್ರಮ ಹಾಕಿಕೊಳ್ಳಬೇಕು. ಪ್ರವಾಸೋದ್ಯಮ ಮತ್ತು ಐತಿಹಾಸಿಕ ಸ್ಮಾರಕಗಳಿಗೆ ವಿಶ್ವದರ್ಜೆಗೆ ಏರಿಸಬೇಕು ಔದ್ಯೋಗಿಕರಣ ಸ್ಥಾಪಿಸಿ ಒಂದು ಲಕ್ಷ ಉದ್ಯೋಗ ಸೃಷ್ಟಿ ಮಾಡಬೇಕು ಎಂಬಿತ್ಯಾದಿ ಪ್ರಮುಖ ಬೇಡಿಕೆಗಳನ್ನು ಈಡೇರಿಸಬೇಕೆಂದು ಮನವಿ ಪತ್ರ ಸಲ್ಲಿಸಿದ್ದಾರೆ. ಕಲ್ಯಾಣ ಕರ್ನಾಟಕ 371 ಜೆ ಸಮಗ್ರ ಅಭಿವೃದ್ಧಿ



ಹೋರಾಟ ಸಮಿತಿಯ ಅಧ್ಯಕ್ಷ ಅಶೋಕ ಮಾನೂರೆ ಮಾತನಾಡಿ ಶೈಕ್ಷಣಿಕ ಗುಣಮಟ್ಟ ಹಾಗೂ ಮಕ್ಕಳ ಫಲಿತಾಂಶ ಸುಧಾರಣೆಗೆ ವಿಶೇಷ ಯೋಜನೆ, ಶೌಚಾಲಯ ಹಾಗೂ ಒಳಚರಂಡಿ ನಿರ್ಮಿಸಿ ಕ.ಕ. ಭಾಗದ ಎಲ್ಲಾ ಜಿಲ್ಲೆಗಳಲ್ಲಿ ಸ್ವಚ್ಛತೆ ಕಾಪಾಡಬೇಕು. ಕ.ಕ. ಭಾಗದ ಎಲ್ಲಾ ಜಿಲ್ಲೆಗಳಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡಬೇಕೆಂದು ತಿಳಿಸಿದರು.

ಇದೇ ವೇಳೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಡಾ.ಅಜಯಸಿಂಗ್ ಅವರಿಗೂ ಮನವಿ ಪತ್ರ ಸಲ್ಲಿಸಲಾಯಿತು. ಪ್ರಮುಖರಾದ ಶಿವರಾಜ ಪಾಟೀಲ ಅತಿವಾಳ, ಶಿವಶರಣಪ್ಪ ಪಾಟೀಲ ಹಾರೂರಗೇರಿ, ಮಲ್ಲಿಕಾರ್ಜುನ ಜೈಲರ್, ಬಸವಂತರಾವ ಬಿರಾದಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಮುಂದಿನ ಹತ್ತು ಅಥವಾ ಐದು ವರ್ಷಗಳಲ್ಲಿ ಆದ್ಯತಾ ಕ್ಷೇತ್ರದಲ್ಲಿ ಸುಧಾರಿಸುವ ಗುರಿಯೊಂದಿಗೆ ಮುನ್ನಡೆಯಬೇಕು

# ತಲಾ ಆದಾಯ ವೃದ್ಧಿಗೆ ಯೋಜನೆ ರೂಪಿಸಿ: ಪ್ರೊ.ಗೋವಿಂದರಾವ್

• ಉದಯವಾಹಿನಿ ಕಲಬುರಗಿ

ಕಲ್ಯಾಣ ಕರ್ನಾಟಕ ಪ್ರದೇಶದ ಕಟ್ಟ ಕಡೆಯ ವ್ಯಕ್ತಿಯ ತಲಾ ಆದಾಯ ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕ ಹೆಚ್ಚಿಸುವ ಗುರಿಯೊಂದಿಗೆ ಕೆಕೆಆರ್‌ಡಿಬಿ ಹತ್ತು ಇಲ್ಲವೇ ಪಂಚ ವಾರ್ಷಿಕ ದೂರದೃಷ್ಟಿಯುಳ್ಳ ಯೋಜನೆಗಳನ್ನು ಹಾಕಿಕೊಳ್ಳಬೇಕುಸ ಎಂದು ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಅಧ್ಯಕ್ಷ ಪ್ರೊ. ಎಂ.ಗೋವಿಂದರಾವ್ ಹೇಳಿದರು.

ಕ್ರಿಯಾ ಯೋಜನೆ ರೂಪಿಸಿ

ಕೆಕೆಆರ್‌ಡಿಬಿ ಸಭಾಂಗಣದಲ್ಲಿ ಕೆಕೆಆರ್‌ಡಿಬಿ ಮಂಡಳಿ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಮುಂದಿನ ಹತ್ತು ಅಥವಾ ಐದು ವರ್ಷಗಳಲ್ಲಿ ಆದ್ಯತಾ ಕ್ಷೇತ್ರದಲ್ಲಿ ಸುಧಾರಿಸುವ ಗುರಿಯೊಂದಿಗೆ ಮುನ್ನಡೆಯಬೇಕು. ಡಾ. ಡಿ.ಎಂ.ನಂಜುಂಡಪ್ಪ ವರದಿಯಂತೆ ಯಾವೆಲ್ಲ ವಲಯದಲ್ಲಿ ಈ ಭಾಗ ಹಿಂದುಳಿದಿದೆಯೋ ಅಲ್ಲಿ ಕೊರತೆ ನೀಗಿಸುವ ಕೆಲಸ ಮಂಡಳಿಯಿಂದ ಆಗಬೇಕು. ಈ ನಿಟ್ಟಿನಲ್ಲಿ ಕ್ರಿಯಾ ಯೋಜನೆ ರೂಪಿಸಿ ಸರ್ಕಾರಕ್ಕೆ ಸಲಹೆ ನೀಡಬೇಕು. ಕೆಕೆಆರ್‌ಡಿಬಿಯು ಸರ್ಕಾರದಂತೆ ಎಲ್ಲದಕ್ಕೂ ಅನುದಾನ ನೀಡದೇ ಆದ್ಯತಾ ವಲಯಕ್ಕೆ ಗಮನ ಹರಿಸಬೇಕು' ಎಂದರು. ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಮಾತನಾಡಿ, ಕಳೆದ ಎರಡು ವರ್ಷಗಳಿಂದ ಮಂಡಳಿಯು ಆರೋಗ್ಯ, ಶಿಕ್ಷಣ, ಉದ್ಯೋಗ, ಅರಣ್ಯ ಆವಿಷ್ಕಾರದಂಥ ಪರಿಣಾಮಕಾರಿ ಕಾರ್ಯಕ್ರಮಗಳನ್ನು ರೂಪಿಸಿದೆ. ಕಳೆದ ಸೆಪ್ಟೆಂಬರ್‌ನಲ್ಲಿ ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ 857 ಕೋಟಿ ವೆಚ್ಚದ ಆರೋಗ್ಯ ಇಲಾಖೆಯ ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದು, ಇದರಲ್ಲಿ 300 ಕೋಟಿಗೂ ಅಧಿಕ ಹೆಚ್ಚಿನ ಹಣ ನೀಡಿ ಪ್ರದೇಶದ ಆರೋಗ್ಯ ಸುಧಾರಣೆಗೆ ಮಂಡಳಿ ಶ್ರಮಿಸುತ್ತಿದೆ. ಇಲ್ಲಿ ಕೈಗಾರಿಕೆ ಸ್ಥಾಪಿಸಿ ಉದ್ಯೋಗ ಸೃಷ್ಟಿಸಲು ಕೈಗಾರಿಕಾ ಹಬ್ ಸ್ಥಾಪಿಸಲಾಗುತ್ತಿದ' ಎಂದರು.

ಕೆಕೆಆರ್‌ಡಿಬಿ ಕಾರ್ಯದರ್ಶಿ ನಲಿನ್ ಅತುಲ್ ಪ್ರಾತ್ಯಕ್ಷಿಕೆ ಮೂಲಕ ಮಂಡಳಿಯ ಈವರೆಗಿನ ಪ್ರಗತಿ ಕಾರ್ಯ ವಿವರಿಸಿದರು. ಪ್ರಸ್ತುತ 2025-26ನೇ ಸಾಲಿಗೆ 5,000 ಕೋಟಿ ಅನುದಾನ ಘೋಷಿಸಿದ್ದು, ಇದರಲ್ಲಿ ಶೇ 60ರಷ್ಟು, ಅಂದರೆ 3,000 ಕೋಟಿ ಅನುದಾನ ಮೈಕ್ರೋ ಮತ್ತು ಮ್ಯಾಕ್ರೋ ಯೋಜನೆಗೆ ಮೀಸಲಿರಿಸಲಾಗಿದೆ. ಉಳಿದಂತೆ ಶೇ 31ರಷ್ಟು ಅನುದಾನ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಘೋಷಿಸುವ ಕಾರ್ಯಕ್ರಮಗಳಿಗೆ ಹಂಚಿಕೆ


ಉದಯವಾಹಿನಿ ಚಿತ್ರ

ಪ್ರಮಾಣದಲ್ಲಿ ಮಂಡಳಿ ಅನುದಾನ ನೀಡಲಿದೆ. ಉಳಿದಂತೆ ಮಂಡಳಿ ಅಧ್ಯಕ್ಷರು, ಯೋಜನಾ ಸಚಿವರು, ಮುಖ್ಯಮಂತ್ರಿಗಳು ತಲಾ ಶೇ 2 ವಿವೇಚನಾ ನಿಧಿ, ಶೇ 2 ಪ್ರಾದೇಶಿಕ ನಿಧಿ, ಶೇ 1ರಷ್ಟು ಹಣ ಆಡಳಿತಾತ್ಮಕ ವೆಚ್ಚವಾಗಿ ಬಳಸಲಾಗುತ್ತಿದೆ' ಎಂದರು. ಸಭೆಯಲ್ಲಿ ಸಮಿತಿ ಸದಸ್ಯೆ ಸಂಗೀತಾ ಕಟ್ಟಿಮನಿ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಮತ್ತು ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಸದಸ್ಯ ಕಾರ್ಯದರ್ಶಿ ಆರ್. ವಿಶಾಲ್, ಮಂಡಳಿಯ ಶಿಕ್ಷಣ ತಜ್ಞರ ಸಮಿತಿ ಅಧ್ಯಕ್ಷೆ ಪ್ರೊ. ಛಾಯಾ ದೇವಗಾಂವಕರ್, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳಿದ್ದರು.

ಮಂಡಳಿ ಸಭೆಯ ನಂತರ ಪ್ರೊ.ಎಂ.ಗೋವಿಂದರಾವ್ ಅವರು ಪ್ರದೇಶದ ಅಭಿವೃದ್ಧಿಗೆ ವಿವಿಧ ಸಂಘ-ಸಂಸ್ಥೆಗಳಿಂದ ಮನವಿ, ಅಭಿಪ್ರಾಯ ಪಡೆದರು.

### ಹಿಂದುಳಿವಿಕೆ ಕಲ್ಯಾಣಕ್ಕೆ ಸೀಮಿತವಾಗಿಲ್ಲ

''ಹಿಂದುಳಿವಿಕೆ ಎಂಬುದು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸೀಮಿತವಲ್ಲ. ರಾಜ್ಯದ ಎಲ್ಲಾ ಭಾಗಗಳಿಗೂ ಇದು ಅನ್ವಯಿಸುತ್ತದೆ' ಎಂದು ಪ್ರೊ.ಎಂ.ಗೋವಿಂದರಾವ್ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಬರೀ ಆದಾಯ ಮಾತ್ರವಲ್ಲದೇ ಉದ್ಯೋಗ ಸೃಷ್ಟಿ ತಲಾವಾರು ಆದಾಯವನ್ನೂ ಗಮನಿಸಬೇಕಿದೆ. ರಾಜ್ಯದಲ್ಲಿರುವ ಜನಸಂಖ್ಯೆಯ ಶೇ. 46ರಷ್ಟು ರೈತರಿದ್ದರೂ ರಾಜ್ಯದ ಆದಾಯಕ್ಕೆ ಅವರ ಕೊಡುಗೆ ಕೇವಲ 8.5ರಷ್ಟಿದೆ. ಹೀಗಾಗಿ ಪ್ರೊ.ಡಿ.ಎಂ.ನಂಜುಂಡಪ್ಪ ವರದಿ ಆಧಾರದಲ್ಲಿ ಸಿಡಿಐ ಸೂಚ್ಯಂಕದಂತೆ ಅನುದಾನ ಹಂಚಿಕೆ ಮಾಡಿದರೂ ನಿರೀಕ್ಷಿತ ಅಭಿವೃದ್ಧಿ ಕಾಣದಿರಲು ಕಾರಣಗಳನ್ನು ಪತ್ತೆ ಹಚ್ಚಿ ಇದನ್ನು ಸರಿದೂಗಿಸಿ ಅಸಮಾನತೆ ನಿವಾರಣೆಗೆ ಸಮಗ್ರ ವರದಿ ರೂಪಿಸಲಾಗುವುದು. ಆರೋಗ್ಯ ಶಿಕ್ಷಣ ಕೃಷಿ ಕೈಗಾರಿಕೆ ಮೂಲಸೌಕರ್ಯ ಹೀಗೆ 40ಕ್ಕೂ ಅಧಿಕ ಅಂಶಗಳಲ್ಲಿ ಈವರೆಗಿನ ಫಲಿತಾಂಶದ ಆಧಾರದ ಮೇಲೆ ವರದಿ ಸಿದ್ಧಪಡಿಸಲು ಉದ್ದೇಶಿಸಲಾಗಿದೆ ಎಂದರು.

### ಕೆಕೆಸಿಸಿಐನಲ್ಲಿ ಸಂವಾದ

ಪ್ರೊ.ಗೋವಿಂದರಾವ್ ಅವರು ಕೆಕೆಸಿಸಿಐ ಹಮ್ಮಿಕೊಂಡಿದ್ದ 'ಸಂವಾದ' ಕಾರ್ಯಕ್ರಮದಲ್ಲೂ ಪಾಲ್ಗೊಂಡರು. ಕೆಕೆಸಿಸಿಐನ ಪದಾಧಿಕಾರಿಗಳು ಉದ್ಯಮಿಗಳು ಈ ಭಾಗದ ಅಭಿವೃದ್ಧಿ ಪ್ರಾದೇಶಿಕ ಅಸಮಾನತೆ ನಿರ್ಮೂಲನೆಗೆ ನೀಡಿದ ಸಲಹೆಗಳನ್ನು ದಾಖಲಿಸಿಕೊಂಡರು. ಹಿಂದುಳಿದಿರುವಿಕೆ ನೀಗಲು ಭವಿಷ್ಯದ ಪೀಳಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಜನೆಗಳನ್ನು ರೂಪಿಸಬೇಕಿದೆ. ಜೊತೆಗೆ ಇರುವ ಸೌಲಭ್ಯ ಮೂಲಸೌಕರ್ಯಗಳ ಪರಿಣಾಮಕಾರಿ ಸದ್ಬಳಕೆಯೂ ಆಗಬೇಕಿದೆ' ಎಂದು ಪ್ರೊ.ಗೋವಿಂದರಾವ್ ಅಭಿಪ್ರಾಯಪಟ್ಟರು. ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್‌ಸಿಂಗ್ ಮಾತನಾಡಿದರು. ಬಳಿಕ ಕೆಕೆಸಿಸಿಐನಿಂದ 27 ಬೇಡಿಕೆಗಳುಳ್ಳ ಮನವಿಯನ್ನು ಪ್ರೊ.ಗೋವಿಂದರಾವ್ ಅವರಿಗೆ ಸಲ್ಲಿಸಲಾಯಿತು.

## ಶಾರದಾ ಶಾಲೆ ಎದುರು ಹದಗೆಟ್ಟ ರಸ್ತೆ: ಜನರು ಹಿಡಿಶಾಪ

• ಉದಯವಾಹಿನಿ, ಚಿಂಚೋಳಿ

ಪುರಸಭೆ ವ್ಯಾಪ್ತಿಯ ಚಂದಾಪೂರದ ಶಾರದಾ ಶಾಲೆಯ ಎದುರುಗಡೆ ಇರುವ ರಸ್ತೆ ತುಂಬಾ ಹದಗೆಟ್ಟು ಹೋಗಿ ಅಧೋಗತಿಗೆ ತಲುಪಿದೆ ಪುರಸಭೆ ಜನಪ್ರತಿನಿಧಿಗಳು ಅಧಿಕಾರಿಗಳು ಮೌನವಹಿಸಿದ್ದು ಜನರು ಹಿಡಿಶಾಪ ಹಾಕುತ್ತಿದ್ದಾರೆ ಎಂದು ಸಂಜೀವಕುಮಾರ ಸುಲೇಪೇಟಕರ್ ತಿಳಿಸಿದ್ದಾರೆ.

ಪುರಸಭೆ ವ್ಯಾಪ್ತಿಯ ಶಾರದಾ ಶಾಲೆ ಎದುರಿನ ರಸ್ತೆಯು ನಿರ್ಮಾಣ ಮಾಡುವಂತೆ ಅನೇಕ ಬಾರಿ ಪುರಸಭೆ ಅಧಿಕಾರಿಗಳಿಗೆ ಹಾಗೂ ಜನಪ್ರತಿನಿಧಿಗಳಿಗೆ ಮೌಖಿಕವಾಗಿ ಮತ್ತು ಲಿಖಿತ ರೂಪದಲ್ಲಿ ಮನವಿ ಸಲ್ಲಿಸಿದರು ಪ್ರಯೋಜನವಾಗಿಲ್ಲ,ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು ಜನಪ್ರತಿನಿಧಿಗಳು ರಸ್ತೆ ನಿರ್ಮಿಸಿ ಜನರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದರು.

ಶಾರದಾ ಶಾಲೆಯ ಎದುರು ಅನೇಕ ಮನೆಗಳು ಮತ್ತು ಶಾಲೆಯ ಮಕ್ಕಳು,ಸಾವಿರಾರು ಜನರು


ಉದಯವಾಹಿನಿ ಚಿತ್ರ

ಓಡಾಡುವ ರಸ್ತೆವಿದ್ದು ಮಳೆ ಬಂದರೆ ಸಾಕು ಕೆಸರುಗದ್ದೆಯಾಗುತ್ತಿದೆ.

ವಾಹನಗಳಿಗೂ ಸಹ ಹೋಗಲು ತೊಂದರೆ ಜನರಿಗೆ ಈ ರಸ್ತೆಗೆ ಹೋಗುವಾಗ ಜೀವ ಕೈಯಲ್ಲಿ ಹಿಡಿದುಕೊಂಡು ಹೋಗಿ ಹಿಡಿಶಾಪ ಹಾಕುತ್ತಿದ್ದಾರೆ ಶೀಘ್ರದಲ್ಲೇ ನೂತನ ಸಿಸಿರಸ್ತೆ ನಿರ್ಮಿಸಿ ಜನರಿಗೆ ಅನುಕೂಲ ಕಲ್ಪಿಸಿ ಕೊಡಬೇಕು ಇಲ್ಲಾದಿದ್ದರೆ ಬರುವ ದಿನಗಳಲ್ಲಿ ಪುರಸಭೆ ಕಛೇರಿ ಮುಂಭಾಗದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಸುದ್ದಿಗಾರರೊಂದಿಗೆ ಮಾತನಾಡಿ ತಿಳಿಸಿದ್ದಾರೆ.

## ಪರಿಶಿಷ್ಟರ ಹಣ ಪರಿಶಿಷ್ಟರಿಗೆ ಮೀಸಲಿಡಲು ಆಗ್ರಹಿಸಿ ಡಿಎಸ್‌ಎಸ್ ಪ್ರತಿಭಟನೆ

• ಉದಯವಾಹಿನಿ, ವಿಜಯಪುರ

ಕರ್ನಾಟಕ ದಲಿತ ಸಂಘರ್ಷ ಸಮಿತಿ ಮಹಾತ್ಮ ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ ಜಿಲ್ಲಾ ಸಮಿತಿ ವಿಜಯಪುರ ವತಿಯಿಂದ ನಗರದ ಡಾ. ಅಂಬೇಡ್ಕರ್ ವೃತ್ತದಿಂದ 'ಪರಿಶಿಷ್ಟರ ಹಣ ಪರಿಶಿಷ್ಟರಿಗೆ ಮಾತ್ರ ಎಸ್‌ಸಿಎಸ್‌ಪಿ-ಟಿಎಸ್‌ಪಿ-2013ರ ಕಾಯ್ದೆಯ ಸಮರ್ಪಕ ಜಾರಿಗೆ ಒತ್ತಾಯಿಸಿ ಹಾಗೂ ಬ್ಯಾಕ್‌ಲಾಗ್ ಹುದ್ದೆಗಳನ್ನು ಶೀಘ್ರದಲ್ಲಿ ಭರ್ತಿ ಮಾಡುವ ಕುರಿತು ಬೃಹತ್ ಪ್ರತಿಭಟನಾ ಧರಣಿ ಮುಖಾಂತರ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಅವರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಅಶೋಕ ಚಲವಾದಿ ಮಾತನಾಡಿ, ಎಸ್.ಸಿ.ಎಸ್.ಪಿ.-ಟಿ.ಎಸ್.ಪಿ ಕಾಯ್ದೆ 2013 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿ ಅವಕಾಶಗಳನ್ನು ಶಾಸನಬದ್ದವಾಗಿ ಹೊಂದಲು ರಾಜ್ಯ ಸರ್ಕಾರಗಳು ಕಾಯ್ದೆ ರೂಪಿಸಿದೆ. ಈ ಕಾಯ್ದೆಯ ಕಲಂ 7ಡಿ ಮತ್ತು 7ಸಿ ರಲ್ಲಿ ಕಾಯ್ದೆಯಡಿ ನಿಗದಿಪಡಿಸಿದ ಅನುದಾನವನ್ನು ಅನ್ಯ ಉದ್ದೇಶಗಳಿಗೆ ಬಳಸಿಕೊಂಡು


ಉದಯವಾಹಿನಿ ಚಿತ್ರ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನು ಸರ್ಕಾರಗಳು ವಂಚಿಸುತ್ತಿವೆ. ಆದ್ದರಿಂದ 7ಡಿ ಮತ್ತು 7ಸಿ ಕಲಂಗಳನ್ನು ರದ್ದು ಪಡಿಸುವಂತೆ ಹಲವಾರು ದಲಿತರ ಹೋರಾಟಗಳ ಫಲದಿಂದ 7ಡಿ ರದ್ದು ಮಾಡಿ 7ಸಿಯನ್ನು ಯಥಾಪ್ರಕಾರ ಉಳಿಸಿಕೊಂಡು ಅನ್ಯ ಕಾರ್ಯಗಳಿಗೆ ಬಳಸುತ್ತಿದೆ. ಉದಾಹರಣೆಗೆ ಸರ್ಕಾರ ಘೋಷಿಸಿರುವ ಗ್ಯಾರಂಟಿ ಯೋಜನೆಗಳಿಗೆ ಬಳಕೆಮಾಡಿಕೊಳ್ಳುತ್ತಿರುವುದೇ ಇದಕ್ಕೆ ಸಾಕ್ಷಿ. ಮತ್ತೆ 2024-25, 2025-26 ನೇ ಸಾಲಿನಲ್ಲಿ ಕೂಡ ಗ್ಯಾರಂಟಿ ಯೋಜನೆಗಳನ್ನು ಒಳಗೊಂಡಂತೆ ಅನ್ಯ ಯೋಜನೆಗಳಿಗೆ ಎಸ್.ಸಿ.ಎಸ್.ಪಿ-ಟಿ.ಎಸ್.ಪಿ. ಹಣ ಉಪಯೋಗಿಸುವಂತೆ ಅವಕಾಶ ನೀಡುವ ಮೂಲಕ ಪರಿಶಿಷ್ಟರಿಗೆ ಆರ್ಥಿಕ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದುವ ಅವಕಾಶವನ್ನು ಸರ್ಕಾರಗಳೇ ನೇರವಾಗಿ ಅಸ್ಪೃಶ್ಯ ಆಚರಣೆ ಮಾಡುತ್ತಿದೆ. ಮತ್ತೆ ಮೊಸಳೆ ಕಣ್ಣೀರನ್ನು ಸುರಿಸುತ್ತಿರುವುದನ್ನು ನಿಲ್ಲಿಸಿ ನಯ ವಂಚನೆ ಮಾಡದೆ ಪರಿಶಿಷ್ಟರ ಹಣವನ್ನು ಪರಿಶಿಷ್ಟರಿಗೆ ಮೀಸಲಿಡಬೇಕೆಂದು ಕ.ದ.ಸಂ.ಸ ಒತ್ತಾಯಿಸುತ್ತಾ ಅನ್ಯ ಕಾರ್ಯಗಳಿಗೆ ಬಳಸಿರುವ ಹಣವನ್ನು ವಾಪಸ್ ಪಡೆದು ಪರಿಶಿಷ್ಟ ಅಭಿವೃದ್ಧಿಗಾಗಿ ಉಪಯೋಗಿಸಬೇಕೆಂದು ಒತ್ತಾಯಿಸುತ್ತದೆ.


> ಕಳೆದ 2023ರ ಚುನಾವಣೆಯಲ್ಲಿ ಹಿಂದಿನ ಬಿ.ಜೆ.ಪಿ. ಸರ್ಕಾರ ದಲಿತ ವಿರೋಧಿ ಧೋರಣೆಯನ್ನು ಅನುಸರಿಸುತ್ತಿದ್ದರಿಂದ ಬಹುತೇಕ ಎಲ್ಲಾ ಒಳ ಮೀಸಲಾತಿ ಹೋರಾಟಗಾರರು ಕಾಂಗ್ರೇಸ್ ಪಕ್ಷವನ್ನು ಬೆಂಬಲಿಸಿದ ಕಾರಣ ಸರ್ಕಾರ ರಚನೆಯಾಗಿರುವುದನ್ನು ಕಾಂಗ್ರೇಸ್ ಪಕ್ಷ ಮರೆಯಬಾರದು. ಇನ್ನಾದರೂ ಎಚ್ಚೆತ್ತು ಕಲಂ 7ಸಿ ರದ್ದು ಪಡಿಸಿ ವಿವಿಧ ಇಲಾಖೆಗಳ ಮೂಲಕ ಅನ್ಯ ಯೋಜನೆಗಳಿಗೆ ಅನುದಾನ ನೀಡುತ್ತಿರುವುದನ್ನು ತಕ್ಷಣ ತಡೆಯುವಂತೆ ಒತ್ತಾಯಿಸಿದರು.
> -ರಮೇಶ ಆಸಂಗಿ, ರಾಜ್ಯ ಸಂಘಟನಾ ಸಂಚಾಲಕ

## ಆಲಮಟ್ಟಿ ಉದ್ಯಾನದಲ್ಲಿ ಶ್ರೀಗಂಧದ ಮರಗಳ ಕಳ್ಳತನ ಯತ್ನ ?

• ಉದಯವಾಹಿನಿ, ಆಲಮಟ್ಟಿ

ಆಲಮಟ್ಟಿ ವಿವಿಧ ಅತ್ಯಾಕರ್ಷಕ ಉದ್ಯಾನವನದಿಂದ ಹೆಸರುವಾಸಿಯಾಗಿದೆ. ಇಲ್ಲಿನ ಹಸಿರು ಐಸಿರಿಯ ಸೊಬಗು ಕಣ್ತುಂಬಿಸಿಕೊಳ್ಳಲು ನಿತ್ಯ ಸಹಸ್ರಾರು ಪ್ರವಾಸಿಗರು ಇತ್ತ ಧಾವಿಸಿ ಬರುತ್ತಾರೆ.ಹಸಿ ನಯಯದ ಸಿರಿಗಂಧ ಅದೆಷ್ಟೋ ಮನ ಮನಗಳಲ್ಲಿ ಸೌಗಂಧದ ಸುವಾಸನೆ ಬೀರುತ್ತದೆ. ಜೊತೆಗೆ ಶ್ರೀಗಂಧದ ಗಿಡಮರಗಳು ಹೆಮ್ಮರವಾಗಿ ನಳನಳಿಸಿ ಪರಮಳಿಸುತ್ತಿವೆ. ತನ್ಮಯ ನೋಟ ತಮ್ಮತ್ತ ಸೆಳೆಯುತ್ತಿವೆ. ಈ ಮಧ್ಯೆ ದುಷ್ಟ ಕಳಪೋಕರ ಕೆಂಗಣ್ಣು ಶ್ರೀಗಂಧದ ಮರಗಳ ಮೇಲೆ ಅಗಾಗ ನೆಟ್ಟು ನೆಲಕ್ಕುರುಳುತ್ತಿವೆ.

ಇಲ್ಲಿ ಬುಧವಾರ ತಡರಾತ್ರಿ ಕಳ್ಳರ ದುಷ್ಕೃತ್ಯಕ್ಕೆ ಎರಡು ಶ್ರೀಗಂಧದ ಮರಗಳು ತುಂಡಾಗಿ ನೆಲಕ್ಕಪ್ಪಳಿಸಿವೆ. ರಾಕ್ ಉದ್ಯಾನದಲ್ಲಿ ಒಂದು ಹಾಗೂ ಪಾರ್ಕಿಂಗ್ ಲಾಟ್ ಬಳಿ ಒಂದು ಸೇರಿ ಒಟ್ಟಾರೆ ಎರಡು ಬೃಹತ್ ಶ್ರೀಗಂಧದ ಗಿಡಗಳನ್ನು ಕಳ್ಳರು ಕಟ್ ಮಾಡಿ ಕಳ್ಳಕನಕ್ಕೆ ಯತ್ನಿಸಿದ್ದಾರೆ. ಶ್ರೀಗಂಧದ ಗಿಡಗಳನ್ನು ಕತ್ತರಿಸಿದ ಬಳಿಕ ಅವುಗಳನ್ನು ಒಯ್ಯಲು ಸಾಧ್ಯವಾಗದೇ ಅಲ್ಲಿಯೇ ಬಿಟ್ಟು ವಿಧಿಯಿಲ್ಲದೇ ಅಲ್ಲಿಂದ ಕಾಲ್ಕಿತ್ತಿದ್ದಾರೆ. ಶ್ರೀಗಂಧದ ಎರಡು ಹೆಮ್ಮರ ಮರಗಳ ಜೀವ ಕತ್ತರಿಸಿ ಪರಾರಿಯಾಗಿ ಕಣ್ಮರೆಯಾಗಿದ್ದಾರೆ.ಇಂಥ ಘಟನೆ ನಡೆದಿದ್ದು ಇದು ಮೊದಲಲ್ಲ. ಕಳ್ಳರು ದುರಾಸೆಯಿಂದ ಶ್ರೀಗಂಧದ


ಉದಯವಾಹಿನಿ ಚಿತ್ರ

ಮರಗಳನ್ನು ಅಗಾಗ ಕತ್ತರಿಸಿ,ತುಂಡರಿಸಿ ಸ್ಥಳದಲ್ಲೇ ಬಿಟ್ಟು ಓಡಿರುವ ಘಟನೆಗಳು ನಡೆಯುತ್ತಲೇ ಇವೆ.

ಈಗ ಪುನಃ ಇಂಥದೊಂದು ಘಟನೆ ಮರುಕಳಿಸಿದ್ದು ಸಸ್ಯ ಪ್ರಿಯರಿಗೆ ನೋವನ್ನುಂಟು ಮಾಡಿದೆ. ಎರಡು ಗಿಡಗಳು ಅಂದಾಜು ಹತ್ತು ವರ್ಷ ವಯಸ್ಸಿನದ್ದು ಎಂದು ಅರಣ್ಯಾಧಿಕಾರಿಗಳು ಹೇಳುತ್ತಾರೆ.

ಉಪ ವಲಯದ ಅರಣ್ಯಾಧಿಕಾರಿ ಸತೀಶ ಗಲಗಲಿ ಘಟನೆ ಕುರಿತು ಆಲಮಟ್ಟಿ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಆಲಮಟ್ಟಿ ಜಲಾಶಯ ಭದ್ರತೆಗೆಂದು ಕರ್ನಾಟಕ ಕೈಗಾರಿಕಾ ಭದ್ರತಾ ಪಡೆಯ ಸಿಬ್ಬಂದಿ ನಿಯೋಜಿಸಲಾಗಿದೆ. ಜತೆಗೆ ಪೋಲೀಸ್ ಇಲಾಖೆ ಕೂಡಾ ಶ್ರಮ ವಹಿಸುತ್ತಿದೆ. ಹೀಗಿದ್ದರೂ ಇಂಥ ಘಟನೆ ಜರಗುತ್ತಿರುವದು ವಿಪರ್ಯಾಸ. ಇಷ್ಟೊಂದು ಸುರಕ್ಷಿತವಾಗಿರುವ ಭದ್ರತೆ ನಡುವೆಯೂ ಕಳ್ಳರು ತಮ್ಮ ಕೈಚಳಕದ ಕರಾಮತ್ತು ತೋರಿಸುವ ಮೂಲಕ ಶ್ರೀಗಂಧದ ಮರಗಳನ್ನು ಬಲಿ ಪಡೆದು ಅಟ್ಟಹಾಸ ಮೆರೆಯುತ್ತಿರುವುದು ಜನರನ್ನು ಚಿಂತೆಗೀಡು ಮಾಡಿದೆ.

### ಅಧಿಕಾರಿಗಳು ಗಪ್ ಚುಪ್

ಕಳೆದ ಐದಾರು ವರ್ಷಗಳಿಂದ ವರ್ಷಕ್ಕೆ ಎರಡು ಬಾರಿಯಾದರೂ ಇಲ್ಲಿ ಶ್ರೀಗಂಧದ ಮರಗಳ ಕಳ್ಳತನ ಪ್ರಕರಣಗಳು ಜರುಗುತ್ತಿರುವುದು ಬೆಳಕಿಗೆ ಬರುತ್ತಿವೆ. ಆದರೆ ವಿಚಿತ್ರವೆಂದರೆ ಇದುವರೆಗೂ ಯಾವೊಬ್ಬ ಆರೋಪಿಗಳು ಪತ್ತೆಯಾಗಿಲ್ಲ. ಆರೋಪಿಗಳನ್ನು ಬಂಧಿಸುವ ಮಾತು ಬಲು ದೂರು ಅಗಿದೆ. ಸಂಬಂಧಿಸಿದ ಅಧಿಕಾರಿಗಳು ಗೌಣವಾಗಿದ್ದಾರೆ.ಆರೋಪಿಗಳನ್ನು ಬಂಧಿಸುವಲ್ಲಿ ವಿಫಲರಾಗಿದ್ದಾರೆ. ಪ್ರತಿ ಬಾರಿಯೂ ಈ ರೀತಿಯ ಘಟನೆ ಜರುಗಿದಾಗ ಹಿರಿಯ ಅಧಿಕಾರಿಗಳು, ಕಿರಿಯ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ಸೂಚಿಸಿ ಹೋಗುತ್ತಾರೆಯೇ ಹೊರತು ಯಾವುದೇ ದಿಟ್ಟತನದ ಸೂಕ್ತ ಕ್ರಮಗಳಾಗಿಲ್ಲ. ಇದರಿಂದ ಮರಗಳ್ಳರು ಮತ್ತು ಅಧಿಕಾರಿಗಳ ಮಧ್ಯೆ ಗಪ್ ಚುಪ್ ಒಡಂಬಡಿಕೆ ಇರಬಹುದು ಎಂದು ಸಾರ್ವಜನಿಕರು ಗಂಭೀರವಾಗಿ ಆರೋಪಿಸುತ್ತಿದ್ದಾರೆ.

## ಕಿತ್ತೂರಿನಲ್ಲಿ ರೂ. 33.78 ಕೋಟಿ ವೆಚ್ಚದಲ್ಲಿ ಆಸ್ಪತ್ರೆ

• ಉದಯವಾಹಿನಿ ಚನ್ನಮ್ಮನ ಕಿತ್ತೂರು

ಈ ಭಾಗದ ಜನತೆ ಕಂಡು ಕನಸು ಇಂದು ನನಸಾಗಿದ್ದು ತಾಲ್ಲೂಕಿಗೆ ನೂರು ಹಾಸಿಗೆಯ ಆಸ್ಪತ್ರೆ ರೂ.33.78 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಹೊಸದಾಗಿ ಟೆಂಡರ್ ಕರೆದು ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗಿದ್ದು ಸಚಿವ ಸಂಪುಟ ಸಭೆಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶ ಹೊರಡಿಸಿದೆ ಎಂದು ಪಪಂ ಅಧ್ಯಕ್ಷ ಜೈಸಿದ್ರಾಮ ಮಾರಿಹಾಳ ಹೇಳಿದರು.

ಪಟ್ಟಣದ ಪೇಟೆ ಚನ್ನಮ್ಮನ ಪುತ್ತಳಿಗೆ ಮಾಲಾರ್ಪಣೆ ಮಾಡಿ ರಾಷ್ಟ್ರೀಯ ಹೆದ್ದಾರಿ 4ರ ಪಕ್ಕದ ಚನ್ನಮ್ಮ ವರ್ತುಳದಲ್ಲಿ ಕಾರ್ಯಕರ್ತರು ಮುಖಂಡರು, ಅಭಿಮಾನಿಗಳು ಸಹಿ ಹಂಚಿ ಪಟಾಕಿ ಸಿಡಿಸಿ ಮಾತನಾಡಿ ಈ ಆಸ್ಪತ್ರೆ ರಾಷ್ಟ್ರೀಯ ಹೆದ್ದಾರಿ 4ರ ಪಕ್ಕದ ನೂತನ ಕೋರ್ಟ್ ಕಟ್ಟಡ ಪಕ್ಕದಲ್ಲಿಯೇ 3.30 ಎಕರೆ ಪ್ರದೇಶದಲ್ಲಿ ಆಸ್ಪತ್ರೆ ನಿರ್ಮಿಸಲು ಪ್ರಸ್ತಾವನೆ ಸಿದ್ದಪಡಿಸಿ ಸರ್ಕಾರಕ್ಕೆ ಮಾಹಿತಿ ಕಳಿಸಿ ಸರ್ಕಾರ ಮಟ್ಟದಲ್ಲಿ ಶಾಸಕ ಬಾಬಾಸಾಹೇಬ ಪಾಟೀಲರು ತಾಲ್ಲೂಕಾ ಆಸ್ಪತ್ರೆ ಮಂಜೂರು ಮಾಡಿಸುವಲ್ಲಿ ದೊಡ್ಡ ಮಟ್ಟದಲ್ಲಿ ಸಾಧನೆ ಮಾಡಿದ್ದಾರೆ ಎಂದರು.

2023ನೇ ಸಾಲಿನಲ್ಲಿ ಎಸ್.ಡಿ.ಪಿ ಅಡಿಯಲ್ಲಿ ಅನುಮೋದನೆ ದೊರೆತ ಕಾಮಗಾರಿ 100 ಹಾಸಿಗೆ ಆಸ್ಪತ್ರೆ ಅನುಷ್ಠಾನಗಳೊಸಲು ಪ್ರಸ್ತಾಪಿಸಲಾಗಿದ್ದು. ಶವ ಪರೀಕ್ಷೆ, ಅಡುಗೆಮನೆ, ಆಸ್ಪತ್ರೆ ಕಟ್ಟಡ, ಸಿಬ್ಬಂದಿ ವಸತಿ,


ಉದಯವಾಹಿನಿ ಚಿತ್ರ

ಇನ್ನಿತರ ಸಲಕರಣೆಗಳು ಹೀಗೆ ಹಲವು ಕಟ್ಟಡಗಳನ್ನು ಹೊಂದಿದ್ದು. ವೈದ್ಯಕೀಯ ಸಲಕರಣೆ ಹಾಗೂ ಪೀಠೋಪಕರಣ ಇನ್ನೂ ಆಸ್ಪತ್ರೆಗೆ ಬೇಕಾಗುವ ಎಲ್ಲಾ ಸೌಲತ್ತುಗಳನ್ನು ಸರ್ಕಾರದ ಅನುದಾನದಿಂದ ಕೊಡಲು ಸಚಿವ ಸಂಪುಟದಲ್ಲಿ ನಮಗೆ ಅನುಮೋದನೆ ದೊರೆತಿದೆ ಇದು ಸಂತಸ ಎಂದರು. ಈ ಹಿಂದಿನ ಸರ್ಕಾರ ಆಸ್ಪತ್ರೆಯನ್ನು ಮಂಜೂರು ಮಾಡಿ ಪಟ್ಟಣದಿಂದ 5 ಕಿ.ಮೀ. ದೂರದಲ್ಲಿ ಕಟ್ಟಲು ನಿರ್ಣಯಿಸಿತ್ತು.

ಆ ವೇಳೆ ಶಾಸಕ ಬಾಬಾಸಾಹೇಬ ಪಾಟೀಲ ಇನ್ನೂ ಶಾಸಕರಾಗಿರಲಿಲ್ಲ. ಈ ಕಟ್ಟಡ ಬಡಜನತೆಗೆ ತೊಂದರೆಯಾಗುತ್ತಿದೆ. ಇಷ್ಟೂ ದೂರದವರೆಗೂ ಯಾರು ಹೋಗುವುದಿಲ್ಲ. ವಿರೋಧಿಸಿ ಹೋರಾಟ ನಡೆಸಿದ್ದರು. ನಂತರ ಅವರು ಶಾಸಕರಾದ ಮೇಲೆ ಜನರ ಒತ್ತಾಸೆಯಂತೆ ಆಸ್ಪತ್ರೆ ಕಟ್ಟಡ ಪಟ್ಟಣದಲ್ಲಿಯೇ ಕಟ್ಟಲು ಸರ್ಕಾರದಿಂದ ಒಪ್ಪಿಗೆ ಪಡೆದುಕೊಂಡರು. ಇದು ಜನರಲ್ಲಿ ಸಂತಸ ಇಮ್ಮಡಿಗೊಳಿಸಿದೆ ಎಂದರು.

# ಹೈಟೆಕ್ ಮಾರುಕಟ್ಟೆ: ಮತ್ತಷ್ಟು ತಡ: 3 ತಿಂಗಳ ಕಾಲಾವಕಾಶ ಕೋರಿದ ಕೆಎಚ್‌ಬಿ

### ರೇಷ್ಮೆ ಬೆಳೆಗಾರರ ಅನುಕೂಲಕ್ಕೆಂದು ತಾಲ್ಲೂಕಿನ ಕೂನಬೇವು-ಹೂಲಿಹಳ್ಳಿ ಬಳಿ ನಿರ್ಮಿಸುತ್ತಿರುವ ಹೈಟೆಕ್ ರೇಷ್ಮೆ ಮಾರುಕಟ್ಟೆ

• ಉದಯವಾಹಿನಿ ರಾಣೆಬೆನ್ನೂರು

ಜಿಲ್ಲೆಯಲ್ಲಿರುವ ರೇಷ್ಮೆ ಬೆಳೆಗಾರರ ಅನುಕೂಲಕ್ಕೆಂದು ರಾಣೆಬೆನ್ನೂರು ತಾಲ್ಲೂಕಿನ ಕೂನಬೇವು-ಹೂಲಿಹಳ್ಳಿ ಬಳಿ ನಿರ್ಮಿಸುತ್ತಿರುವ 'ಹೈಟೆಕ್ ರೇಷ್ಮೆ ಮಾರುಕಟ್ಟೆ' ಆರಂಭವಾಗುವುದು ಮತ್ತಷ್ಟು ತಡವಾಗಲಿದೆ. ನಿಗದಿತ ಸಮಯಕ್ಕೆ ಕಾಮಗಾರಿ ಮುಗಿಸಬೇಕಾದ ಗುತ್ತಿಗೆದಾರರು, ಹೆಚ್ಚಿನ ಕಾಲಾವಕಾಶ ಕೋರಿದ್ದಾರೆ.

ಹೈಟೆಕ್ ರೇಷ್ಮೆ ಮಾರುಕಟ್ಟೆ ನಿರ್ಮಾಣ ಕಾಮಗಾರಿಯ ಪ್ರಗತಿ ಬಗ್ಗೆ ಇತ್ತೀಚೆಗೆ ಸಭೆಯಲ್ಲಿ ಮಾಹಿತಿ ನೀಡಿದ್ದ ಕರ್ನಾಟಕ ಗೃಹ ಮಂಡಳಿ (ಕೆಎಚ್‌ಬಿ) ಅಧಿಕಾರಿಗಳು, ಡಿಸೆಂಬರ್‌ನಲ್ಲಿ ಕೆಲಸ ಮುಗಿಸಿ ಕಟ್ಟಡ ಹಸ್ತಾಂತರಿಸುವುದಾಗಿ ಹೇಳಿದ್ದಾರೆ.

ಆದರೆ, ಯೋಜನೆಯ ನಿಯಮಾವಳಿ ಪ್ರಕಾರ ಸೆಪ್ಟೆಂಬರ್ 31ರಂದು ಕಾಮಗಾರಿ ಮುಗಿಸಬೇಕಿತ್ತು. ಕಚ್ಚಾ ಸಾಮಗ್ರಿ, ಹಾಗೂ ಕಾರ್ಮಿಕರ ಕೊರತೆ ನೆಪ ಹೇಳುತ್ತಿರುವ ಗುತ್ತಿಗೆದಾರರು, ಪುನಃ ಮೂರು ತಿಂಗಳ ಕಾಲಾವಕಾಶ ಪಡೆದುಕೊಂಡಿದ್ದಾರೆ. 'ರೇಷ್ಮೆ ಮಾರುಕಟ್ಟೆ ನಿರ್ಮಾಣವಾದರೆ ನಮಗೆ ಅನುಕೂಲವಾಗುತ್ತದೆ' ಎಂದು ತಿಳಿದಿದ್ದ ರೈತರಿಗೆ, ಕಾಮಗಾರಿ ಮತ್ತಷ್ಟು ದಿನ ತಡವಾಗುತ್ತಿರುವುದು ಬೇಸರ ಮೂಡಿಸಿದೆ.


ಉದಯವಾಹಿನಿ ಚಿತ್ರ

ಅತೀ ಹೆಚ್ಚು ರೇಷ್ಮೆ ಬೆಳೆಯುವ ಉತ್ತರ ಕರ್ನಾಟಕದ ಜಿಲ್ಲೆಗಳ ಪೈಕಿ ಹಾವೇರಿ ಜಿಲ್ಲೆ ಮೊದಲ ಸ್ಥಾನದಲ್ಲಿದೆ. ರಾಜ್ಯದ ಜಿಲ್ಲೆಗಳ ಪಟ್ಟಿಯಲ್ಲಿ 3ನೇ ಸ್ಥಾನದಲ್ಲಿದೆ. ಆದರೆ, ಹಾವೇರಿಯಲ್ಲಿ ರೇಷ್ಮೆ ಬೆಳೆಯುವ ರೈತರು ಅದನ್ನು ಮಾರಾಟ ಮಾಡಲು ದೂರದ ರಾಮನಗರ ಹಾಗೂ ಶಿಡ್ಲಘಟ್ಟಕ್ಕೆ ಹೋಗಿ ಬರಬೇಕಿದೆ. ಸಾರಿಗೆ ವೆಚ್ಚವೂ ದುಬಾರಿಯಾಗುತ್ತಿದೆ. 'ಹಾವೇರಿಯಲ್ಲಿ ಹೆಚ್ಚು ರೇಷ್ಮೆ ಬೆಳೆದರೂ ಖರೀದಿದಾರರಿಲ್ಲ. ಇದ್ದರೂ ಇಬ್ಬರು ಮಾತ್ರ ಇದ್ದಾರೆ. ಅವರು ಹೇಳಿದ್ದೆ ದರವಾಗುತ್ತಿದೆ. ಕಡಿಮೆ ದರಕ್ಕೆ ರೇಷ್ಮೆ ನೀಡಲು ಮನಸ್ಸು ಒಪ್ಪುವುದಿಲ್ಲ. ಹೀಗಾಗಿ, ವಾಹನಗಳನ್ನು ಬಾಡಿಗೆ ಮಾಡಿಕೊಂಡು ರಾಮನಗರಕ್ಕೆ ಹೋಗಿ ರೇಷ್ಮೆ ಮಾರುತ್ತಿದ್ದೇವೆ. ನಮ್ಮೂರಿನಲ್ಲೇ ಮಾರುಕಟ್ಟೆಯಾದರೆ, ಸಾರಿಗೆ ವೆಚ್ಚವೂ ಉಳಿಯಲಿದೆ' ಎಂದು ಮೇವುಂಡಿ ರೈತರು ಹೇಳಿದರು.

> ಹೈಟೆಕ್ ರೇಷ್ಮೆ ಮಾರುಕಟ್ಟೆಯ ಕಾಮಗಾರಿ ಪ್ರಗತಿಯಲ್ಲಿದೆ. ಕಟ್ಟಡ ಕಾಮಗಾರಿ ಮುಗಿದ ಕೂಡಲೇ ರೇಷ್ಮೆ ಇಲಾಖೆಗೆ ಹಸ್ತಾಂತರಿಸಲಾಗುವುದು.
> -ಹುಸ್ಯೆನಬಿ, ಕೋಲಾರ ಪ್ರಭಾರಿ ಅಧಿಕಾರಿ ಕರ್ನಾಟಕ ಗೃಹ ಮಂಡಳಿ

> ಗುತ್ತಿಗೆದಾರರು ಕಾಲಹರಣ ಮಾಡದೇ ಹೈಟೆಕ್ ರೇಷ್ಮೆ ಮಾರುಕಟ್ಟೆ ನಿರ್ಮಾಣ ಕೆಲಸವನ್ನು ವೇಗಗೊಳಿಸಬೇಕು. ತ್ವರಿತವಾಗಿ ಮಾರುಕಟ್ಟೆ ಆರಂಭಿಸಬೇಕು.
> -ಹರೀಶ ಗುರುಶಾಂತಪ್ಪ ಕರೂರ ಚಳಗೇರಿ ರೈತ

ಕಾಮಗಾರಿ ಮತ್ತಷ್ಟು ದಿನ ತಡ

**ಗೃಹ ಮಂಡಳಿಗೆ ಗುತ್ತಿಗೆ:** ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಕೂನಬೇವು- ಹೂಲಿಹಳ್ಳಿ ಬಳಿ ರೇಷ್ಮೆ ಮಾರುಕಟ್ಟೆ ನಿರ್ಮಿಸಲಾಗುತ್ತಿದೆ. ಇದರ ನಿರ್ಮಾಣಕ್ಕೆ 15 ಕೋಟಿ ಯೋಜನಾ ಮೊತ್ತವಿತ್ತು. ಮಾರುಕಟ್ಟೆ ನಿರ್ಮಿಸುವ ಜವಾಬ್ದಾರಿಯನ್ನು ಕರ್ನಾಟಕ ಗೃಹ ಮಂಡಳಿಗೆ 11.99 ಕೋಟಿ ರೂ.ಗೆ ಗುತ್ತಿಗೆ ನೀಡಲಾಗಿದೆ.

ಗೃಹ ಮಂಡಳಿ ಅಧಿಕಾರಿಗಳೇ ಉಸ್ತುವಾರಿ ವಹಿಸಿಕೊಂಡು ಕಟ್ಟಡ ನಿರ್ಮಿಸುತ್ತಿದ್ದಾರೆ. 2024ರ ನವೆಂಬರ್ 1ರಂದು ಕಾಮಗಾರಿ ಆರಂಭಿಸುವ ಸಂದರ್ಭದಲ್ಲಿ 11 ತಿಂಗಳಿನಲ್ಲಿ ಕೆಲಸ ಮುಗಿಸಬೇಕೆಂದು ಷರತ್ತು ವಿಧಿಸಲಾಗಿದೆ. ಆದರೆ, ಕೆಲಸಕ್ಕೆ ಹಲವು ಸಮಸ್ಯೆಗಳು ಎದುರಾಗಿದ್ದವು. ಇದೇ ಕಾರಣಕ್ಕೆ ಗೃಹ ಮಂಡಳಿಯವರು ಹೆಚ್ಚುವರಿಯಾಗಿ ಮೂರು ತಿಂಗಳು ಕಾಲಾವಕಾಶ ಕೋರಿದ್ದಾರೆ. ಕೂನಬೇವು - ಹೂಲಿಹಳ್ಳಿ ಗ್ರಾಮದ ಸರ್ವೇ ನಂ. 123ರಲ್ಲಿ 5 ಎಕರೆ 1 ಗುಂಟೆ 8 ಆಣೆ ಜಾಗದಲ್ಲಿ ಹೈಟೆಕ್ ರೇಷ್ಮೆ ಗೂಡಿನ ಮಾರುಕಟ್ಟೆ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಕೆಲ ಕೊರತೆಗಳಿಂದ ಕಾಮಗಾರಿ ನಿಧಾನಗತಿಯಲ್ಲಿ ಸಾಗಿದ್ದು, ಡಿಸೆಂಬರ್ ಅಂತ್ಯಕ್ಕೆ ಪೂರ್ಣ ಕಾಮಗಾರಿ ಮುಗಿಯಲಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

ಜಿಲ್ಲೆಯ 250 ಗ್ರಾಮಗಳ 3,047 ಹೆಕ್ಟೇರ್ ಪ್ರದೇಶದಲ್ಲಿ 8 ಸಾವಿರಕ್ಕೂ ಹೆಚ್ಚು ರೈತರು, ರೇಷ್ಮೆ ಬೆಳೆಯುತ್ತಿದ್ದಾರೆ. ಹೈಟೆಕ್ ಮಾರುಕಟ್ಟೆ ಆರಂಭವಾದರೆ, ಎಲ್ಲಾ ರೈತರಿಗೆ ಅನುಕೂಲವಾಗಲಿದೆ. ವಿಜಯಪುರ, ಜಮಖಂಡಿ, ಬಾಗಲಕೋಟೆ, ವಿಜಯನಗರ, ಕಾರವಾರ, ಬೆಳಗಾವಿ, ಗದಗ, ಧಾರವಾಡ, ಹುಬ್ಬಳ್ಳಿ ರೈತರಿಗೂ ಮಾರುಕಟ್ಟೆಯಲ್ಲಿ ರೇಷ್ಮೆ ಮಾರಾಟಕ್ಕೆ ಅವಕಾಶ ಸಿಗಲಿದೆ.

ಹಾವೇರಿಯಲ್ಲಿ ಮಾರುಕಟ್ಟೆ ಕೊರತೆಯಿಂದ ರೈತರು, ರಾಮನಗರಕ್ಕೆ ರೇಷ್ಮೆ ಕೊಂಡೊಯ್ಯುತ್ತಿದ್ದಾರೆ. ಇಲ್ಲಿಯೇ ಮಾರುಕಟ್ಟೆ ನಿರ್ಮಾಣವಾದರೆ, ಗೂಡು ವಹಿವಾಟು ಉತ್ತಮವಾಗಲಿದೆ. ಸ್ಥಳೀಯ ರೈತರ ಆದಾಯವೂ ವೃದ್ಧಿಸಲಿದೆ' ಎಂದು ರೇಷ್ಮೆ ಇಲಾಖೆ ಉಪನಿರ್ದೇಶಕ ಮಾಲತೇಶ ಎಸ್. ಪಾಟೀಲ ತಿಳಿಸಿದರು.

**ಹೇಗಿರಲಿದೆ ಮಾರುಕಟ್ಟೆ:** ರೇಷ್ಮೆ ಮಾರುಕಟ್ಟೆಯ ಪ್ರವೇಶ ಪ್ಲಾಜಾದಲ್ಲಿ ಭದ್ರತಾ ಕೊಠಡಿ ಮತ್ತು ಪಾದಚಾರಿ ಪ್ರವೇಶ ಇರಲಿದೆ. ರೈತ ಮಿತ್ರ ಹೆಸರಿನಲ್ಲಿ ಕೊಠಡಿ, ಸಹಾಯವಾಣಿ, ಅಗ್ನಿಶಾಮಕ ತಾಂತ್ರಿಕ ಬೆಂಬಲ ಕೊಠಡಿ ಮತ್ತು ಪೊಲೀಸ್ ಹೊರಠಾಣೆ ಇರಲಿದೆ. ವಿದ್ಯುತ್ ನಿರ್ವಹಣೆ ಕೊಠಡಿ, ನೆಲದಡಿಯ ಟ್ಯಾಂಕ್, ಕಾಂಕ್ರೀಟ್ ರಸ್ತೆ, ಕಾಂಪೌಂಡ್ ಇರಲಿದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ಅತಿಯಾಗಿ ತಿನ್ನುವುದನ್ನು ತಪ್ಪಿಸಿ, ತೂಕದ ಮೇಲೆ ಹಿಡಿತ ಹೊಂದಿರಿ. ವಿದೇಶದಲ್ಲಿ ಮಲಗಿರುವ ನಿಮ್ಮ ಭೂಮಿಯನ್ನು ಉತ್ತಮ ಬೆಲೆಗೆ ಮಾರಾಟ ಮಾಡಬಹುದು, ಅದು ನಿಮಗೆ ಲಾಭದಾಯಕವಾಗಲಿದೆ.

**ವೃಷಭ** ನಿಮ್ಮ ಪ್ರಚಂಡ ಪ್ರಯತ್ನ ಹಾಗೂ ಕುಟುಂಬದ ಸದಸ್ಯರ ಸಕಾಲಿಕ ಬೆಂಬಲ ಬಯಸಿದ ಫಲಿತಾಂಶಗಳು ತರುತ್ತದೆ. ಆದರೆ ಪ್ರಸ್ತುತ ಚೇತನವನ್ನು ಕಾಯ್ದುಕೊಳ್ಳಲು ಶ್ರಮಿಸುತ್ತಿರಿ.

**ಮಿಥುನ** ಕ್ರೀಡೆಗಳು ಸಾರ್ವಕಾಲಿಕ ಯೌವನದ ರಹಸ್ಯವಾಗಿದ್ದರಿಂದ ಯಾವುದಾದರೂ ಆಟಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಬುದ್ಧಿವಂತಿಕೆಯಿಂದ ಹೂಡಿಕೆ ಮಾಡಿ. ಮಕ್ಕಳ ಚಿಂತೆಗಳನ್ನು ಬೆಂಬಲಿಸುವುದು ಅಗತ್ಯ.

**ಕರ್ಕಾಟಕ** ನಗು ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ನೀವು ವಿವಾಹಿತರಾಗಿದ್ದರೆ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ ಏಕೆಂದರೆ ನೀವು ಅದನ್ನು ಮಾಡದಿದ್ದರೆ ಅವರ ಆರೋಗ್ಯವು ಹದಗೆಡಬಹುದು.

**ಸಿಂಹ** ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ.

**ಕನ್ಯಾ** ಇಂದು ನೀವು ಚೈತನ್ಯಯುಕ್ತವಾಗಿರುತ್ತೀರಿ, ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ.

**ತುಲಾ** ನಿಮ್ಮ ಮನೆಯ ಸದಸ್ಯರಿಗೆ ಸಮಯವನ್ನು ನೀಡಲು ಬಯಸುವಿರಿ. ಈ ಸಮಯದಲ್ಲಿ ಮನೆಯ ಯಾರೋ ಆಪ್ತರೊಂದಿಗೆ ನಿಮ್ಮ ವಿವಾದ ವಾಗಬಹುದು ಮತ್ತು ನಿಮ್ಮ ಮನಸ್ಥಿತಿ ತೊಂದರೆಗೊಳಗಾಗಬಹುದು.

**ವೃಶ್ಚಿಕ** ಇಂದು ನೀವು ನಿಮ್ಮ ಆರೋಗ್ಯ ಮತ್ತು ನೋಟವನ್ನು ಸುಧಾರಿಸಲು ಕೆಲಸ ಮಾಡಲು ಸಾಕಷ್ಟು ಸಮಯ ಹೊಂದಿರುತ್ತೀರಿ ವ್ಯಾಪಾರ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ.

**ಧನಸ್ಸು** ಸಂಬಂಧಿಗಳಿದ್ದಲ್ಲಿ ಸಣ್ಣ ಪ್ರಯಾಣ ನಿಮ್ಮ ದೈನಂದಿನ ಒತ್ತಡದ ಜೀವನ ದಿಂದ ನಿಮಗೆ ಸುಖ ಮತ್ತು ವಿಶ್ರಾಂತಿಯನ್ನು ತರುತ್ತದೆ ನೀವು ನೀವು ಸುತ್ತಲೂ ನಿಮ್ಮ ಪ್ರಿಯತಮೆಯ ಪ್ರೀತಿಯನ್ನು ಅನುಭವಿಸುತ್ತೀರಿ.

**ಮಕರ** ನಿಮ್ಮ ಸಾಮಾನ್ಯ ಜ್ಞಾನದ ಜೊತೆಗೆ ನಿಮ್ಮ ನಿರಂತರ ಪ್ರಯತ್ನ ಖಂಡಿತ ವಾಗಿಯೂ ಯಶಸ್ಸು ತರುವುದರಿಂದ ತಾಳ್ಮೆಯಿಂದಿರಿ. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ.

**ಕುಂಭ** ಸೃಜನಶೀಲ ಕೆಲಸ ನಿಮ್ಮನ್ನು ಶಾಂತವಾಗಿರಿಸುತ್ತವೆ. ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿ ಕೊಳ್ಳುತ್ತದೆ. ಎಲ್ಲರನ್ನೂ ನಿಮ್ಮ ದೊಡ್ಡ ಪಾರ್ಟಿಗೆ ಕರೆಯಿರಿ.

**ಮೀನ** ನೀವು ಮಾನಸಿಕವಾಗಿ ಅತ್ಯಂತ ದುರ್ಬಲರಾಗಿರುತ್ತೀರಿ. ಆದ್ದರಿಂದ ನೀವು ನೋವಿಗೀಡಾಗಬಹುದಾದ ಸಂದರ್ಭಗಳಿಂದ ದೂರ ಉಳಿಯಿರಿ. ಸಾಲಗಾರನು ನಿಮ್ಮ ಮನೆ ಬಾಗಿಲಿಗೆ ಬರಬಹುದು.

### ಸಪ್ತ ನೇಕಾರರ ಸೇವಾ ಸಂಘ ಏರ್ಪಡಿಸಿದ್ದ 11ನೇ ರಾಷ್ಟ್ರೀಯ ಕೈಮಗ್ಗ ದಿನಾಚರಣೆ –2025

# ಕೆಕೆಆರ್‌ಡಿಬಿಯಿಂದ ಕೈಮಗ್ಗ ಉತ್ಪನ್ನಗಳ ಪ್ರದರ್ಶನಕ್ಕೆ ನೆರವು

• **ಉದಯವಾಹಿನಿ ಕಲಬುರಗಿ**

ಕೆಕೆಆರ್‌ಡಿಬಿ ನೆರವಿನಡಿ ಕೈಮಗ್ಗ ಉತ್ಪನ್ನ ವಸ್ತುಗಳ ಪ್ರದರ್ಶನಕ್ಕೆ ಸಿದ್ಧ ಎಂದು ಕೆಕೆಆರ್‌ಡಿಬಿ ಅಧ್ಯಕ್ಷ ಹಾಗೂ ಜೇವರ್ಗಿ ಶಾಸಕ ಡಾ.ಅಜಯಸಿಂಗ್ ಧರ್ಮಸಿಂಗ್ ಹೇಳಿದರು. ನಗರದ ಕನ್ನಡ ಭವನದ ಸುವರ್ಣ ಸಭಾಭವನದಲ್ಲಿ ಸಪ್ತ ನೇಕಾರರ ಸೇವಾ ಸಂಘ ಏರ್ಪಡಿಸಿದ್ದ 11ನೇ ರಾಷ್ಟ್ರೀಯ ಕೈಮಗ್ಗ ದಿನಾಚರಣೆ –2025 ಸಮಾರಂಭ ಉದ್ಘಾಟಿಸಿ ಮಾತನಾಡಿ, ರಾಷ್ಟ್ರೀಯ ಹಬ್ಬಗಳಲ್ಲಿ ಕೈಮಗ್ಗ ಉತ್ಪನ್ನಗಳಿಗೆ ಬೆಲೆ ಬರುವ ರೀತಿಯಲ್ಲಿ ವಸ್ತು ಪ್ರದರ್ಶನ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಸ್ವಾಭಿಮಾನದ ಸಂಕೇತವಾಗಿರುವ ಕೈಮಗ್ಗ ದಿನಾಚರಣೆಗೆ ಅರ್ಥಪೂರ್ಣ ಬರಲು ಉತ್ಪಾದನೆ ಮತ್ತು ಮಾರಾಟಕ್ಕೆ ಪ್ರೋತ್ಸಾಹ ನೀಡಲು ಕೆಕೆಆರ್‌ಡಿಬಿ ಸನ್ನದ್ಧವಾಗಿದೆ. ದೇಶದಲ್ಲಿ ಅಂದಾಜು ಐವತ್ತು ಲಕ್ಷ ಹಾಗೂ ರಾಜ್ಯದಲ್ಲಿ ಮೂರು ಲಕ್ಷಕ್ಕೂ ಅಧಿಕ ನೇಕಾರ ಕುಟುಂಬಗಳು ವಾಸಿಸುತ್ತಿದ್ದು, ಅವರಿಗೆ ಆರ್ಥಿಕ ಬಲ ತುಂಬಲು ರಾಜ್ಯ ಸರ್ಕಾರದ ಸೌಲಭ್ಯಗಳು ನೀಡಲಾಗುವುದು. ನೇಕಾರಿಕೆಯಲ್ಲಿ ದೇಶದ ಪರಂಪರೆ ಅಡಗಿದೆ. ಇಲಕಲ್ ಸೀರೆ, ಮೈಸೂರು ರೇಶ್ಮೆ ಸೇರಿದಂತೆ ಉಳಿದಂತೆ ಎಲ್ಲಾ ಕೈಮಗ್ಗ ಉತ್ಪನ್ನಗಳು ದೇಶದ ಹೆಮ್ಮೆಯಾಗಿವೆ ಎಂದ ಅವರು, ವರ್ಷದಲ್ಲಿ ಒಮ್ಮೆಯಾದರೂ ಕೈಮಗ್ಗದಿಂದ ಕೂಡಿದ ವಸ್ತ್ರಗಳು ಧರಿಸುವ ಮೂಲಕ ಸ್ವದೇಶಿ ಉತ್ಪನ್ನಗಳನ್ನು ಉಳಿಸಿ ಬೆಳೆಸುವಲ್ಲಿ ಸಹಾಯಕರಾಗಿ ಎಂದು ಆಶಾಭಾವನೆ ವ್ಯಕ್ತಪಡಿಸಿದರು. ನೇಕಾರರ ಮಕ್ಕಳ ವಿದ್ಯಾಭ್ಯಾಸಕ್ಕೆ ಅಭಿವೃದ್ಧಿ ನಿಗಮಗಳು ಸಾಕಾರಗೊಂಡಿವೆ. ಐವತ್ತು ಕೋಟಿ ರೂಪಾಯಿಗಳು ಹಿಂದುಳಿದ ವರ್ಗಗಳ ನಿಗಮಗಳಿಗೆ ಅನುದಾನ ಕೊಟ್ಟರೆ ನೇಕಾರರು ಸೇರಿದಂತೆ ಹಿಂದುಳಿದ ವರ್ಗದವರಿಗೆ ಸಾಕಷ್ಟು ಅನುಕೂಲವಾಗಲಿದೆ. ಆದರೆ, ದುರಂತವೆಂದರೆ ಮೂಲ ನೇಕಾರರು ಶೇ.10 ರಷ್ಟು ಸದುಪಯೋಗವನ್ನು ತೆಗೆದುಕೊಳ್ಳುತ್ತಿಲ್ಲ ಎಂದ ಅವರು, ಟೆಕ್ಸ್‌ಟೈಲ್ ಪಾರ್ಕ ನಿರ್ಮಾಣದಿಂದ ಮೂಲ ನೇಕಾರರಿಗೆ ಲಾಭವಾದಾಗ ಅದಕ್ಕೊಂದು ಸಾರ್ಥಕತೆ ಒದಗಿ ಬರುತ್ತದೆ. ಇಲ್ಲದಿದ್ದರೆ ಮತ್ತೊಬ್ಬರ ಕೈಕೆಳಗೆ ದುಡಿಯುವವರಾಗುತ್ತೇವೆ ಎಂದು ನೇಕಾರರ ಬಗೆಗಿನ ಕಳಕಳಿ ವ್ಯಕ್ತಪಡಿಸಿದರು. ಹಿರಿಯ ಸಾಹಿತಿ ಶ್ರೀನಿವಾಸ ಸಿರನೂರಕರ್ ಉಪನ್ಯಾಸ ನೀಡಿ, ಐದು ಸಾವಿರ ವರ್ಷಗಳಿಂದ ನೇಕಾರಿಕೆ ವೃತ್ತಿ ನಡೆದುಕೊಂಡು ಬಂದಿದೆ. ಯಾವುದಾದರೂ ಜೀವಂತಿಕೆ ವೃತ್ತಿಯಿದ್ದರೆ, ಅದು ನೇಕಾರಿಕೆ ವೃತ್ತಿ ಎಂದು ಹೇಳಬಹುದಾಗಿದೆ. ಸ್ವದೇಶಿ ಚಳವಳಿ ಹಿನ್ನೆಲೆಯಾಗಿಟ್ಟುಕೊಂಡು ಆಗಸ್ಟ 7 ರಂದೆ ರಾಷ್ಟ್ರೀಯ ಕೈಮಗ್ಗ ದಿನಾಚರಣೆಗೆ ಅರ್ಥ ಕಲ್ಪಿಸಲಾಗಿದೆ. ಜವಳಿ ಕ್ಷೇತ್ರದಲ್ಲಿ ಜಾಗೃತಿ ವಹಿಸಬೇಕಾಗಿದೆ ಎಂದರು. ದೊಡ್ಡಬಳ್ಳಾಪುರ ತೊಗಟವೀರ ಕ್ಷತ್ರೀಯ ಸಮಾಜ ತಪಸಿಹಳ್ಳಿ ಪೀಠಾಧಿಪತಿ ದಿವ್ಯ ಜ್ಞಾನಾನಂದಗಿರಿ ಸ್ವಾಮೀಜಿ ಆಶೀರ್ವಚನ ನೀಡಿದರು. ಶಾಸಕ ಅಲ್ಲಮಪ್ರಭು ಪಾಟೀಲ, ಕಾಸಿಯಾ ಕಲಬುರಗಿ ಘಟಕದ ಅಧ್ಯಕ್ಷ ಭೀಮಾಶಂಕರ ಪಾಟೀಲ, ರಾಷ್ಟ್ರೀಯ ಹಿಂದುಳಿದ ಜಾತಿ ಒಕ್ಕೂಟದ ಅಧ್ಯಕ್ಷ ಮಹಾಂತೇಶ ಕೌಲಗಿ ಮಾತನಾಡಿದರು.



ಉದಯವಾಹಿನಿ ಚಿತ್ರ

**ನೇಕಾರಿಕೆ ದೇಶದ ಪರಂಪರೆ**

> ನೇಯ್ಗೆ ನೈಪುಣ್ಯತೆಗೆ ತನ್ನದೇ ಆದ ಇತಿಹಾಸವಿದೆ. ಹಸನಗಂಗು ಬಹಮನಿ ಕಾಲದಲ್ಲಿ ನೇಯ್ಗೆ ಕಲೆಯ ಪ್ರದರ್ಶನಗಳು ಮಾಡುವುದರ ಮೂಲಕ ಪ್ರೋತ್ಸಾಹಿಸಲಾಗುತ್ತಿತ್ತು. ಹಿಂದುಳಿದ ವರ್ಗಗಳ ಜನಾಂಗದವರಿಗೆ ಸರ್ಕಾರ ಅನೇಕ ಯೋಜನೆಗಳು ತಂದಿದ್ದರೂ ಅದರ ಸದುಪಯೋಗವನ್ನು ನೇಕಾರರು ಮಾಡಿಕೊಳ್ಳದಿರುವುದು ಬೇಸರ ತರಿಸಿದೆ. **-ರಮೇಶ ಸಂಗಾ**

> ಟೆಕ್ಸ್‌ಟೈಲ್ ಪಾರ್ಕ ನಿರ್ಮಾಣ ಮಾಡುವಲ್ಲಿ ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತಿದೆ. ಏಷಿಯಾದಲ್ಲಿಯೇ ಟರ್ಕಿಯು ಅತಿ ದೊಡ್ಡ ಟೆಕ್ಸ್‌ಟೈಲ್ ಪಾರ್ಕ ಎಂದು ಹೆಗ್ಗಳಿಕೆ ಪಡೆದಿದೆ. ದೇಶದ ಏಳು ಟೆಕ್ಸ್‌ಟೈಲ್ ಪಾರ್ಕನಲ್ಲಿ ಕಲಬುರಗಿಯು ಒಂದಾಗಿದೆ. ಈಗಾಗಲೇ ವಾರಂಗಲ್ ನಲ್ಲಿ ಟೆಕ್ಸ್‌ಟೈಲ್ ಪಾರ್ಕ ಅಭಿವೃದ್ಧಿ ಕಾರ್ಯ ತೀವ್ರಗತಿಯಲ್ಲಿ ನಡೆದಿದೆ. ಉತ್ತರ ಭಾರತದಲ್ಲಿ ತಂತ್ರಜ್ಞಾನಗಳನ್ನು ಬಳಸಿಕೊಂಡು ನೇಕಾರರು ವೃದ್ಧಿಯಾಗಿದ್ದಾರೆ. ನೇಕಾರರ ದುಸ್ಥಿತಿ ರಾಜ್ಯದಲ್ಲಿ ಹೇಳತೀರದಾಗಿದೆ. **-ಉಮಾಕಾಂತ ನಿಗ್ಗುಡಗಿ, ಕೆಕೆಸಿಸಿಐ ಮಾಜಿ ಅಧ್ಯಕ್ಷ**

## ಕೊಪ್ಪಳ ಯುವಕನ ಬರ್ಬರ ಹತ್ಯೆಯನ್ನು ಖಂಡಿಸಿ ಪ್ರತಿಭಟನೆ

• **ಉದಯವಾಹಿನಿ ಸಿಂಧನೂರು**

ಕೊಪ್ಪಳ ಜಿಲ್ಲೆಯಲ್ಲಿ ಕಳೆದ ವಾರ ನಡೆದ ಯುವಕನ ಬರ್ಬರ ಹತ್ಯೆ ವಿರುದ್ಧವಾಗಿ, ಸಾಲಿಡಾರಿಟಿ ಯೂತ್ ಮೂವ್ಮೆಂಟ್ ಸಿಂಧನೂರು ಶಾಖೆ ವತಿಯಿಂದ ತೀವ್ರ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಬಸವರಾಜ್ ಬಾದರ್ಲಿ ಅವರು ಇತ್ತೀಚಿನ ದಿನಗಳಲ್ಲಿ ಎಲ್ಲಾ ತಿಂಗಳ ಹೆಚ್ಚಾಗಿ ಯುವಕರು ದಾರಿ ತಪ್ಪುತ್ತಿದ್ದಾರೆ ಕೆಲ ತಿಂಗಳ ಹಿಂದೆ ಲಿಂಗಸೂರಿನ ಯುವಕ ಸಿಂಧೂರಿನಲ್ಲಿ ಇದೇ ರೀತಿ ಕೃತ್ಯ ಎಸಿಗಿದ್ದ, ಈಗ ಕೊಪ್ಪಳದಲ್ಲಿ ಇಂಥ ಘಟನೆ ನಡೆದಿದೆ, ಇದರ ಬಗ್ಗೆ ಪಾಲಕರು ಸಹ ಆಲೋಚನೆ ಮಾಡಬೇಕಾಗಿದೆ,

ಇದೇ ಸಂದರ್ಭದಲ್ಲಿ ಮಾತನಾಡಿದ ಜಮಾತ್ ಇಸ್ಲಾಮಿನ ಸಿಂಧನೂರು ಘಟಕ ಅಧ್ಯಕ್ಷರಾದ ಮೊಹಮ್ಮದ್ ಹುಸೇನ್ ರವರು ಇದು ತ್ರಿಕೋನ ಪ್ರೀತಿಯ ಘಟನೆಯಾಗಿದ್ದು, ಇಂತಹ ಪರಿಸ್ಥಿತಿಯಲ್ಲಿ ಅಲ್ಲಿನ ಪ್ರಗತಿಪರ ಸಂಘಟನೆ ಮುಖಂಡರು ವಾತಾವರಣವನ್ನು ತಿಳಿಗೊಳಿಸಲು ಸೂಕ್ಷ್ಮವಾಗಿ ಕಾರ್ಯ ನಿರ್ವಹಿಸಿದರು, ಮತಯುಗನ ಕುಟುಂಬಕ್ಕೆ ಆದ ದುಃಖವನ್ನು ಯಾರಿಂದಲೂ ಬರಿಸಲು ಸಾಧ್ಯವಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸಿದರು ಪ್ರತಿಭಟನೆಯಲ್ಲಿ ತಹಶೀಲ್ದಾರ್ ಅವರಿಗೆ ಮನವಿ ಪತ್ರ ನೀಡಲಾಯಿತು.

ಮನವಿಯಲ್ಲಿ ಹತ್ಯೆಗೆ ಸಂಬಂಧಿಸಿದ ಆರೋಪಿಗಳಿಗೆ ತ್ವರಿತವಾಗಿ ಕಾನೂನು ಕ್ರಮ ಕೈಗೊಳ್ಳಬೇಕು, ಜನರಲ್ಲಿ ಭೀತಿಯ ವಾತಾವರಣ ನಿರ್ಮಾಣವಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಗಿದೆ.

ಮುಸ್ಲಿಂ ಸಮಾಜದ ಮುಖಂಡರಾದ ಜನ ಬಾಬರ್ ಬಾಷಾ ಸಾಹೇಬ್, ಜಿಲಾನಿ ಪಾಷಾ, ಜಾಫರ್ ಅಲ್ಲಿ ಜಾಗೀರ್ದಾರ್, ನದೀಮುಲ್ಲಾ, ಜಾವದ್ ಖಾಜಿ, ಮೆಹಬೂಬ್ ಖಾನ್, ಡಾಕ್ಟರ್ ವಸಿಂ, ಸಾಲಿಡಾರಿಟಿ ಯೂತ್ ಮೂವ್ಮೆಂಟ್ ತಾಲ್ಲೂಕು ಅಧ್ಯಕ್ಷ ಅಬುಲೈಸ್ ನಾಯಕ್, ಇಸ್ಮೈಲ್ ಗಡಗಿ, ಎಸ್ಐಒ ಇಮ್ತಿಯಾಜ್ ಇದ್ದರು.





ಉದಯವಾಹಿನಿ ಚಿತ್ರ

**ಪ್ರಮುಖ ಒತ್ತಾಯಗಳು**

- ಆರೋಪಿಗಳನ್ನು ಉಗ್ರ ಶಿಕ್ಷೆ ಕೊಡಿಸಬೇಕು
- ಕುಟುಂಬಕ್ಕೆ ನ್ಯಾಯ ಸಿಗುವಂತೆ ಕ್ರಮ ತೆಗೆದುಕೊಳ್ಳಬೇಕು.
- ಶಾಲಾ-ಕಾಲೇಜುಗಳಲ್ಲಿ ಶಾಂತಿಯುತ ವಾತಾವರಣ ಕಾಪಾಡಲು ಸರ್ಕಾರ ಕ್ರಮವಹಿಸಬೇಕು.
- ಸಾರ್ವಜನಿಕ ಸ್ಥಳಗಳಲ್ಲಿ ಪೊಲೀಸ್ ವೀಕ್ಷಣೆ ಹೆಚ್ಚಿಸಬೇಕು.

## ಚಿನ್ನ ಖರೀದಿ ಅವಸರ ಮಗುವನ್ನೇ ಮರೆತ ತಾಯಿ

• **ಉದಯವಾಹಿನಿ ಹಾಸನ**

ಚಿನ್ನಾಭರಣ ಖರೀದಿಸುವ ಭರದಲ್ಲಿ ಉಷಾ ಎಂಬುವವರು ಅಂಗಡಿಯಲ್ಲೇ ಬಿಟ್ಟು ಹೋಗಿದ್ದ ಮಗುವನ್ನು ಸಿದ್ದಯ್ಯ ನಗರದ ಭವಾನಿ ಎಂಬುವವರು ರಕ್ಷಿಸಿ ಪೊಲೀಸ್ ಠಾಣೆಯಲ್ಲಿ ಮತ್ತೆ ಹಸ್ತಾಂತರಿಸಿದರು. ನಗರದ ಗಾಂಧಿ ಬಜಾರ್ನ ಮಳಿಗೆಗೆ ಬಂದಿದ್ದ ಉಷಾ, ಎರಡೂವರೆ ವರ್ಷದ ಮಗಳು ಸುಪ್ರಿಯಾಳನ್ನು ತಮ್ಮೊಂದಿಗೆ ಕರೆದೊಯ್ಯುವುದನ್ನು ಮರೆತು ನಿರ್ಗಮಿಸಿದ್ದರು. ಮಗುವು ಅಳುತ್ತಿರುವುದನ್ನು ಕಂಡ ಭವಾನಿ ಸಂತೈಸಿದರು. ಪೋಷಕರು ಪತ್ತೆಯಾಗದ್ದರಿಂದ ತಮ್ಮೊಂದಿಗೆ ಕರೆದೊಯ್ದಿದ್ದರು. ಮಗುವನ್ನು ಮಳಿಗೆಯಲ್ಲಿ ಮರೆತು ಬಂದಿರುವ ಸಂಗತಿಯನ್ನು ಮುಚ್ಚಿಟ್ಟ ತಾಯಿಯು, ಮಗು ಕಳುವಾಗಿದೆ ಎಂದು ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪೊಲೀಸರು ಹುಡುಕಾಡಿದಾಗ, ಮಗುವನ್ನು ಭವಾನಿ ಅವರು ಕರೆದೊಯ್ದಿರುವುದು ಸಿಸಿಟಿವಿ ದೃಶ್ಯಾವಳಿಯಿಂದ ಗೊತ್ತಾಗಿತ್ತು. ಆಕೆಯೇ ಮಗುವನ್ನು ಅಪಹರಿಸಿದ್ದಾರೆಂದು ಭಾವಿಸಲಾಗಿತ್ತು. ಆದರೆ, ಅವರು ಮಗುವಿಗೆ ಊಟ ಮಾಡಿಸಿ, ನಂತರ ಪೊಲೀಸರಿಗೆ ಒಪ್ಪಿಸಲು ಠಾಣೆಗೆ ಬಂದರು. ಆಗ ಮಗು ಅಪಹರಣವಾಗಿಲ್ಲ, ಬದಲಿಗೆ ತಾಯಿಯೇ ಮರೆತು ಬಂದಿದ್ದಾರೆ' ಎಂಬುದು ದೃಢವಾಯಿತು.

## ರಸ್ತೆ ದುರಸ್ತಿಗೊಳಿಸುವಂತೆ ಆಗ್ರಹ

• **ಉದಯವಾಹಿನಿ ಸೇಡಂ**

ತಾಲ್ಲೂಕಿನ ಮಳಖೇಡ ಗ್ರಾಮದಿಂದ ನೃಪತುಂಗಾ ನಗರದವರೆಗಿನ ರಸ್ತೆಯು ಸಂಪೂರ್ಣವಾಗಿ ಹಾಳಾಗಿದ್ದು ಅಪಘಾತಗಳಿಗೆ ದಾರಿಮಾಡಿಕೊಡುವಂತಾಗಿದೆ, ಆದಷ್ಟು ಬೇಗ ರಸ್ತೆ ದುರಸ್ತಿಗೊಳಿಸುವ ಮೂಲಕ ಜನರ ಸಮಸ್ಯೆಗೆ ಪರಿಹಾರ ಒದಗಿಸುವ ಕೆಲಸ ತಕ್ಷಣ ವಾಗಲಿ ಎಂದು ಶಿವರಾಜ ವಿಶ್ವಕರ್ಮ ಅವರು ಪತ್ರಿಕಾ ಪ್ರಕಟಣೆ ಮೂಲಕ ಆಗ್ರಹಿಸಿದ್ದಾರೆ.

## ಅಂಗನವಾಡಿ ಕಟ್ಟಡಗಳ ದುರಸ್ತಿಗೆ ಮನವಿ

• **ಉದಯವಾಹಿನಿ ಮರಿಯಮ್ಮನಹಳ್ಳಿ**

ಪಟ್ಟಣದ ವಿವಿಧ ಅಂಗನವಾಡಿಗಳ ದುರಸ್ತಿಗೆ ಒತ್ತಾಯಿಸಿ, ಕರ್ನಾಟಕ ರಕ್ಷಣಾ ವೇದಿಕೆ(ನಾ.ಗೌ) ಹೊಸಪೇಟೆ ತಾ. ಘಟಕವು ಶಿಶು ಅಭಿವೃದ್ಧಿ ಇಲಾಖೆಯ ಯೋಜನಾಭಿವೃದ್ಧಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಮರಿಯಮ್ಮನಹಳ್ಳಿಯ 1, 3 ಹಾಗೂ 4ನೇ ಅಂಗನವಾಡಿ ಕೇಂದ್ರಗಳು ಶಿಥಿಲಾವಸ್ಥೆಯಲ್ಲಿದ್ದು, ಇದರಿಂದ ಕೇಂದ್ರದ ಮಕ್ಕಳಿಗೆ ಜೀವಭಯ ಕಾಡುತ್ತಿದೆ. ಕೂಡಲೇ ಶಿಶು ಅಭಿವೃದ್ಧಿ ಇಲಾಖೆಯು ತಾಲ್ಲೂಕಿನಾದ್ಯಂತ ಶಿಥಿಲಾವಸ್ಥೆಗೊಳಗಾದ ಕೇಂದ್ರಗಳನ್ನು ದುರಸ್ತಿಗೊಳಿಸಬೇಕು. ಇಲ್ಲವಾದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಮನವಿಯಲ್ಲಿ ಸಒತ್ತಾಯಿಸಿದರು.

## ನಾಯಿ ಕಡಿತ: ಬ್ರಿಮ್ಸ್‌ಗೆ ಡಿಸಿ ಭೇಟಿ

• **ಉದಯವಾಹಿನಿ ಬೀದರ**

ಚಿಟಗುಪ್ಪಾ ತಾಲ್ಲೂಕಿನ ಮುನ್ನಾಏಖೇಳ್ಳಿ ಗ್ರಾಮದಲ್ಲಿ ಮೂವರು ನಿನ್ನೆ ನಾಯಿ ಕಡಿತದಿಂದ ಗಂಭೀರವಾಗಿ ಗಾಯಗೊಂಡು ಬ್ರಿಮ್ಸ್‌ನಲ್ಲಿ ದಾಖಲಾದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು.

ರೇಬಿಸ್‌ಗೆ ನೀಡಲಾಗುವ ರೇಬೋಪೋರ ಹಾಗೂ ಇಮ್ಯುನೋಗ್ಲೊಬಿನ್ ಇಂಜೆಕ್ಷನ್‌ಗಳು ಕೊರತೆಯಾಗದಂತೆ ಕನಿಷ್ಠ 100 ವೈಲ್ಸ್‌ಗಳನ್ನು ಇಡುವಂತೆ ಜಿಲ್ಲಾಧಿಕಾರಿಗಳು ಬ್ರಿಮ್ಸ್ ವೈದ್ಯಾಧಿಕಾರಿಗಳಿಗೆ ಸೂಚನೆ ನೀಡಿದರು. ತುರ್ತು ಪರಿಸ್ಥಿತಿಯಲ್ಲಿ ಎಲ್ಲಾ ಅಗತ್ಯ ಔಷಧಿಗಳು ಲಭ್ಯವಾಗಬೇಕು. ಔಷಧಿಗಳನ್ನು ಹೊರಗಡೆ ತರುವಂತೆ ಸೂಚಿಸಬಾರದೆಂದು ತಿಳಿಸಿದರು. ಚರಣ ರೆಡ್ಡಿ ಬಾಲಕ ಗಂಭೀರ ಗಾಯಗೊಂಡ ಹಿನ್ನೆಲೆಯಲ್ಲಿ ತುರ್ತು ಚಿಕಿತ್ಸೆ ನೀಡಲಾಗಿದ್ದು, ದಾಖಲಿಸಿಕೊಳ್ಳಲಾಗಿದೆ. ಶಮಿತಾ ಹಾಗೂ ಈಶ್ವರಿ ಬಾಲಕಿಯರು ಚಿಕಿತ್ಸೆ ಪಡೆದು ತೆರಳಿದ್ದಾರೆ ಎಂದು ಬ್ರಿಮ್ಸ್ ನಿರ್ದೇಶಕರಾದ ಡಾ.ಶೇಟಕರ ತಿಳಿಸಿದ್ದಾರೆ.

## ರೈತನಿಗೆ ಜೀವ ಬೆದರಿಕೆ: ಆರೋಪ

• **ಉದಯವಾಹಿನಿ ಔರಾದ**

ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕ ಕಾರ್ಯಾಲಯದಲ್ಲಿನ ತಾಂತ್ರೀಕ ಅಧಿಕಾರಿಗಳು ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ಮಾಡಿ ನನ್ನಗೆ ಜೀವ ಬೇದರಿಕೆ ಹಾಕಿದ್ದಾರೆ ಎಂದು ರೈತ ಮಲ್ಲಿಕಾರ್ಜುನ ಬಾಬುರಾವ ಅವರು ಆರೋಪಿಸಿದ್ದಾರೆ.


ಈ ಕುರಿತು ಸಹಾಯಕ ಕೃಷಿ ನಿರ್ದೇಶಕರಿಗೆ ದೂರು ಸಲ್ಲಿಸಿದ್ದಾರೆ, ಆಗಸ್ಟ 05 ರಂದು ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಕೃಷಿ ಯಂತ್ರದ ವರ್ಕ ಆರ್ಡವನ್ನು ಪಡೆದುಕೊಳ್ಳಲು ತಾಂತ್ರಿಕ ಅಧಿಕಾರಿಗಳ ಹತ್ತಿರ ಹೋದಾಗ, ಸದರಿ ದಾಖಲಾತಿಗೆ ಪೀನ್ ಪಂಚ್ ಮಾಡಲು ಕೇಳಿದರೆ ಅವಾಗ ಇವರು ನಾನು ನಿನ್ನ ನೌಕರನೋ ಇಲ್ಲವೇ ನಿನ್ನ ಅಪ್ಪನ ನೌಕರನೋ ಎಂದು ಹೇಳಿದಲ್ಲದೆ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ, ನಂತರ ನನ್ನ ಮೇಲೆಯೇ ಹಲ್ಗೆ ಯತ್ನಿಸಿರುತ್ತಾರೆ. ಈ ಎಲ್ಲಾ ಘಟನೇಯ ವಿಡಿಯೋ ರೇಕಾರ್ಡ ಸಾಕ್ಷಾಧಾರಗಳು ನನ್ನ ಬಳಿ ಇರುತ್ತವೆ. ನನ್ನ ಜೀವಕ್ಕೆ ಏನಾದರು ಆದರೆ ಅದಕ್ಕೆ ಸಹಾಯಕ ಕೃಷಿ ನಿರ್ದೇಶಕ ಕಛೇರಿಯ ತಾಂತ್ರೀಕ ಅಧಿಕಾರಿ ಕೃಷ್ಣ ಅವರೆ ನೇರ ಹೊಣೆಗಾರರಾಗಿರುತ್ತಾರೆ. ಇದರಿಂದ ನನಗೆ ಮುಜುಗರವಾಗಿ ದಲ್ಲದೆ ನನ್ನ ಮಾನವನ್ನು ಹರಾಜು ಮಾಡಿರುತ್ತಾರೆ. ಕೂಡಲೇ ಮೇಲಾಧಿಕಾರಿಗಳು ತಾಂತ್ರಿಕ ಅಧಿಕಾರಿ ಕೃಷ್ಣ ಅವರ ಮೇಲೆ ಸೂಕ್ತ ಕಾನೂನು ಕ್ರಮವನ್ನು ಜರುಗಿಸಬೇಕು ಮತ್ತು ಅವರನ್ನು ಸೇವೆಯಿಂದ ವಜಾಗೋಳಿಸಬೇಕು ಇಲ್ಲವಾದಲ್ಲಿ ಮುಂಬರುವ ದಿನಗಳಲ್ಲಿ ರೈತ ಮೋರ್ಚಾದಿಂದ ತಮ್ಮ ಕಛೇರಿಗೆ ಮುತ್ತಿಗೆ ಹಾಕಿ ಹೋರಾಟ ನಡೆಸಲಾಗುವುದು ಎಂದು ರೈತ ಮಲ್ಲಿಕಾರ್ಜುನ ಬಾಬುರಾವ ನಾರಾಯಣಪೂರ ಇವರು ತಿಳಿಸಿದ್ದಾರೆ.

## ಮಾಜಿ ಸಚಿವರ ಕಾಮಗಾರಿಯ ಮುಗಿಯದ ಕಥೆ

• **ಉದಯವಾಹಿನಿ ಸಿಂಧನೂರು**

ಚಿರತನಾಳ ಮತ್ತು ಬೊಮ್ಮನಾಳ ಮಧ್ಯದಲ್ಲಿರುವ ಸೇತುವೆ ಮಾಜಿ ಸಚಿವರಾದ ವೆಂಕಟರಾವ್ ನಾಡಗೌಡ ಅವರ ಅವಧಿಯಲ್ಲಿ ಮಂಜುರಾಗಿದ್ದ ಸೇತುವೆ ಅಪೂರ್ಣಗೊಡಿರುವುದು ಕಾಂಗ್ರೆಸ್ ಪಕ್ಷದ ದುರಂತದ ವಿಷಯವಾಗಿದ್ದು, ತಾತ್ಕಾಲಿಕವಾಗಿ ನಿರ್ಮಿಸಿರುವ ಸೇತುವೆ ನೆನ್ನೆ ರಾತ್ರಿ ಅಕಾಲಿಕ ಮಳೆಯಿಂದ ಕೊಚ್ಚಿ ಹೋಗಿ ಜನರಿಗೆ ಓಡಾಡುವುದಕ್ಕೆ ಇದರಿಂದ ತೀವ್ರ ತೊಂದರೆ ಅನುಭವಿಸುವಂತಾಗಿದೆ ಎಂದು ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಬಸವರಾಜ ನಾಡಗೌಡ ಹೇಳಿದರು.

ಈ ವಿಷಯ ತಿಳಿದ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಕೂಡಲೇ ಸಂಭಂದಿಸಿದ ಅಧಿಕಾರಿಗಳ ವರ್ಗಕ್ಕೆ ದೂರವಾಣಿ ಮೂಲಕ ಸಂಪರ್ಕ ಮಾಡಿ ಇಲ್ಲಿ ಸೇತುವೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ನಿರ್ದೇಶಿಸನ ನೀಡಿದರು. ಈಗ ಕಾಂಗ್ರೆಸ್ ಪಕ್ಷದ ಶಾಸಕರುಗಳು ಅಧಿಕಾರಕ್ಕೆ ಬಂದ ಎರಡೂವರೆ ವರ್ಷಗಳು ಕಳೆದರೂ ಸಹ ಮಾಜಿ ಸಚಿವ ಕಾಮಗಾರಿಗಳನ್ನು ಮುಗಿಸದೆ ಕಾಲಹರಣ ಮಾಡುತ್ತಿದ್ದಾರೆ. ಎಂದರೆ ಅಭಿವೃದ್ಧಿ ಮತ್ತು ಹೊಸ ಕಾಮಗಾರಿಗಳು ವಿಚಾರದಲ್ಲಿ ಇವರುಗಳು ಕೆಲಸ ಜೀರೋ ಯಾಗದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು. ಮುದುಕಪ್ಪ ಬಸವರಾಜ. ಅಮರೇಶ. ಗೋನಪ್ಪ ಸಾಸೀ ಸಾಬ್ ಶರಣಪ್ಪ ಗೌಡ ನಾಗರಾಜ್ ವೀರನಗೌಡ ನಿಂಗಪ್ಪ ಪೂಜಾರಿ ಬೀರಲಿಂಗೇಶ್ ಹೊಸಗೇರಪ್ಪ, ಚಿರತನಾಳ ಹಾಗೂ ಬೊಮ್ಮನಾಳ ಗ್ರಾಮದ ಜನರು ಸೇರಿದಂತೆ ಇತರರಿದ್ದರು.



ಉದಯವಾಹಿನಿ ಚಿತ್ರ

## ಒಂದೇ ಕೋಣೆಯಲ್ಲಿ 1 ರಿಂದ 8 ತರಗತಿಯ 75 ಶಾಲಾಮಕ್ಕಳು ವಿದ್ಯಾಭ್ಯಾಸ

• **ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಿನ ಐನೋಳ್ಳಿ ಗ್ರಾಮದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯು 1ನೇ ತರಗತಿಯಿಂದ 8 ತರಗತಿವರೆಗೆ ಇದ್ದು ಶಾಲೆಗೆ ಕೇವಲ ಎರಡು ಕೋಣೆ ಒಂದರಲ್ಲಿ ಆಫೀಸ್ ಮತ್ತೊಂದು ಕೋಣೆಯಲ್ಲಿ 75 ವಿದ್ಯಾರ್ಥಿಗಳಿಗೆ ಶಿಕ್ಷಕರು ಪಾಠ ಮಾಡುತ್ತಿರುವುದು ಕಂಡುಬಂತು.

ತಾಲ್ಲೂಕಿನ ಐನೋಳ್ಳಿ ಗ್ರಾಮದಲ್ಲಿ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಒಂದೇ ಕೋಣೆಯಲ್ಲಿ 75 ವಿದ್ಯಾರ್ಥಿಗಳು ಶಾಲೆ ಕಲಿಯುತ್ತಿದ್ದಾರೆ ಒಂದನೇ ತರಗತಿಯಿಂದ ಎಂಟನೇ ತರಗತಿವರೆಗೆ ಶಾಲಾಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆ ಆಗುತ್ತಿದೆ ಉರ್ದು ಶಾಲೆಗೆ ಎರಡು ನೂತನ ಕಟ್ಟಡದ ಕೋಣೆಗಳು ಅವಶ್ಯಕವಿದ್ದು ಶೀಘ್ರದಲ್ಲೇ ಎರಡು ಕೋಣೆಗಳ ನೂತನ ಕಟ್ಟಡ ನಿರ್ಮಿಸಿಕೊಡುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೂ ಮತ್ತು ಶಾಸಕರಿಗೂ ಮೌಖಿಕವಾಗಿ ಮತ್ತು ಲಿಖಿತವಾಗಿ ಮನವಿಪತ್ರ ಸಲ್ಲಿಸಿದ್ದೇವೆ ಆದರೆ ಇಲ್ಲಿಯವರೆಗೆ ಯಾವುದೇ ಕ್ರಮಕೈಗೊಳ್ಳದೆ ಇರುವುದರಿಂದ ಶಾಲಾಮಕ್ಕಳಿಗೆ ಶಿಕ್ಷಣ ಪಡೆದುಕೊಳ್ಳುವಲ್ಲಿ ಬಹಳಷ್ಟು ತೊಂದರೆ ಆಗುತ್ತಿದೆ ಎಂದು ಗ್ರಾಮಸ್ಥ ಆಯಾಜಪಾಷ ಮತ್ತು ರಷೀದ್ ಅನ್ಸಾರಿ ಆರೋಪಿಸಿದ್ದಾರೆ.

ಉರ್ದು ಶಾಲೆಯ ಎರಡು ಕೋಣೆಗಳು ಶಿಥಿಲಗೊಂಡಿವೆ ಶಿಥಿಲಗೊಂಡ ಕೋಣೆಗಳು ನೆಲಸಮಗೊಳಿಸಿ ಅದೆ ಸ್ಥಳದಲ್ಲಿ ಎರಡು ನೂತನ ಕಟ್ಟಡಗಳು ನಿರ್ಮಿಸಿ ಕೊಡುವಂತೆ ಉರ್ದು ಶಾಲೆಯ ಮುಖ್ಯಗುರುಗಳು ಶಿಕ್ಷಣಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ ಹಾಗೂ ಮೌಖಿಕವಾಗಿ ಲಿಖಿತವಾಗಿ ಬಿಆರ್‌ಸಿ,ಪಿಡಬ್ಲೂಡಿ ಇಲಾಖೆಗೂ ಕೂಡ ಪತ್ರ ಬರೆಯಲಾಗಿದೆ ಆದರೆ ಇಲ್ಲಿಯವರೆಗೆ ಉರ್ದು ಶಾಲೆಯ ಶಾಲಾಮಕ್ಕಳ ಸಮಸ್ಯೆ ಬಗೆಹರಿಲ್ಲವೆಂದು ಗ್ರಾಮಸ್ಥರು ಆರೋಪಿಸಿದರು.



ಉದಯವಾಹಿನಿ ಚಿತ್ರ

> ಶೀಘ್ರದಲ್ಲೇ ಉರ್ದು ಶಾಲೆಯ ನೂತನ ಎರಡು ಕೋಣೆ ನಿರ್ಮಿಸಿ ಶಾಲಾಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಪಡೆದುಕೊಳ್ಳಲು ಅನುಕೂಲ ಕಲ್ಪಿಸಿಕೊಡಬೇಕು ಎಂದು ಶಾಸಕರಿಗೆ ಮನವಿ ಮಾಡುತ್ತೇವೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. **-ಗ್ರಾಮಸ್ಥರು**

## ವಚನ ಕಟ್ಟುಗಳನ್ನು ಹೊತ್ತರೆ ಸಾಲದು: ಪುಷ್ಪಾ ರವಿಗೌಡ

• **ಉದಯವಾಹಿನಿ ಬಸವನಬಾಗೇವಾಡಿ**

ವಚನ ಕಟ್ಟುಗಳನ್ನು ತಲೆ ಮೇಲೆ ಹೊತ್ತರೆ ಸಾಲದು, ವಚನದ ಸಾರಾಂಶವನ್ನು ತಲೆ ಒಳಗೆ ಇಳಿಸಿಕೊಳ್ಳಬೇಕು, ಆಗ ನಮ್ಮೊಳಗೆ ಅರಿವಿನ ಜ್ಯೋತಿ ಹೊತ್ತಲು ಸಾಧ್ಯ ಎಂದು ಇಲ್ಲಿನ ಶಿಕ್ಷಕಿ ಪುಷ್ಪಾ ರವಿಗೌಡ ಚಿಕ್ಕೊಂಡ ಅನುಭಾವಗೈದರು. ಬಸವ ಸಂಸ್ಕೃತಿ ಅಭಿಯಾನದ ರಥಯಾತ್ರೆ ಹಿನ್ನೆಲೆಯಲ್ಲಿ ಹಮ್ಮಿಕೊಂಡ ಪಾದಯಾತ್ರೆ ಹಾಗೂ ಜಾಗೃತಿ ಪೂರ್ವಭಾವಿ ಸಭೆಯಲ್ಲಿ ಅನುಭಾವ ಗೈಯುತ್ತಾ ಮಾತನಾಡಿದರು.

ದಿನಕ್ಕೊಂದು ವಚನವನ್ನು ಬಿಡಿಸಿ, ಕಾಯಕ ಹಾಗೂ ದಾಸೋಹದ ಪರಿಕಲ್ಪನೆಯ ಮೂಡಿಸಿ ಅರಿವಿನ ಜ್ಯೋತಿಯನ್ನು ಹೊತ್ತಿಸುತ್ತಿದ್ದಾರೆ. ಶ್ರೀಮಠದ ಶರಣವ್ರತ ಸ್ವೀಕರಿಸಿದ ನಮ್ಮ ಪತಿಯ ಬದುಕಿನಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಅಲ್ಲದೆ ಎಲ್ಲರಿಂದ ದಿನಕೊಂದು ವಚನವನ್ನು ಬಿಡಿಸುವುದರಿಂದ ಓದುವ ಸಂಸ್ಕೃತಿಯನ್ನು ಹೆಚ್ಚಿಸಿದ್ದಾರೆ ಆಧ್ಯಾತ್ಮಿಕ ಒಲವನ್ನು ಬಿತ್ತಿದ್ದಾರೆ ಈ ಕಾರಣಕ್ಕೆ ನಮ್ಮ ಕುಟುಂಬದಿಂದ ಶ್ರೀಗಳಿಗೆ ಕೃತಜ್ಞತೆಗಳನ್ನು ಹೇಳುತ್ತೇನೆ ಎಂದರು. ಸಿದ್ಧಲಿಂಗ ಸ್ವಾಮೀಜಿ ಮಾತನಾಡಿ, ಸ್ತ್ರೀಪರ ಗಟ್ಟಿ ಧ್ವನಿವೊಂದು ಸಿಕ್ಕಂತಾಯಿತು ಎಂದು ಪುಷ್ಪಾ ರವಿಗೌಡರನ್ನು ಪ್ರಶಂಶಿಸಿದರು. ವೇದಿಕೆ ಮೇಲೆ ಹಿರಿಯರಾದ ಈರಣ್ಣ ಪಟ್ಟಣಶೆಟ್ಟಿ, ಶಿವನಗೌಡ ಬಿರಾದಾರ, ಸಂಗನಗೌಡ ಚಿಕ್ಕೊಂಡ ಹಾಜರಿದ್ದರು. ಶಿಕ್ಷಕರಾದ ಎಚ್ ಬಿ ಬಾರಿಕಾಯಿ, ತಾಲ್ಲೂಕು ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರಭಾಕರ ಖೇಡದ.ಸಮಾಜ ಸೇವಕರಾದ ರವಿಗೌಡ ಚಿಕ್ಕೊಂಡ, ನಾಗರಾಜ ಹೊಸಮನಿ ಸೇರಿದಂತೆ ಅನೇಕರು ಇದ್ದರು.



ಉದಯವಾಹಿನಿ ಚಿತ್ರ

**ಜಾಗೃತಿ ಪೂರ್ವಭಾವಿ ಸಭೆ**

## ಭಾರಿ ಪ್ರಮಾಣದಲ್ಲಿ ಸುರಿದ ಮಳೆ ಕೃಷಿ ಬೆಳೆಗಳಲ್ಲಿ ಹರಿದು ಬಂದ ನೀರು

• **ಉದಯವಾಹಿನಿ, ಬಸವನಬಾಗೇವಾಡಿ**

ತಾಲ್ಲೂಕಿನಲ್ಲಿ ಭಾರಿ ಪ್ರಮಾಣದಲ್ಲಿ ಮಳೆ ಸುರಿದ ಹಿನ್ನೆಲೆಯಲ್ಲಿ ಬೊಮ್ಮನಹಳ್ಳಿ, ಯಂಬತ್ನಾಳ,ಮುಲ್ಲಾಳ, ನೇಗಿನಾಳ, ಉಕ್ಕಲಿ, ಡೋಣುರ, ಮನಗೂಳಿ, ಹಾಗೂ ಬಿಸನಾಳ ಗ್ರಾಮಗಳ ಕೃಷಿ ಭೂಮಿಗಳಲ್ಲಿ ನೀರು ಹರಿಯುತ್ತಿದ್ದು ಪ್ರಯುಕ್ತ 300 ಹೆಕ್ಟೇರ್‌ಕ್ಕಿಂತಲೂ ಹೆಚ್ಚು ಕೃಷಿ ಬೆಳೆಗಳಲ್ಲಿ ನೀರು ಹರಿಯುತ್ತಿದೆ.

ಸಾರ್ವಜನಿಕರು ನೀರಿಗೆ ಇಳಿಯದಂತೆ ಹಾಗೂ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ತಹಶೀಲ್ದಾರ ವಾಯ್. ಎಸ್ ಸೋಮನಕಟ್ಟಿ ಭೇಟಿ ನೀಡಿ ಸಾರ್ವಜನಿಕರಿಗೆ ವಿನಂತಿಸಿದ್ದಾರೆ. ಸಹಾಯಕ ಕೃಷಿ ನಿರ್ದೇಶಕ ಎಮ್ ಎಚ್ ಯರಝರಿ ಸೇರಿದಂತೆ ಕಂದಾಯ ಇಲಾಖೆಯ ಸಿಬ್ಬಂದಿಗಳು ಹಾಜರಿದ್ದರು.



ಉದಯವಾಹಿನಿ ಚಿತ್ರ

## ಸೇತುವೆಯ ಮೇಲೆ ಹರಿದ ನೀರು

• **ಉದಯವಾಹಿನಿ ತಾಳಿಕೋಟೆ**

ವಿಜಯಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಬಿದ್ದ ಭಾರಿ ಮಳೆಯಿಂದ ಹರಿದು ಬಂದ ನೀರಿನ ಒತ್ತಡದಿಂದ ತಾಳಿಕೋಟೆಗೆ ತೆರಳುವ ರಸ್ತೆಗೆ ಅಡ್ಡಲಾಗಿ ಬ್ರಿಟಿಷರ್ ಕಾಲದಲ್ಲಿ ನಿರ್ಮಿಸಲಾಗಿದ್ದ ಸೇತುವೆಯ ಮೇಲೆ ಪ್ರವಾಹ ನುಗ್ಗಿದ್ದರಿಂದ ವಿಜಯಪುರ, ಬ.ಬಾಗೇವಾಡಿ, ಮುದ್ದೇಬಿಹಾಳ ಇನ್ನಿತರ ಪಟ್ಟಣ ನಗರಗಳಿಗೆ ಓಡಾಡುತ್ತಿದ್ದ ಬಸ್‌ಗಳ ಸಂಚಾರ ಸ್ಥಗಿತಗೊಂಡಿದ್ದರಿಂದ ಪ್ರಯಾಣಿಕರಿಗೆ ಪರದಾಡುವಂತಾಯಿತು.

ಇದೇ ರಸ್ತೆ ಗುಂಟಾ ಸಂಚಾರಕ್ಕೆ ಸಿದ್ದವಾಗಿರುವ ಲಾರಿಗಳು ಹಾಗೂ ಟಿಪ್ಪರಗಳು ಹಾಗೂ ಟ್ರ್ಯಾಕ್ಟರ್, ಟೆಂಪು ಟ್ರ್ಯಾಕ್ಸ್ ಇವುಗಳ ಓಡಾಟವು ಸಹ ಸ್ಥಗಿತಗೊಂಡಿತ್ತು ಈ ಕಾರಣದಿಂದ ಮದ್ಯಾಹ್ನ 1-30 ಗಂಟೆಯ ಸುಮಾರಿಗೆ ತಾಳಿಕೋಟೆ ವ್ಹಾಯಾ ಮೂಕೀಹಾಳ ಮಾರ್ಗದ ರಸ್ತೆಗೆ ಅಡ್ಡಲಾಗಿ ಕಟ್ಟಲಾಗಿರುವ ಬೃಹತ್ ಸೇತುವೆಯ ಮೇಲೆ ಈ ಎಲ್ಲಾ ಬಸ್ಸುಗಳು ಹಾಗೂ ಲಾರಿ ಟಿಪ್ಪರಗಳು ಈ ಮಾರ್ಗಗುಂಟಾ ಹಾಯ್ದು ಸುಮಾರು 10 ಕೀಲೋ ಮೀಟರ್ ರಸ್ತೆ ಕ್ರಮಿಸುವದು ಹೆಚ್ಚಾಗಿದ್ದರೂ ಸಹ ಇದೇ ರಸ್ತೆಯ ಮೇಲೆ ಅವಲಂಬಿಸಿದ ಈ ಎಲ್ಲಾ ವಾಹನಗಳು ತೆರಳುತ್ತಿದ್ದ ಸಮಯದಲ್ಲಿ ಈ ಬೃಹತ್ ಆಕಾರದ ಸೇತುವೆಯ ಮೇಲೆ ಹಿಡಿದು ಪಟ್ಟಣದಲ್ಲಿರುವ ಬಸವೇಶ್ವರ ಸರ್ಕಲ್‌ದವರೆಗೆ ಗಂಟೆ ಕಾಲ ಟ್ರಾಫಿಕ್ ಜಾಮ್ ಆಯಿತಲ್ಲದೇ ಬಸ್ ನಿಲ್ದಾಣದಲ್ಲಿ ಆಗಮಿಸಿದ ಬಸ್ಸುಗಳು ಅದೇ ಜಾಗೆಯಲ್ಲಿ ಸ್ಥಗಿತಗೊಂಡಿದ್ದು ಕಂಡು ಬಂದಿತು ಈ ವ್ಯವಸ್ಥೆ ಕುರಿತು ಅರೀತ ಅಪರಾಧ ವಿಭಾಗ ಪಿಎಸ್ಐ ಆರ್. ಎಸ್.ಭಂಗಿ, ಪಿಎಸ್ಐ ಶ್ರೀಮತಿ ಜ್ಯೋತಿ ಖೋತ್ ಅವರು ಮಿಂಚಿನ ವೇಗದಲ್ಲಿ ದಾವಿಸಿ ಬಂದು ಕಾರ್ಯೋನ್ಮುಖರಾಗಿ ಜಾಮ್ ಆದ ಟ್ರಾಫಿಕ್‌ನ್ನು ಸಡಿಲುಗೊಳಿಸಲು ಗಂಟೆಗಟ್ಟಲೇ ಕಾಲ ಶ್ರಮ ವಹಿಸಿದ್ದೇನು ಕಡಿಮೇನಲ್ಲಾ ರಾಣಾ ಪ್ರತಾಪ್ ಸರ್ಕಲ್ ಮುಂಭಾಗದ ರಸ್ತೆ ಮುಖ್ಯ ರಸ್ತೆಯಾಗಿ ಮಾರ್ಪಟ್ಟಿದ್ದು ಈ ಎಲ್ಲಾ ವಾಹನಗಳ ಸಂಚಾರ ಸುಗಮವಾಗಿ ಸಾಗಲಿದೆ ಎಂಬ ಉದ್ದೇಶ ಹೊತ್ತ ಈ ಅಧಿಕಾರಿಗಳು ತಾಳಿಕೋಟೆ ಹಡಗಿನಾಳ ರಸ್ತೆಗೆ ಅಡ್ಡಲಾಗಿ ಕಟ್ಟಿರುವ ಸೇತುವೆ ಮೇಲೆ ವಾಹನಗಳು ತಿರುಗಾಡಲು ಅನುವು ಮಾಡಿಕೊಟ್ಟರು.



ಉದಯವಾಹಿನಿ ಚಿತ್ರ

# ಆ. 12ರಿಂದ ರಾಜ್ಯವ್ಯಾಪಿ ಆಶಾ ಕಾರ್ಯಕರ್ತೆಯರ ಪ್ರತಿಭಟನಾ ಧರಣಿ

• **ಆಶಾ ಕಾರ್ಯಕರ್ತೆಯರು ಗ್ರಾಮೀಣ ಮತ್ತು ನಗರ ಕೊಳಚೆ ಪ್ರದೇಶದ ಆರೋಗ್ಯದ ಆಶಾಕಿರಣ: ಮಲ್ಲಿಕಾರ್ಜುನ ಎಚ್.ಟಿ.**

• **ಉದಯವಾಹಿನಿ ವಿಜಯಪುರ**

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಆ.12, 13 ಹಾಗೂ 14ರಂದು ರಾಜ್ಯಾದ್ಯಂತ ಅಹೋರಾತ್ರಿ ಧರಣಿ ನಡೆಸಲು ನಿರ್ಧರಿಸಿದ್ದಾರೆ. ಎಂದು ಆಶಾ ಸಂಘಟನೆ ರಾಜ್ಯ ಉಪಾಧ್ಯಕ್ಷ ಮಲ್ಲಿಕಾರ್ಜುನ ಎಚ್.ಟಿ. ಅವರು ತಿಳಿಸಿದ್ದಾರೆ.

ಆಶಾ ಕಾರ್ಯಕರ್ತೆಯರು ಗ್ರಾಮೀಣ ಮತ್ತು ನಗರ ಕೊಳಚೆ ಪ್ರದೇಶದ ಆರೋಗ್ಯದ ಆಶಾಕಿರಣ. ಆರೋಗ್ಯ ಸೇವೆಗಳನ್ನು ಪಡೆಯಲು ಕಷ್ಟಪಡುವ ಗ್ರಾಮೀಣ ಜನತೆಯ, ವಿಶೇಷವಾಗಿ ಮಹಿಳೆಯರು, ಮಕ್ಕಳ ಯಾವುದೇ ಆರೋಗ್ಯ ಸಂಬಂಧಿತ ಬೇಡಿಕೆಗಳಿಗೆ ಆಶಾ ಮೊದಲ ಕರೆ ಕೇಂದ್ರವಾಗಿದೆ. ಜನತೆಯ ಮತ್ತು ಸರ್ಕಾರದ ನಿರೀಕ್ಷೆಯಂತೆ ಆಶಾ ತನ್ನ ಸೇವೆಯಿಂದ ಕಟ್ಟಕಡೆಯ ಜನರನ್ನೂ ಆರೋಗ್ಯವಂತರನ್ನಾಗಿಡಲು ಹಗಲು-ರಾತ್ರಿ ಶ್ರಮಿಸುತ್ತಿರುವರು. ಇವರ ಸೇವೆಗೆ ಸಮುದಾಯದಿಂದ ಸಿಗುವ ಗೌರವಾದರಗಳು ಸಂತಸ ನೀಡಿವೆಯಾದರೂ, ಸೇವೆ ಪಡೆದುಕೊಳ್ಳುವ ನಮ್ಮ ಸರ್ಕಾರಗಳು ಇವರ ಸೇವೆಗೆ ತಕ್ಕ ಪ್ರತಿಫಲ ನೀಡದೆ ನಿರಾಸೆಯಲ್ಲಿರುವಂತೆ ಮಾಡಿವೆ ಎಂದು ಅವರು ಹೇಳಿದರು.

ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ನೇತೃತ್ವದಲಿ 2025 ಜನವರಿ 7 ರಿಂದ 10 ನೇ ತಾರೀಖಿನವರೆಗೆ ಆಶಾ ಕಾರ್ಯಕರ್ತೆಯರ ರಾಜ್ಯ ಮಟ್ಟದ ಅನಿರ್ದಿಷ್ಟ ಹೋರಾಟವು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆದಿತ್ತು. ಆಗ ಮುಖ್ಯಮಂತ್ರಿ ಹಾಗೂ ಉನ್ನತ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಏಪ್ರಿಲ್ 2025ರಿಂದ ಪ್ರತಿ ತಿಂಗಳು ಎಲ್ಲಾ ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹಧನ ಸೇರಿಸಿ ಕನಿಷ್ಟ ರೂ.10,000ಗಳ ಗೌರವಧನವನ್ನು ನೀಡಲಾಗುವುದು. ರೂ.10,000 ಹೊರತುಪಡಿಸಿ, ಕಾಂಪೋನೆಂಟ್‌ಗಳ ಹೆಚ್ಚುವರಿ ಕೆಲಸದ ಆಧಾರದ ಮೇಲೆ ಹೆಚ್ಚುವರಿ ಇನ್ಸೆಂಟಿವ್ ಕೂಡ ನೀಡಲಾಗುವುದು. ಒಂದು ವೇಳೆ ಯಾರಿಗಾದರೂ ಕಾಂಪೋನೆಂಟ್ಸ್‌ಗಳಿಂದ ಕಡಿಮೆ ಮೊತ್ತದ ಪ್ರೋತ್ಸಾಹಧನ ಬಂದಿದ್ದಲ್ಲಿ, ಅಂತಹ ಆಶಾ ಕಾರ್ಯಕರ್ತೆಯರಿಗೆ, ಸರ್ಕಾರವೇ ವ್ಯತ್ಯಾಸದ ಹಣವನ್ನು ಪಾವತಿಸಿ, ರೂ. 10,000 ಗ್ಯಾರಂಟಿಯಾಗಿ ದೊರೆಯುವಂತೆ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಲಾಗಿತ್ತು. ಇದು ಕಿಂಚಿತ್ತೂ ಕಾರ್ಯಗತವಾಗಿಲ್ಲ. ಈ ಕುರಿತು ಕೂಡಲೇ ಸರ್ಕಾರ ಆದೇಶ ನೀಡಬೇಕು ಎಂದು ಆಗ್ರಹಿಸಿದರು.

ಕೆಲವು ಬಹುದಿನಗಳ ಬೇಡಿಕೆಗಳ ಬಗ್ಗೆ ಸೂಕ್ತಕ್ರಮ ಕೈಗೊಳ್ಳಲು ಮುಖ್ಯಮಂತ್ರಿಗಳು ನಿರ್ದೇಶಿಸಿದ್ದರೂ ಅದು ಕೂಡಾ ಇನ್ನೂ ಕಾರ್ಯಗತಗೊಂಡಿಲ್ಲ ಎಂದು ತಿಳಿಸಿದರು. ಈ ತೀರ್ಮಾನಗಳನ್ನು ಆರೋಗ್ಯ ಇಲಾಖೆಯ ಆಯುಕ್ತರು ಸರ್ಕಾರದ ಪರವಾಗಿ ಪ್ರತಿಭಟನಾ ಸ್ಥಳ ಫ್ರೀಡಂ ಪಾರ್ಕ್‌ಗೆ ಆಗಮಿಸಿ ಸಾವಿರಾರು ಆಶಾಗಳ ಮುಂದೆ ಬಂದು ಘೋಷಣೆ ಮಾಡಿದ್ದರು. ನಂತರ ಹೋರಾಟ ಹಿಂತೆಗೆದುಕೊಳ್ಳಲಾಯಿತು.

ಮಾಧ್ಯಮಗಳಲ್ಲೂ ಕೂಡ ಅಧಿಕೃತವಾಗಿ ಮುಖ್ಯಮಂತ್ರಿಗಳು ಘೋಷಿಸಿರುತ್ತಾರೆ. ಆಡಳಿತ ಪಕ್ಷದ ಹಲವಾರು ಸಚಿವರುಗಳು, ಶಾಸಕರು ಈ ಬಗ್ಗೆ ಪೋಸ್ಟರ್‌ಗಳನ್ನು ಸೋಷಿಯಲ್ ಮೀಡಿಯಾದಲ್ಲಿ ಹರಿಬಿಟ್ಟಿದ್ದಾರೆ. ಆದರೆ ನೋವಿನ ವಿಷಯವೆಂದರೆ ಇಲ್ಲಿಯವರೆಗೆ 7 ತಿಂಗಳು ಕಳೆದರೂ ಈ ಕುರಿತು ಸ್ಪಷ್ಟ ಆದೇಶ ಹೊರಬಿದ್ದಿಲ್ಲ ಎಂದರು.





ಉದಯವಾಹಿನಿ ಚಿತ್ರ

**ಸೇವೆಗೆ ತಕ್ಕ ಪ್ರತಿಫಲ ನೀಡಿಲ್ಲ**

> ಈ ವರ್ಷದ ಬಜೆಟ್‌ನಲ್ಲಿ ಎಲ್ಲಾ ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರಿಗೆ ಹೆಚ್ಚಿಸಿದಂತೆ ಆಶಾ ಕಾರ್ಯಕರ್ತೆಯರಿಗೂ ಗೌರವ ಧನ ಹೆಚ್ಚಳ ಮಾಡಲಾಗುವುದು ಎಂದು ಭರವಸೆ ಕೂಡಾ ನೀಡಲಾಗಿತ್ತು, ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರಿಗೆ ರೂ.1000 ಹೆಚ್ಚಿಸಿದಂತೆ 42000 ಆಶಾ ಕಾರ್ಯಕರ್ತೆಯರಿಗೆ ರೂ.1000 ಹೆಚ್ಚಳ ಮಾಡಬೇಕು. ಆದರೆ ಈ ಬಜೆಟ್‌ನಲ್ಲಿ ಕೇವಲ 15004 ಆಶಾಗಳಿಗೆ ಕಡಿಮೆ ಇದ್ದ ತಂಡ ಆಧಾರಿತ ಪ್ರೋತ್ಸಾಹಧನ ರೂ.1000 ಮಾತ್ರ ನೀಡಲಾಗಿದೆ. **-ಮಲ್ಲಿಕಾರ್ಜುನ ಎಚ್.ಟಿ.**

ಉದಯ ವಾಹಿನಿ

ದೇಶ/ವಿದೇಶ

ಶನಿವಾರ
09 ಆಗಸ್ಟ್ 2025



## ಭಾರತ–ಅಮೆರಿಕ ಸುಂಕ ಸಮರ ಶೀಘ್ರದಲ್ಲಿ ಮುಕ್ತಾಯ ಕಾಣುವ ಭರವಸೆ ವ್ಯಕ್ತಪಡಿಸಿದ ಇಸ್ರೇಲ್ ಪ್ರಧಾನಿ

# ಟ್ರಂಪ್ ಜೊತೆ ಹೇಗೆ ಡೀಲ್ ಮಾಡಬೇಕೆಂದು ಮೋದಿಗೆ ಸಲಹೆ ನೀಡುತ್ತೇನೆ

**ಜೆರುಸಲೇಂ:** ಭಾರತದ ಸರಕುಗಳ ಮೇಲೆ ಅಮೆರಿಕದ ಶೇ. 50ರಷ್ಟು ಸುಂಕ ಹೇರಿಕೆ, ಜಾಗತಿಕ ವಿದ್ಯಮಾನವಾಗಿ ಬದಲಾಗಿದೆ. ಜಗತ್ತಿನ ಅನೇಕ ರಾಷ್ಟ್ರಗಳು ಈ ವಿಚಾರವಾಗಿ ಭಾರತದ ಪರವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿವೆ. ಈಗಾಗಲೇ ರಷ್ಯಾ ಮತ್ತು ಚೀನಾ ಭಾರತದ ಪರವಾಗಿ

ಶೀಘ್ರದಲ್ಲೇ ಭಾರತಕ್ಕೆ ಭೇಟಿ



- ಭಾರತದ ಸರಕುಗಳ ಮೇಲೆ ಶೇ. 50ರಷ್ಟು ಸುಂಕ ವಿಧಿಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್.
- ಭಾರತ-ಅಮೆರಿಕ ಸುಂಕ ಸಮರ ಶೀಘ್ರದಲ್ಲಿ ಮುಕ್ತಾಯ ಕಾಣುವ ಭರವಸೆ ವ್ಯಕ್ತಪಡಿಸಿದ ಇಸ್ರೇಲ್ ಪ್ರಧಾನಿ.
- ಟ್ರಂಪ್ ಅವರನ್ನು ನಿರ್ವಹಿಸುವ ರೀತಿಯ ಬಗ್ಗೆ ಪ್ರಧಾನಿ ಮೋದಿಗೆ ಸಲಹೆ ನೀಡ್ತಾರಂತೆ ಬೆಂಜಮಿನ್ ನೆತನ್ಯಾಹು.

ಧ್ವನಿ ಎತ್ತಿದ್ದು, ಇಸ್ರೇಲ್ ಕೂಡ ಈ ಕುರಿತು ಸೌಮ್ಯ ಪ್ರತಿಕ್ರಿಯೆ ನೀಡಿದೆ. ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆಯಲ್ಲಿ

**ಭಾರತ ಭೇಟಿಗೆ ಸಿದ್ಧ : ನೆತನ್ಯಾಹು**

ನಾನು ಶೀಘ್ರದಲ್ಲೇ ಭಾರತಕ್ಕೆ ಭೇಟಿ ನೀಡಲು ಉತ್ಸುಕನಾಗಿದ್ದೇನೆ. ಭಾರತ ಮತ್ತು ಇಸ್ರೇಲ್ ನಡುವಿನ ದ್ವಿಪಕ್ಷೀಯ ರಾಜತಾಂತ್ರಿಕ ಸಂಬಂಧ ಅತ್ಯಂತ ಗಟ್ಟಿಯಾಗಿದ್ದು, ಇದನ್ನು ಮುಂದಕ್ಕೆ ಕೊಂಡೊಯ್ಯುವ ಕುರಿತು ನಾನು ಪ್ರಧಾನಿ ಮೋದಿ ಅವರೊಂದಿಗೆ ಮತನಾಡಲು ಬಯಸಿದ್ದೇನೆ ಎಂದು ಇಸ್ರೇಲ್ ಪ್ರಧಾನಿ ನುಡಿದರು.

ಇಸ್ರೇಲ್ ಶಸ್ತ್ರಾಸ್ತ್ರಗಳ ಬಳಕೆ, ಬೆಂಜಮಿನ್ ನೆತನ್ಯಾಹು ಅಮೆರಿಕ ಮತ್ತು ಭಾರತ ನಡುವೆ ನಡೆಯುತ್ತಿರುವ ಸುಂಕ ಉದ್ವಿಗ್ನತೆಯ ನಡುವೆ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ವ್ಯವಹರಿಸುವ ರೀತಿಯ ಬಗ್ಗೆ ನಾನು ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗ ಸಲಹೆ ನೀಡುತ್ತೇನೆ ಎಂದು ಹೇಳಿದ್ದಾರೆ.

ಭಾರತಕ್ಕೆ ಅಮೆರಿಕದ ಸುಂಕ ಹೊಡೆತದ ಬಗ್ಗೆ ಪ್ರತಿಕ್ರಿಯೆ ನೀಡಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು , ನರೇಂದ್ರ ಮೋದಿ ಮತ್ತು ಡೊನಾಲ್ಡ್ ಟ್ರಂಪ್ ಇಬ್ಬರೂ ಆಪ್ತ ಸ್ನೇಹಿತರಾಗಿದ್ದು, ಈ ಸಮಸ್ಯೆಯನ್ನು ಅವರು ಖಾಸಗಿಯಾಗಿ ಕುಳಿತು ಬಗೆಹರಿಸಿಕೊಳ್ಳುವ ವಿಶ್ವಾಸವಿದೆ ಎಂದು ಹೇಳಿದ್ದಾರೆ. ಪ್ರಧಾನಿ ಮೋದಿ ಮತ್ತು ಟ್ರಂಪ್ ನನಗೂ ಆತ್ಮ ಸ್ನೇಹಿತರು. ಹೀಗಾಗಿ ಟ್ರಂಪ್ ಅವರೊಂದಿಗೆ ಹೇಗೆ ವ್ಯವಹರಿಸಬೇಕು ಎಂಬುದರ ಬಗ್ಗೆ ನಾನು ಪ್ರಧಾನಿ ಮೋದಿ ಅವರಿಗೆ ಕೆಲವು ಸಲಹೆಗಳನ್ನು ನೀಡುತ್ತೇನೆ. ಆದರೆ ಅವರೊಂದಿಗೆ ಕೇವಲ ಖಾಸಗಿಯಾಗಿ ಮಾತ್ರ ನಾನು ಮಾತನಾಡುತ್ತೇನೆ ಎಂದು ಬೆಂಜಮಿನ್ ನೆತನ್ಯಾಹು ಸ್ಪಷ್ಟಪಡಿಸಿದ್ದಾರೆ. ಬೆಂಜಮಿನ್ ನೆತನ್ಯಾಹು ಅವರು ನಿನ್ನೆಯಷ್ಟೇ, ಪಾಕಿಸ್ತಾನ ವಿರುದ್ಧ ಭಾರತೀಯ ಸೇನೆ ನಡೆಸಿದ್ದ ಮೂರು ದಿನಗಳ ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆಯಲ್ಲಿ ಇಸ್ರೇಲ್ ಅಸ್ತ್ರಗಳ ಬಳಕೆ ಮಾಡಲಾಗಿದೆ ಎಂದು ಹೇಳಿಕೆ ನೀಡಿದ್ದರು.

**ಭಾರತ-ಅಮೆರಿಕ ಸಂಬಂಧ ಗಟ್ಟಿ**

**ಭಾರತ ಮತ್ತು ಅಮೆರಿಕದ ನಡುವಿನ ದ್ವಿಪಕ್ಷೀಯ ರಾಜಯತಾಂತ್ರಿಕ ಸಂಬಂಧ ಅತ್ಯಂತ ಗಟ್ಟಿಯಾಗಿದೆ ಎಂದಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಅವರು ಸುಂಕದ ಸಮಸ್ಯೆಯನ್ನು ಶೀಘ್ರದಲ್ಲೇ ಪರಿಹರಿಸಿಕೊಳ್ಳುತ್ತಾರೆ ಎಂಬ ವಿಶ್ವಾಸ ಇರುವುದಾಗಿ ಹೇಳಿದ್ದಾರೆ.**

ಪ್ರಸ್ತುತ ಬೆಳವಣಿಗೆಗಳನ್ನು ಇಸ್ರೇಲ್ ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಸ್ನೇಹಿತರ ನಡುವಿನ ಜಗಳ ಬೇಗ ಮುಕ್ತಾಯವಾಗಲಿದೆ ಎಂದಿರುವ ಬೆಂಜಮಿನ್ ನೆತನ್ಯಾಹು, ಭಾರತ ಮತ್ತು ಅಮೆರಿಕ ಸುಂಕ ಸಮರ ಕೊನೆಗೊಳ್ಳುವುದು ಇಸ್ರೇಲ್ ಹಿತದೃಷ್ಟಿಯಿಂದಲೂ ಒಳ್ಳೆಯದು ಎಂದು ಹೇಳುವ ಮೂಲಕ ಗಮನ ಸೆಳೆದಿದ್ದಾರೆ.

ಭಾರತ-ಇಸ್ರೇಲ್-ಅಮೆರಿಕ ನಡುವಿನ ರಾಜತಾಂತ್ರಿಕ ಸಂಬಂಧ ಜಾಗತಿಕ ಪ್ರಭಾವ ಹೊಂದಿದ್ದು, ನಾವು ಅಷ್ಟು ಸುಲಭವಾಗಿ ಸಂಬಂಧಗಳು ಶಿಥೀಲಗೊಳ್ಳಲು ಬಿಡುವುದಿಲ್ಲ ಎಂಬ ಬೆಂಜಮಿನ್ ನೆತನ್ಯಾಹು ಹೇಳಿಕೆ, ಸುಂಕ ಸಮರ ಶೀಘ್ರದಲ್ಲೇ ಇತ್ಯರ್ಥವಾಗುವ ಸಾಧ್ಯತೆಯತ್ತ ಬೊಟ್ಟು ಮಾಡಿದೆ.

# ಕಪಿಲ್ ಶರ್ಮಾ ಒಡೆತನದ ಕೆಫೆ ಮೇಲೆ 2ನೇ ಬಾರಿ ಗುಂಡಿನ ದಾಳಿ

**ಸರ್ರೆ:** ನಗರದಲ್ಲಿರುವ ಹಾಸ್ಯ ನಟ ಕಪಿಲ್ ಶರ್ಮಾ ಅವರ 'ಕ್ಯಾಪ್ಸ್ ಕೆಫೆ' ರೆಸ್ಟೋರೆಂಟ್ ಮೇಲೆ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿದ್ದಾರೆ. ಜುಲೈನಲ್ಲಿಯೂ ಕೆಫೆ ಮೇಲೆ ಫೈರಿಂಗ್ ಮಾಡಲಾಗಿತ್ತು. ಎರಡನೇ ಬಾರಿ ನಡೆದ 25 ಸುತ್ತು ಗುಂಡು ಕೆಫೆ ಮೇಲೆ ಹಾರಿಸಲಾಗಿದೆ.

ಆಗಸ್ಟ್ 7ರಂದು ಮುಂಜಾನೆ 4:40 ರ ಸುಮಾರಿಗೆ 85 ಅವೆನ್ಯೂ ಮತ್ತು ಸ್ಕಾಟ್ ರಸ್ತೆಯಲ್ಲಿರುವ ಕಾಪ್ಸ್ ಕೆಫೆ ಮೇಲೆ ಗುಂಡಿನ ದಾಳಿ ನಡೆದಿದೆ. ಗುರುಪ್ರೀತ್ ಸಿಂಗ್ ಅಲಿಯಾಸ್ ಗೋಲ್ಡಿ ಧಿಲ್ಲೋನ್ ಮತ್ತು ಲಾರೆನ್ಸ್ ಬಿಷ್ಣೋಯಿ ಎಂಬ ಗ್ಯಾಂಗ್‌ಗಳು ಈ ದಾಳಿಯ ಹೊಣೆ ಹೊತ್ತುಕೊಂಡಿವೆ. ಈ ಘಟನೆಯಿಂದಾಗಿ ಆತಂಕ ಮೂಡಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

**ಈ ಹಿಂದೆಯೂ ದಾಳಿ:** ಹಾಸ್ಯ ನಟ ಹಾಗೂ ಸ್ಟ್ಯಾಂಡಪ್ ಕಾಮಿಡಿಯನ್ ಕಪಿಲ್ ಶರ್ಮಾ ಅವರ ಕೆಫೆ ಕೆನಡಾದ ಒಟ್ಟಾವದಲ್ಲಿ ಉದ್ಘಾಟನೆಯಾದ ಕೆಲವೇ ದಿನಗಳಲ್ಲಿ ಅದರ ಮೇಲೆ ಖಲಿಸ್ತಾನ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದ್ದರು. ಜುಲೈ 10ರಂದು ಗುಂಡಿನ ದಾಳಿ ನಡೆದಿತ್ತು. ಕಾರಿನಲ್ಲಿ ಕುಳಿತಿದ್ದ ವ್ಯಕ್ತಿಯೊಬ್ಬ ಕೆಫೆಯ ಕಿಟಕಿಯ




ಮೇಲೆ ಕನಿಷ್ಠ ಒಂಬತ್ತು ಗುಂಡುಗಳನ್ನು ಹಾರಿಸುತ್ತಿರುವ ವಿಡಿಯೊ ವೈರಲ್ ಆಗಿದೆ. ಲಡ್ಡಿ ಗ್ಯಾಂಗ್‌ನ ಸದಸ್ಯ ವಿಡಿಯೋದಲ್ಲಿ ದಾಳಿ ಮಾಡಿರುವುದು ಪತ್ತೆಯಾಗಿದೆ.

ಈ ಗ್ಯಾಂಗ್ ಖಲಿಸ್ತಾನ ಪರವಾಗಿರುವ ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್ ಜತೆಗೆ ಸಂಬಂಧ ಹೊಂದಿದೆ. ಹಾಸ್ಯನಟನ ಹೇಳಿಕೆಯಿಂದ ಮನನೊಂದಿದ್ದರಿಂದ ಲಡ್ಡಿ ಗ್ಯಾಂಗ್‌ನ ಸದಸ್ಯ ಗುಂಡಿನ ದಾಳಿಗೆ ಆದೇಶಿಸಿದ್ದಾನೆ ಎಂದು ಕೆನಡಾ ಮಾಧ್ಯಮಗಳು ವರದಿ ಮಾಡಿವೆ.

'ಕ್ಯಾಫ್ಸ್ ಕೆಫೆ' ಎಂಬ ರೆಸ್ಟೋರೆಂಟ್ ತೆರೆದಿರುವ ಕಪಿಲ್ ಶರ್ಮಾ ಅವರು ಪತ್ನಿ ಗಿನ್ನಿ ಅವರನ್ನು ಕೂಡ ಈ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ. ಕೆನಡಾದ ಬ್ರಿಟಿಷ್

- **ಫೈರಿಂಗ್ ಮಾಡಿದ್ದು ನಾವೇ ಎಂದ ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್**
- **ಕೆನಡಾದಲ್ಲಿ ಕಪಿಲ್ ಶರ್ಮಾ ಕಾಪ್ಸ್ ಕೆಫೆ ಮೇಲೆ ಗುಂಡಿನ ದಾಳಿ**
- **ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್ ಹೊಣೆ ಹೊತ್ತ ಬಗ್ಗೆ ಪೋಸ್ಟ್**
- **ಜುಲೈ 10ರಂದು ಸಹ ಖಲಿಸ್ತಾನಿಗಳಿಂದ ದಾಳಿ**

ಕೊಲಂಬಿಯಾದ ಸರ್ರೆಯಲ್ಲಿರುವ ಈ ಕೆಫೆಯನ್ನು ಕೆಲವು ದಿನಗಳ ಹಿಂದಷ್ಟೇ ಉದ್ಘಾಟಿಸಲಾಗಿತ್ತು. 2024ರಲ್ಲಿ ಪಂಜಾಬ್‌ನ ರೂಪನಗರದಲ್ಲಿವಿಎಚ್‌ಪಿ ಮುಖಂಡ ಪ್ರಭಾಕರ್ ಅವರನ್ನು ಹತ್ಯೆಗೈಯಲು ಲಡ್ಡಿ ಅಲಿಯಾಸ್ ಹರ್‌ಜಿತ್ ಸಿಂಗ್ ಸಂಚು ಹೆಣೆದಿದ್ದ. ಈ ಸಂಬಂಧ ಆತನ ಮಾಹಿತಿ ನೀಡಿದವರಿಗೆ ಎನ್‌ಐಎ 10 ಲಕ್ಷ ರೂ. ಬಹುಮಾನ ಘೋಷಿಸಿತ್ತು. ಸದ್ಯ ಈ ಬಗ್ಗೆ ಮಾತಾನಡಿರುವ ಕಪಿಲ್ ಶರ್ಮಾ, ಗುಂಡಿನ ದಾಳಿ ಮಾಡಿರುವು ಪ್ರಕರಣ ನಿಜಕ್ಕೂ ಆಘಾತ ತರಿಸಿದೆ.

# ವಜ್ರದ ವ್ಯಾಪಾರಿಗೆ 1.81 ಕೋಟಿ ವಂಚನೆ

**ಮುಂಬೈ:** ಮುಂಬೈ ಮೂಲದ ವಜ್ರ ವ್ಯಾಪಾರಿಯೊಬ್ಬರಿಗೆ 1.81 ಕೋಟಿ ರೂ. ಮೌಲ್ಯದ ಅಮೂಲ್ಯ ಕಲ್ಲುಗಳನ್ನು ವಂಚಿಸಿದ ಆರೋಪದ ಮೇಲೆ ಗುಜರಾತ್‌ನ ಆಭರಣ ವ್ಯಾಪಾರಿಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅವರ ದೂರಿನ ಆಧಾರದ ಮೇಲೆ, ಪೊಲೀಸರು ಸೂರತ್‌ನ ಆಭರಣ ವ್ಯಾಪಾರಿ ರಾಜೇಶ್‌ಕುಮಾರ್ ಶರ್ಮಾ (50) ವಿರುದ್ಧ ಭಾರತೀಯ ನ್ಯಾಯ ಸಂಹಿತಾ (ಬಿಎನ್ ಎಸ್) ಅಡಿಯಲ್ಲಿ ವಂಚನೆ ಮತ್ತು ಕ್ರಿಮಿನಲ್ ನಂಬಿಕೆ ದ್ರೋಹಕ್ಕಾಗಿ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿದ್ದಾರೆ ಎಂದು ಬಾಂದ್ರಾ-ಕುರ್ಲಾ ಕಾಂಪ್ಲೆಕ್ಸ (ಬಿಕೆಸಿ) ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಜ್ರ ವ್ಯಾಪಾರ ಕಂಪನಿಯೊಂದರ ಪಾಲುದಾರರಾಗಿರುವ ದೂರುದಾರ ರಾಜೇಶ್ ಬೆಚಾರ್‌ಭಾಯ್ ವಿಥಾನಿ ಅವರು, ಶರ್ಮಾ




ಮಾರ್ಚ್‌ನಲ್ಲಿ ತಮ್ಮನ್ನು ಸಂಪರ್ಕಿಸಿ, ಉತ್ತಮ ಗುಣಮಟ್ಟದ ವಜ್ರಗಳನ್ನು ಖರೀದಿಸಲು ಆಸಕ್ತಿ ಹೊಂದಿರುವ ಪ್ರತಿಷ್ಠಿತ ಕ್ಲೈಂಟ್ ಇದ್ದಾರೆ ಎಂದು ಹೇಳಿಕೊಂಡರು ಮತ್ತು ಆ ಪ್ರಸ್ತಾಪವನ್ನು ನಂಬಿ, ಅವರು ಸುಮಾರು 1.81 ಕೋಟಿ ರೂ. ಮೌಲ್ಯದ 920.68 ಕ್ಯಾರೆಟ್ ತೂಕದ ವಜ್ರಗಳನ್ನು ಅವರಿಗೆ ಹಸ್ತಾಂತರಿಸಿದರು ಎಂದು ಅವರು ಹೇಳಿದರು. ಆದರೆ, ಶರ್ಮಾ ವಜ್ರಗಳಿಗೆ ಹಣ ಪಾವತಿಸಲು ಅಥವಾ ಅವುಗಳನ್ನು ಹಿಂದಿರುಗಿಸಲು ವಿಫಲರಾದರು ಮತ್ತು ವಿಭಿನ್ನ ನೆಪಗಳನ್ನು ನೀಡುತ್ತಲೇ ಇದ್ದರು ಎಂದು ಅಧಿಕಾರಿ ಹೇಳಿದರು, ಆರೋಪಗಳ ಬಗ್ಗೆ ತನಿಖೆ ನಡೆಯುತ್ತಿದೆ.

# 80ರ ವೃದ್ಧನಿಗೆ ಪ್ರೀತಿ ಹೆಸರಲ್ಲಿ 9 ಕೋಟಿ ವಂಚನೆ

**ಮುಂಬೈ:** ಸುಮಾರು ಎರಡು ವರ್ಷಗಳ ಕಾಲ ನಡೆದ ಹಗರಣದಲ್ಲಿ 734 ಆನ್‌ಲೈನ್ ವಹಿವಾಟುಗಳಲ್ಲಿ, ಮುಂಬೈನ 80 ವರ್ಷದ ವೃದ್ಧನೊಬ್ಬನಿಗೆ ಪ್ರೀತಿ ಮತ್ತು ಸಹಾನುಭೂತಿಯ ಹೆಸರಿನಲ್ಲಿ ನಾಲ್ವರು ಮಹಿಳೆಯರು ಸುಮಾರು 9 ಕೋಟಿ ರೂ. ವಂಚಿಸಿರುವ ಘಟನೆ ನಡೆದಿದೆ.

ಏಪ್ರಿಲ್ 2023ರಲ್ಲಿ, ವೃದ್ಧ ಶಾರ್ವಿ ಎಂಬ ಮಹಿಳೆಗೆ ಫೇಸ್‌ಬುಕ್‌ನಲ್ಲಿ ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿದ್ದನು. ಆಕೆ ಫ್ರೆಂಡ್ ರಿಕ್ವೆಸ್ಟ್ ಸ್ವೀಕರಿಸಲಿಲ್ಲ. ಕೆಲವು ದಿನಗಳ ನಂತರ, ವೃದ್ಧನಿಗೆ ಶಾರ್ವಿಯ ಖಾತೆಯಿಂದ ಫ್ರೆಂಡ್ ರಿಕ್ವೆಸ್ಟ್ ಬಂದಿತ್ತು. ಇಬ್ಬರೂ ಚಾಟ್ ಮಾಡಲು ಪ್ರಾರಂಭಿಸಿದರು ಮತ್ತು ಫೋನ್ ಸಂಖ್ಯೆಗಳು ವಿನಿಮಯವಾದವು. ಚಾಟ್‌ಗಳು ಫೇಸ್‌ಬುಕ್‌ನಿಂದ ವಾಟ್ಸಾಪ್‌ಗೆ ಸ್ಥಳಾಂತರಗೊಂಡವು. ಶಾರ್ವಿ ತನ್ನ ಪತಿಯಿಂದ ಬೇರ್ಪಟ್ಟು ಮಕ್ಕಳೊಂದಿಗೆ ವಾಸಿಸುತ್ತಿರುವುದಾಗಿ ಹೇಳಿದ್ದಳು. ಕ್ರಮೇಣ ಹಣ ಕೇಳಲು ಪ್ರಾರಂಭಿಸಿದಳು, ತನ್ನ ಮಕ್ಕಳು ಅಸ್ವಸ್ಥರಾಗಿದ್ದಾರೆಂದು ವೃದ್ಧನಿಗೆ ತಿಳಿಸಿದ್ದಳು. ಕೆಲವು ದಿನಗಳ ನಂತರ, ಕವಿತಾ ಎಂಬ ಮಹಿಳೆ ಕೂಡ ಆ ವ್ಯಕ್ತಿಗೆ ವಾಟ್ಸಾಪ್‌ನಲ್ಲಿ ಸಂದೇಶ ಕಳುಹಿಸಲು



ಪ್ರಾರಂಭಿಸಿದಳು. ಶಾರ್ವಿಗೆ ಪರಿಚಿತಳು ಎಂದು ಹೇಳಿಕೊಂಡು ಸ್ನೇಹ ಬೆಳೆಸಲು ಬಯಸುತ್ತೇನೆ ಎಂದಿದ್ದಳು. ಶೀಘ್ರದಲ್ಲೇ ಅವಳು ವೃದ್ಧನಿಗೆ ಅಶ್ಲೀಲ ಸಂದೇಶಗಳನ್ನು ಕಳುಹಿಸಲು ಪ್ರಾರಂಭಿಸಿದಳು ಮತ್ತು ಹಣ ಕೇಳಲು ಪ್ರಾರಂಭಿಸಿದಳು.

ಡಿಸೆಂಬರ್‌ನಲ್ಲಿ ಶಾರ್ವಿಯ ಸಹೋದರಿ ಎಂದು ಹೇಳಿಕೊಂಡು ಇನ್ನೊಬ್ಬ ಮಹಿಳೆಯಿಂದ ಸಂದೇಶ ಬರಲಾರಂಭಿಸಿತು. ದಿನಾಜ್ ವೃದ್ಧನಿಗೆ ಶಾರ್ವಿ ಮೃತಪಟ್ಟಿದ್ದಾಳೆಂದು ಹೇಳಿ ಆಸ್ಪತ್ರೆಯ ಬಿಲ್ ಪಾವತಿಸಲು ಕೇಳಿದ್ದಳು. ದಿನಾಜ್ ಶಾರ್ವಿ ಮತ್ತು ವೃದ್ಧನ ನಡುವಿನ ವಾಟ್ಸಾಪ್ ಚಾಟ್‌ಗಳ ಸ್ಕ್ರೀನ್ ಶಾಟ್‌ಗಳನ್ನು ಕಳುಹಿಸಿ ಹಣ ಸುಲಿಗೆ ಮಾಡಿದ್ದಳು. ವೃದ್ಧ ತನ್ನ ಹಣವನ್ನು ಹಿಂತಿರುಗಿಸುವಂತೆ ಕೇಳಿದಾಗ, ದಿನಾಜ್ ಆತಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕಿದ್ದಾಳೆ.

# ರಷ್ಯಾದಿಂದ ಭಾರತ ತೈಲ ಖರೀದಿ ನಿಲ್ಲಿಸಲು ನಿರಾಕರಿಸಿರುವುದು ರಾಷ್ಟ್ರೀಯ ಭದ್ರತಾ ಸಮಸ್ಯೆ : ಶ್ವೇತಭವನ


**ನ್ಯೂಯಾರ್ಕ್:** ಭಾರತದ ಮೇಲೆ ಹೆಚ್ಚುವರಿ ಶೇ. 25 ರಷ್ಟು ಸುಂಕ ವಿಧಿಸುವುದು ನವದೆಹಲಿಯ ರಷ್ಯಾದ ತೈಲ ಖರೀದಿಯನ್ನು ನಿಲ್ಲಿಸಲು ತೀವ್ರ ನಿರಾಕರಣೆಗೆ ಸಂಬಂಧಿಸಿದ ರಾಷ್ಟ್ರೀಯ ಭದ್ರತಾ ಸಮಸ್ಯೆ ಎಂದು ಶ್ವೇತಭವನದ ವ್ಯಾಪಾರ ಸಲಹೆಗಾರ ಪೀಟರ್ ನವರೊ ಹೇಳಿದ್ದಾರೆ. ಕಳೆದ ವಾರ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಗಸ್ಟ್ 7 ರಿಂದ ಜಾರಿಗೆ ಬಂದ ಭಾರತದ ಮೇಲೆ ಶೇ. 25 ರಷ್ಟು ಪರಸ್ಪರ ಸುಂಕಗಳನ್ನು ಘೋಷಿಸಿದ್ದರು.ಭಾರತದ ರಷ್ಯಾದ ತೈಲ ಖರೀದಿಗೆ ಭಾರತದ ಮೇಲೆ ಹೆಚ್ಚುವರಿ ಶೇ. 25 ರಷ್ಟು ಸುಂಕ ವಿಧಿಸುವ ಕಾರ್ಯಕಾರಿ ಆದೇಶಕ್ಕೆ ಅಮೆರಿಕ ಅಧ್ಯಕ್ಷರು ಬುಧವಾರ ಸಹಿ ಹಾಕಿದರು, ಇದು ಒಟ್ಟು ಸುಂಕವನ್ನು ಶೇ. 50 ಕ್ಕೆ ತರುತ್ತದೆ, ಇದು ವಿಶ್ವದ ಯಾವುದೇ ದೇಶದ ಮೇಲೆ ಅಮೆರಿಕ ವಿಧಿಸಿದ ಅತ್ಯಧಿಕ ಸುಂಕಗಳಲ್ಲಿ ಒಂದಾಗಿದೆ.

ಭಾರತ ಸುಂಕಗಳ ಮಹಾರಾಜ ಎಂಬ ಅಂಶದಿಂದ ನೀವು ಪ್ರಾರಂಭಿಸಿ, ಇದು ಅಮೇರಿಕನ್ ಉತ್ಪನ್ನಗಳ ಮೇಲೆ ವಿಶ್ವದ ಅತ್ಯಧಿಕ ಸುಂಕವಾಗಿದೆ ಮತ್ತು ಇದು ಹೆಚ್ಚಿನ ಸುಂಕ ರಹಿತ ತಡೆಗೋಡೆಯನ್ನು ಹೊಂದಿದೆ ಆದ್ದರಿಂದ ನಾವು ನಮ್ಮ ಉತ್ಪನ್ನಗಳನ್ನು ಒಳಗೆ ತರಲು ಸಾಧ್ಯವಿಲ್ಲ ಎಂದು ಅವರು ಹೇಳಿದರು.

ಅನ್ಯಾಯದ ವ್ಯಾಪಾರ ವಾತಾವರಣದಲ್ಲಿ ತಮ್ಮ ಉತ್ಪನ್ನಗಳನ್ನು ಖರೀದಿಸಲು ಅಮೆರಿಕ ಭಾರತಕ್ಕೆ ವಿದೇಶಗಳಿಗೆ ಬಹಳಷ್ಟು ಡಾಲರ್‌ಗಳನ್ನು ಕಳುಹಿಸುತ್ತದೆ, ಅವರು ಹೇಳಿಕೊಂಡರು. ನಂತರ ಭಾರತ ರಷ್ಯಾದ ತೈಲವನ್ನು ಖರೀದಿಸಲು ಅಮೇರಿಕನ್ ಡಾಲರ್‌ಗಳನ್ನು ಬಳಸುತ್ತದೆ. ನಂತರ ರಷ್ಯಾ ತನ್ನ ಶಸ್ತ್ರಾಸ್ತ್ರಗಳಿಗೆ ಹಣಕಾಸು ಒದಗಿಸಲು, ಉಕ್ರೇನಿಯನ್ನರನ್ನು ಕೊಲ್ಲಲು ಭಾರತದಿಂದ ಬರುವ ಆ ಅಮೇರಿಕನ್ ಡಾಲರ್‌ಗಳನ್ನು ಬಳಸುತ್ತದೆ ಮತ್ತು ನಂತರ ಅಮೇರಿಕನ್ ತೆರಿಗೆದಾರರು ಭಾರತದಿಂದ ಬಂದ ಅಮೇರಿಕನ್ ಡಾಲರ್‌ಗಳಿಂದ ಪಾವತಿಸಿದ ರಷ್ಯಾದ ಶಸ್ತ್ರಾಸ್ತ್ರಗಳ ವಿರುದ್ಧ ಉಕ್ರೇನ್ ಅನ್ನು ರಕ್ಷಿಸಲು ಅಗತ್ಯವಿರುವ ಶಸ್ತ್ರಾಸ್ತ್ರಗಳಿಗೆ ಪಾವತಿಸಲು ಕರೆ ನೀಡಲಾಗುತ್ತದೆ ಎಂದು ನವರೊ ಹೇಳಿದರು.

ಇದು ನಿಲ್ಲಿಸಬೇಕಾಗಿದೆ ಎಂದು ಅವರು ಹೇಳಿದರು. ಆ ಲೆಕ್ಕಾಚಾರ ಕೆಲಸ ಮಾಡುವುದಿಲ್ಲ. ಅಧ್ಯಕ್ಷರು ಆರ್ಥಿಕ ಭದ್ರತೆ ಮತ್ತು ರಾಷ್ಟ್ರೀಯ ಭದ್ರತೆಯ ನಡುವಿನ ಸಂಪರ್ಕವನ್ನು ಅರ್ಥಮಾಡಿ ಕೊಂಡಿದ್ದಾರೆ, ಆದ್ದರಿಂದ ಅದು ಅಲ್ಲಿ ಮುಖ್ಯ ವಿಷಯವಾಗಿತ್ತು ಎಂದು ಅವರು ಹೇಳಿದರು.

**ಶ್ವೇತಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಭಾರತದ ಸುಂಕಗಳಿಗೆ ತಾರ್ಕಿಕತೆಯು ಪರಸ್ಪರ ಸುಂಕಗಳಿಗಿಂತ ಬಹಳ ಭಿನ್ನವಾಗಿದೆ ಎಂದು ಅರ್ಥಮಾಡಿಕೊಳ್ಳುವುದು ಮುಖ್ಯ ಎಂದು ಹೇಳಿದರು.ಇದು ರಷ್ಯಾದ ತೈಲ ಖರೀದಿಯನ್ನು ನಿಲ್ಲಿಸಲು ಭಾರತದ ನಿರಾಕರಣೆಗೆ ಸಂಬಂಧಿಸಿದ ಶುದ್ಧ ರಾಷ್ಟ್ರೀಯ ಭದ್ರತಾ ಸಮಸ್ಯೆಯಾಗಿದೆ ಎಂದು ಅವರು ಹೇಳಿದರು ಮತ್ತು ಪ್ರತಿಯೊಬ್ಬ ಅಮೆರಿಕನ್ನರು ಇದರ ಗಣಿತವನ್ನು ಅರ್ಥಮಾಡಿಕೊಳ್ಳಬೇಕು ಏಕೆಂದರೆ ಇದು ವ್ಯಾಪಾರ ಪರಿಸ್ಥಿತಿಗೆ ಸಂಬಂಧಿಸಿದೆ -ಪೀಟರ್**



# ಎನ್‌ಇಪಿ ಪರ್ಯಾಯವಾಗಿ ದ್ವಿಭಾಷಾ ನೀತಿ ಒಳಗೊಂಡ ಎಸ್‌ಇಪಿ ಬಿಡುಗಡೆ ಮಾಡಿದ ತಮಿಳುನಾಡು ಸರ್ಕಾರ

**ಚೆನ್ನೈ:** ಕೇಂದ್ರ ಸರ್ಕಾರದ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)ಗೆ ಪರ್ಯಾಯವಾಗಿ ತಮಿಳುನಾಡು ಸರ್ಕಾರ ದ್ವಿಭಾಷಾ ನೀತಿ ಒಳಗೊಂಡಿರುವ ರಾಜ್ಯ ಶಿಕ್ಷಣ ನೀತಿ(ಎಸ್‌ಇಪಿ)ಯನ್ನು ಹೊರತಂದಿದೆ. ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಶುಕ್ರವಾರ ಕೊಟ್ಟೂರುಪುರಂನ ಅಣ್ಣಾ ಶತಮಾನೋತ್ಸವ ಗ್ರಂಥಾಲಯ ಸಭಾಂಗಣದಲ್ಲಿ ರಾಜ್ಯ ಶಿಕ್ಷಣ ನೀತಿಯನ್ನು ಬಿಡುಗಡೆ ಮಾಡಿದ್ದಾರೆ.

ರಾಜ್ಯ ಹೊಸ ಶಿಕ್ಷಣ ನೀತಿಯನ್ನು ರೂಪಿಸಲು ನಿವೃತ್ತ ನ್ಯಾಯಮೂರ್ತಿ ಮುರುಗೇಶನ್ ನೇತೃತ್ವದಲ್ಲಿ 14 ಸದಸ್ಯರ ಸಮಿತಿಯನ್ನು 2022ರಲ್ಲಿ ರಚಿಸಲಾಗಿತ್ತು. ಸಮಿತಿಯು ಕಳೆದ ವರ್ಷ ಜುಲೈನಲ್ಲಿ ಮುಖ್ಯಮಂತ್ರಿಗೆ ತನ್ನ ಶಿಫಾರಸುಗಳನ್ನು ಸಲ್ಲಿಸಿತ್ತು. ಈಗ ದಾಖಲೆಯನ್ನು ಔಪಚಾರಿಕವಾಗಿ ಬಿಡುಗಡೆ ಮಾಡಲಾಗಿದೆ. ಮೂಲಗಳ ಪ್ರಕಾರ, ಎಸ್‌ಇಪಿಯು ರಾಜ್ಯದ ದ್ವಿಭಾಷಾ ನೀತಿಯನ್ನು ಉಳಿಸಿಕೊಂಡಿದ್ದು, ಎನ್‌ಇಪಿಯ ತ್ರಿಭಾಷಾ ಸೂತ್ರವನ್ನು ತಿರಸ್ಕರಿಸಿದೆ.ಸಾಮಾನ್ಯ ಪ್ರವೇಶ ಪರೀಕ್ಷೆಯ ಬದಲಿಗೆ 11 ಮತ್ತು 12ನೇ ತರಗತಿಗಳ ಕ್ರೋಢೀಕೃತ ಅಂಕಗಳ ಆಧಾರದ ಮೇಲೆ ಕಲಾ ಮತ್ತು ವಿಜ್ಞಾನ ಕೋರ್ಸ್‌ಗಳಿಗೆ



ಪದವಿಪೂರ್ವ ಪ್ರವೇಶವನ್ನು ಶಿಫಾರಸು ಮಾಡಿದೆ. 3, 5 ಮತ್ತು 8ನೇ ತರಗತಿಗಳಲ್ಲಿ ಸಾರ್ವಜನಿಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಎನ್‌ಇಪಿಯ ಪ್ರಸ್ತಾವನೆಯನ್ನು ಇದು ವಿರೋಧಿಸಿದೆ. ಇದು ಪ್ರತಿಗಾಮಿ, ಸಾಮಾಜಿಕ ನ್ಯಾಯ ವಿರೋಧಿ ಮತ್ತು ಹೆಚ್ಚಿನ ಡ್ರಾಪ್‌ಔಟ್ ದರಗಳು ಮತ್ತು ಶಿಕ್ಷಣದ ವಾಣಿಜ್ಯಕರಣಕ್ಕೆ ಸಂಭಾವ್ಯ ಕಾರಣ ಎಂದು ಕರೆದಿದೆ. ವಿಜ್ಞಾನ, ಕೃತಕ ಬುದ್ಧಿಮತ್ತೆ ಮತ್ತು ಇಂಗ್ಲಿಷ್‌ಗೆ ಹೆಚ್ಚಿನ ಒತ್ತು ನೀಡುವುದರ ಜೊತೆಗೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಗಣನೀಯ ಹೂಡಿಕೆಯನ್ನು ಸಮಿತಿ ಪ್ರಸ್ತಾಪಿಸಿದೆ. ಶಿಕ್ಷಣವನ್ನು ಸಮಕಾಲೀನ ಪಟ್ಟಿಯಿಂದ ರಾಜ್ಯ ಪಟ್ಟಿಯ ಅಡಿಯಲ್ಲಿ ಮರಳಿ ತರುವಂತೆಯೂ ಸಮಿತಿ ಶಿಫಾರಸು ಮಾಡಿದೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ರಾಜ್ಯವು ನೀಟ್ ಅನ್ನು ಅಳವಡಿಸಿಕೊಂಡರೆ ಮಾತ್ರ ಹಣವನ್ನು ಬಿಡುಗಡೆ ಮಾಡಲಾಗುವುದು ಎಂದು ಹೇಳಿದ್ದರು.

**ಹಣಕಾಸಿನ ವಿಚಾರದಲ್ಲಿ ಉದ್ವಿಗ್ನತೆ**

**ರಾಜ್ಯ ಮತ್ತು ಕೇಂದ್ರದ ನಡುವಿನ ಹಣಕಾಸಿನ ವಿಚಾರದಲ್ಲಿ ಉದ್ವಿಗ್ನತೆ ಇರುವ ನಡುವೆಯೇ ಈ ನೀತಿಯನ್ನು ಬಿಡುಗಡೆ ಮಾಡಲಾಗಿದೆ. ಎನ್‌ಇಪಿ ಜಾರಿಗೆ ತರಲು ನಿರಾಕರಿಸಿದ ಕಾರಣ ಕೇಂದ್ರವು ಸಮಗ್ರ ಶಿಕ್ಷಾ ಯೋಜನೆಯಡಿ 2,152 ಕೋಟಿ ರೂ.ಗಳನ್ನು ತಡೆಹಿಡಿದಿದೆ ಎಂದು ತಮಿಳುನಾಡು ಸರ್ಕಾರ ಆರೋಪಿಸಿದೆ.**

# ಎಸ್‌ಐಆರ್ ವಿರೋಧಿಸಿ ಸಂಸದರ ಪ್ರತಿಭಟನೆ

**ನವದೆಹಲಿ:** ಚುನಾವಣಾ ಆಯೋಗದ ಬಿಹಾರ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ವಿರುದ್ಧ ಸಂಸತ್ ಭವನದ ಸಂಕೀರ್ಣದಲ್ಲಿ ಇಂಡಿಯಾ ಬ್ಲಾಕ್ ಪಕ್ಷಗಳ ಹಲವಾರು ಸಂಸದರು ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ಟಿಎಂಸಿಯ ಅಭಿಷೇಕ್ ಬ್ಯಾನರ್ಜಿ, ಹಾಗೆಯೇ ಡಿಎಂಕೆ ಮತ್ತು ಎಡ ಪಕ್ಷಗಳ ಇತರ ವಿರೋಧ ಪಕ್ಷದ ಸಂಸದರು ಸಂಸತ್ತಿನ ಮಕರ ದ್ವಾರದ ಬಳಿ ಜಮಾಯಿಸಿ ಪ್ರತಿಭಟನೆ ನಡೆಸಿದರು.

ಅವರು ಎಸ್‌ಐಆರ್ ಅನ್ನು ಹಿಂಪಡೆಯುವಂತೆ ಒತ್ತಾಯಿಸಿ ಪೋಸ್ಟರ್‌ಗಳನ್ನು ಹಿಡಿದು ಘೋಷಣೆಗಳನ್ನು ಕೂಗಿದರು.ಇದು ಪ್ರತಿಭಟನೆಯ 13 ನೇ ದಿನವಾಗಿತ್ತು, ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಶಿಬು ಸೊರೇನ್ ಅವರ ನಿಧನದ ದೃಷ್ಟಿಯಿಂದ ಮಾತ್ರ ವಿರೋಧ ಪಕ್ಷವು ಪ್ರತಿಭಟನೆ ಕೈ ಬಿಟ್ಟಿತ್ತು. ಪ್ರತಿಭಟನಾ ಸಂಸದರ ಮುಂದೆ ನಮ್ಮ ಮತ. ನಮ್ಮ ಹಕ್ಕು. ನಮ್ಮ ಹೋರಾಟ ಎಂದು ಬರೆದಿರುವ ಬ್ಯಾನರ್ ಅನ್ನು ಪ್ರತಿಭಟನಾ ನಿರತ ಸಂಸದರು ಹೊತ್ತಿದ್ದ ಮತ್ತೊಂದು ಬ್ಯಾನರ್‌ನಲ್ಲಿ ಸರ್ ಸೈಲೆಂಟ್ ಇನ್ವಿಸಿಬಲ್ ರಿಗ್ಗಿಂಗ್ ಎಂದು ಬರೆದಿದ್ದಾರೆ.

ಚುನಾವಣಾ ಆಯೋಗ ಮತ್ತು ಸರ್ಕಾರದ ನಡುವಿನ ಒಪ್ಪಂದವನ್ನು ಆರೋಪಿಸಿರುವ ಪೋಸ್ಟರ್‌ಗಳ ಜೊತೆಗೆ ಸ್ಟಾಪ್ ಎಸ್‌ಐಆರ್ ಎಂಬ ಫಲಕಗಳನ್ನು ಸಂಸದರು ಸಹ ಹಿಡಿದಿದ್ದರು.ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನಿನ್ನೆ ಪತ್ರಿಕಾಗೋಷ್ಠಿಯಲ್ಲಿ ಮಾಡಿದ ಮತದಾನದಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಗಳನ್ನು ಉಲ್ಲೇಖಿಸಿ, ಹಲವಾರು ಸಂಸದರು ಮತ ಕಳ್ಳತನ ಎಂದು ಆರೋಪಿಸಿ ಪೋಸ್ಟರ್‌ಗಳು ಮತ್ತು ಫಲಕಗಳನ್ನು ಸಹ ಹಿಡಿದಿದ್ದರು.




# ಅಮೆರಿಕದಿಂದ ಹೊಸ ಶಸ್ತ್ರಾಸ್ತ್ರ ಖರೀದಿಗೆ ತಾತ್ಕಾಲಿಕ ವಿರಾಮ

## • ಅಮೆರಿಕದಿಂದ ಹೊಸದಾಗಿ ಶಸ್ತ್ರಾಸ್ತ್ರ ಖರೀದಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಿದ ಭಾರತ

**ಹೊಸದಿಲ್ಲಿ:** ಭಾರತದ ಸರಕುಗಳ ಮೇಲೆ ಶೇ. 50ರಷ್ಟು ಸುಂಕ ವಿಧಿಸಿ, ಭಾರತವನ್ನು ಮಣಿಸುತ್ತೇನೆ ಎಂದು ಬೀಗುತ್ತಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ, ಭಾರತದ ಮೊದಲ ಹೊಡೆತ ನೀಡಿದೆ. ಅಮೆರಿಕದಿಂದ ಆಮದು ಮಾಡಿಕೊಳ್ಳುತ್ತಿದ್ದ ಶಸ್ತ್ರಾಸ್ತ್ರ ಮತ್ತು ಯುದ್ಧ ವಿಮಾನಗಳ ಖರೀದಿಯನ್ನು ಭಾರತ ತಾತ್ಕಾಲಿಕವಾಗಿ ನಿಲ್ಲಿಸಿದೆ.

ಈ ಕುರಿತು ಮೂವರು ಭಾರತೀಯ ಹಿರಿಯ ಅಧಿಕಾರಿಗಳು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದು, ಭಾರತದ ಮೇಲಿನ ಅನ್ಯಾಯದ ಸುಂಕಕ್ಕೆ ಮೊದಲ ಪ್ರತಿರೋಧವಾಗಿ, ಅಮೆರಿಕದಿಂದ ಹೊಸ ಶಸ್ತ್ರಾಸ್ತ್ರಗಳ ಖರೀದಿ ಪ್ರಕ್ರಿಯೆಗೆ ಭಾರತ ತಡೆ ನೀಡಿದೆ ಎಂದು ಹೇಳಿದ್ದಾರೆ. ಅಮೆರಿಕದಿಂದ ಹೊಸದಾಗಿ ಶಸ್ತ್ರಾಸ್ತ್ರಗಳನ್ನು ಖರೀದಿಸುವ ಯೋಜನೆಗೆ ಅಂತಿಮ ರೂಪ ನೀಡಲು, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮುಂದಿನ

- **ಶೇ. 50ರಷ್ಟು ಸುಂಕ ಹೇರಿದ ಅಮೆರಿಕಕ್ಕೆ ಮೊದಲ ಹೊಡೆತ ಕೊಟ್ಟ ಭಾರತ.**
- **ಅಮೆರಿಕದಿಂದ ಹೊಸ ಶಸ್ತ್ರಾಸ್ತ್ರ ಖರೀದಿ ಪ್ರಕ್ರಿಯೆಗೆ ಬ್ರೇಕ್ ಹಾಕಿದ ಮೋದಿ ಸರ್ಕಾರ.**
- **ಅಮೆರಿಕದಿಂದ ಹೊಸದಾಗಿ ಶಸ್ತ್ರಾಸ್ತ್ರ ಖರೀದಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಿದ ಭಾರತ.**

ಕೆಲವು ವಾರಗಳಲ್ಲಿ ವಾಷಿಂಗ್ಟನ್‌ಗೆ ಪ್ರಯಾಣ ಬೆಳೆಸಲಿದ್ದರು. ಆದರೆ ಈಗ ಈ ಪ್ರವಾಸವನ್ನು ರದ್ದುಗೊಳಿಸಲಾಗಿದ್ದು, ಅಮೆರಿಕದಿಂದ ಯಾವುದೇ ಹೊಸ ಶಸ್ತ್ರಾಸ್ತ್ರ ಖರೀದಿಸುವ ಪ್ರಕ್ರಿಯೆಗೆ ತಾತ್ಕಾಲಿಕ ತಡೆ ನೀಡಲಾಗಿದೆ. ಆದಾಗ್ಯೂ, ಖರೀದಿಗಳನ್ನು



ನಿಲ್ಲಿಸಲು ಯಾವುದೇ ಲಿಖಿತ ಸೂಚನೆಗಳನ್ನು ನೀಡಲಾಗಿಲ್ಲ ಎಂದು ರಕ್ಷಣಾ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಅಂತಹ ಆದೇಶ ಬಂದ ಕೂಡಲೇ ಶಸ್ತ್ರಾಸ್ತ್ರ ಖರೀದಿಗಳನ್ನು ನಿಲ್ಲಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದೂ ಈ ಅಧಿಕಾರಿ ಸ್ಪಷ್ಟಪಡಿಸಿದ್ದಾರೆ. ಈ ಕುರಿತು ರಾಯಟರ್ಸ್ ಪತ್ರಿಕೆಯ ಪ್ರಶ್ನೆಗಳಿಗೆ ಭಾರತದ ರಕ್ಷಣಾ ಸಚಿವಾಲಯ ಮತ್ತು ಅಮೆರಿಕದ ಪೆಂಟಗನ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ ಭಾರತ ಸುಂಕ ಹೇರಿಕೆಗೆ ಪ್ರತಿಯಾಗಿ ಇಂತದ್ದೊಂದು ನಿರ್ಧಾರ ತೆಗೆದುಕೊಳ್ಳುವುದು ನಿರೀಕ್ಷಿತ ಎಂದು ಈ ವಿಷಯಗಳ ಬಗ್ಗೆ ಮಾಹಿತಿ ಇರುವ ಅಧಿಕಾರಿಯೊಬ್ಬರು ಹೇಳಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಅಮೆರಿಕದೊಂದಿಗೆ ನಿಕಟ ಪಾಲುದಾರಿಕೆಯನ್ನು ರೂಪಿಸಿಕೊಂಡಿರುವ ಭಾರತ, ದ್ವಿಪಕ್ಷೀಯ ರಕ್ಷಣಾ ಒಪ್ಪಂದಗಳನ್ನು ಮತ್ತಷ್ಟು ಗಟ್ಟಿಗೊಳಿಸುವ ಇರಾದೆ ಹೊಂದಿತ್ತು. ಆದರೆ ಅಮೆರಿಕದ ಶೇ. 50ರಷ್ಟು ಸುಂಕ ಹೇರಿಕೆಯಿಂದಾಗಿ, ಈ ಒಪ್ಪಂದಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಜನರಲ್ ಡೈನಾಮಿಕ್ಸ್ ಲ್ಯಾಂಡ್ ಸಿಸ್ಟಮ್ಸ್ ತಯಾರಿಸಿದ ಸ್ಟ್ರೈಕರ್ ಯುದ್ಧ ವಾಹನಗಳು ಮತ್ತು ರೇಥಿಯಾನ್ ಮತ್ತು ಲಾಕ್ಹೀಡ್ ಮಾರ್ಟಿನ್ ಅಭಿವೃದ್ಧಿಪಡಿಸಿದ ಜಾವೆಲಿನ್ ಟ್ಯಾಂಕ್ ವಿರೋಧಿ ಕ್ಷಿಪಣಿಗಳ ಖರೀದಿಯನ್ನು, ಭಾರತ ತಾತ್ಕಾಲಿಕವಾಗಿ ತಡೆ ಹಿಡಿದಿದೆ ಎನ್ನಲಾಗಿದೆ. ರಷ್ಯಾದಿಂದ ತೈಲ ಖರೀದಿಸುತ್ತಿರುವ ಭಾರತದ ಮೇಲೆ ಸಿಟ್ಟಾಗಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತದ ಸರಕುಗಳ ಮೇಲೆ ಶೇ. 25ರಷ್ಟು ಸುಂಕ ಮತ್ತು ದಂಡದ ರೂಪದಲ್ಲಿ ಶೇ. 25ರಷ್ಟು ಹೆಚ್ಚುವರಿ ಸುಂಕ ವಿಧಿಸಿದ್ದಾರೆ. ಇದರಿಂದ ಭಾರತದ ಸರಕುಗಳ ಮೇಲಿನ ಅಮೆರಿಕದ ಸುಂಕವು ಶೇ. 50ಕ್ಕೆ ತಲುಪಿದೆ. ಅಮೆರಿಕದ ಈ ಸುಂಕ ಹೇರಿಕೆಗೆ ಭಾರತ ತೀವ್ರ ವಿರೋಧ ವ್ಯಕ್ತಪಡಿಸಿದೆ.

**ಭಾರತದ ಮೊದಲ ಹೊಡೆತ**

## ಮಿನಿ ನ್ಯೂಸ್

### ಅತ್ಯಾಚಾರಿಯ ಬಂಧನ

**ಬೆರ್ಹಾಂಪುರ:** ಒಡಿಶಾದ ಗಂಜಾಂ ಜಿಲ್ಲೆಯ 15 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿ ಗರ್ಭಿಣಿಯನ್ನಾಗಿ ಮಾಡಿದ ಆರೋಪದ ಮೇಲೆ ಮುಂಬೈನಲ್ಲಿ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಇಲ್ಲಿ ತಿಳಿಸಿದ್ದಾರೆ. ಬೆರ್ಹಾಂಪುರ ಪಟ್ಟಣದ ಬೈದ್ಯನಾಥಪುರ ಪೊಲೀಸ್ ಠಾಣೆಯಲ್ಲಿ ಇತ್ತೀಚೆಗೆ ದಾಖಲಾಗಿದ್ದ ಶೂನ್ಯ ಎಫ್‌ಐಆರ್ ಆಧರಿಸಿ ಮುಂಬೈನ ಪಾರ್ಕ್‌ಸೈಟ್ ಪೊಲೀಸರು 23 ವರ್ಷದ ಆರೋಪಿಯನ್ನು ಬಂಧಿಸಿದ್ದಾರೆ. ಜುಲೈ 28 ರಂದು ಬೆರ್ಹಾಂಪುರ ಪೊಲೀಸ್ ವರಿಷ್ಠಾಧಿಕಾರಿ ಸರವಣ ವಿವೇಕ್ ಎಂ, ಬಲಿಪಶುವನ್ನು ದಾಖಲಿಸಲಾಗಿದ್ದ ಸ್ತ್ರೀರೋಗ ವಿಭಾಗದಿಂದ ವೈದ್ಯಕೀಯ-ಕಾನೂನು ದೂರು (ಎಂಎಲ್‌ಸಿ) ಪಡೆದ ನಂತರ ಪೊಲೀಸರು ಇಲ್ಲಿನ ಎಂಕೆಸಿಜಿ ವೈದ್ಯಕೀಯ ಕಾಲೇಜು , ಆಸ್ಪತ್ರೆಗೆ ಧಾವಿಸಿದರು ಎಂದು ಹೇಳಿದರು. ಚಿಕಿತ್ಸೆಯ ಸಮಯದಲ್ಲಿ, ಅಪ್ರಾಪ್ತ ಬಾಲಕಿ 19 ವಾರಗಳ ಗರ್ಭಿಣಿಯಾಗಿದ್ದಳು ಮತ್ತು ಅವಳು ತನ್ನ ಗರ್ಭಪಾತವನ್ನು ಮಾಡಲು ಬಯಸಿದ್ದಳು ಎಂದು ಬೆಳಕಿಗೆ ಬಂದಿತು. ವಿಚಾರಣೆಯ ಸಮಯದಲ್ಲಿ, ಸಂತ್ರಸ್ತೆ ಕಳೆದ 14 ವರ್ಷಗಳಿಂದ ತನ್ನ ಹೆತ್ತವರೊಂದಿಗೆ ಮುಂಬೈನಲ್ಲಿ ವಾಸಿಸುತ್ತಿರುವುದಾಗಿ ಹೇಳಿದ್ದಾಳೆ. ಮಾರ್ಚ್‌ನಲ್ಲಿ ಒಂದು ದಿನ, ಆರೋಪಿಯು ಆಕೆಯನ್ನು ಬಲವಂತವಾಗಿ ತನ್ನ ಮನೆಗೆ ಎಳೆದುಕೊಂಡು ಹೋಗಿ, ಆಕೆಯ ಇಚ್ಛೆಗೆ ವಿರುದ್ಧವಾಗಿ ದೈಹಿಕ ಸಂಬಂಧ ಬೆಳೆಸಿದನು, ಇದರಿಂದಾಗಿ ಆಕೆ ಗರ್ಭಿಣಿಯಾದಳು ಎಂದು ಪೊಲೀಸರು ತಿಳಿಸಿದ್ದಾರೆ.

### 151 ಪ್ರವಾಸಿಗರಿಗೆ ನೆರವು

**ಉತ್ತರಾಖಂಡ:** ಉತ್ತರಕಾಶಿ ಜಿಲ್ಲೆಯ ಧರಾಲಿ ಪ್ರದೇಶದಲ್ಲಿ ಭೂಕುಸಿತ ಮತ್ತು ಪ್ರವಾಹದಿಂದಾಗಿ 151 ಪ್ರವಾಸಿಗರು ಸಿಲುಕಿಕೊಂಡಿದ್ದಾರೆ. ಅವರ ಸುರಕ್ಷತೆಗಾಗಿ ಮಹಾರಾಷ್ಟ್ರ ಸರ್ಕಾರ ಮತ್ತು ಉತ್ತರಾಖಂಡ ಸರ್ಕಾರ ಪ್ರಯತ್ನಗಳನ್ನು ಪ್ರಾರಂಭಿಸಿವೆ. ಇಲ್ಲಿಯವರೆಗೆ 120 ಪ್ರವಾಸಿಗರನ್ನು ಸಂಪರ್ಕಿಸಲಾಗಿದೆ, ಆದರೆ 31 ಪ್ರವಾಸಿಗರಿಗಾಗಿ ಹುಡುಕಾಟ ನಡೆಯುತ್ತಿದೆ ಎನ್ನಲಾಗಿದೆ.

ಉತ್ತರಕಾಶಿ ಜಿಲ್ಲೆಯ ಧರಾಲಿ ಪ್ರದೇಶದಲ್ಲಿ ಭೂಕುಸಿತ ಮತ್ತು ಹಠಾತ್ ಪ್ರವಾಹದಿಂದಾಗಿ ಸಿಲುಕಿರುವ 151 ಪ್ರವಾಸಿಗರ ಸ್ಥಿತಿಯ ಕುರಿತು ಮಹಾರಾಷ್ಟ್ರ ಸರ್ಕಾರವು ಉತ್ತರಾಖಂಡ ಆಡಳಿತದೊಂದಿಗೆ ನಿರಂತರ ಸಂಪರ್ಕದಲ್ಲಿದೆ ಎಂದು ಅಧಿಕಾರಿಗಳು ಈ ಮಾಹಿತಿಯನ್ನು ಹಂಚಿಕೊಂಡಿದ್ದಾರೆ.ಇಲ್ಲಿಯವರೆಗೆ 120 ಪ್ರವಾಸಿಗರೊಂದಿಗೆ ಸಂಪರ್ಕ ಸಾಧಿಸಲಾಗಿದ್ದು, ಅವರು ಇಂಡೋ-ಟಿಬೆಟಿಯನ್ ಗಡಿ ಪೊಲೀಸ್ (ಐಟಿಬಿಪಿ) ಶಿಬಿರದಲ್ಲಿ ಸುರಕ್ಷಿತವಾಗಿದ್ದಾರೆ ಎಂದು ತಿಳಿದುಬಂದಿದೆ ಎಂದು ಅವರು ತಿಳಿಸಿದ್ದಾರೆ.

### ಹುಲಿ ದಾಳಿ ಮಾಲೀಕನ ಜೀವ ಉಳಿಸಿದ ಸಾಕು ನಾಯಿ

**ಸಿಯೋನಿ:** ಮಧ್ಯಪ್ರದೇಶದ ಸಿಯೋನಿ ಜಿಲ್ಲೆಯಲ್ಲಿ ಹುಲಿ ದಾಳಿಯಿಂದ ಸಾಕು ನಾಯಿಯೊಂದು ತನ್ನ ಮಾಲೀಕನ ಜೀವವನ್ನು ಉಳಿಸಿದೆ. ಪಂಚಮ್ ಎಂಬ ಯುವಕ ರಾತ್ರಿ ಬಹಿರ್ದೆಸೆಗೆ ಕಾಡಿಗೆ ಹೋಗಿದ್ದಾಗ ಈ ಘಟನೆ ಸಂಭವಿಸಿದೆ. ಇದ್ದಕ್ಕಿದ್ದಂತೆ, ಹುಲಿ ಅವನ ಮೇಲೆ ದಾಳಿ ಮಾಡಿದೆ, ಆದರೆ ನಾಯಿಯ ಬೊಗಳುವಿಕೆಯಿಂದ ಹುಲಿ ಹೆದರಿ ಓಡಿದೆ. ಪಂಚಮ್ ತನ್ನ ಸಹೋದರನ ಸಾಕು ನಾಯಿಯೊಂದಿಗೆ ಕಾಡಿಗೆ ಹೋಗಿದ್ದಾಗ ಹುಲಿ ಅವನ ಮೇಲೆ ದಾಳಿ ಏಕಾಏಕಿ ಮಾಡಿದೆ. ಪಂಚಮ್ ಒಬ್ಬಂಟಿಯಾಗಿರುವುದನ್ನು ಕಂಡು ಹುಲಿ ಅವನ ಮೇಲೆ ಎರಗಿದೆ ಆದರೆ ಸಾಕು ನಾಯಿ ಹುಲಿಯನ್ನು ನೋಡಿ ಹೆದರದೆ ಸಿಕ್ಕಾಪಟ್ಟೆ ಬೊಗಳೆ ಹುಲಿಯನ್ನು ಅಲ್ಲಿಂದ ಓಡಿಸಿದೆ.

ಹುಲಿ ದಾಳಿಯ ಸಮಯದಲ್ಲಿ, ನಾಯಿ ಬಿಟ್ಟು ಬಿಡದಂತೆ ಬೊಗಳುತ್ತಲೇ ಇತ್ತು, ಇದು ಗ್ರಾಮಸ್ಥರನ್ನು ಅಲ್ಲಿಗೆ ಧಾವಿಸುವಂತೆ ಮಾಡಿದೆ. ಹುಲಿ ಪಂಚಮ್ ಅವರ ತಲೆ ಮತ್ತು ಕೈಯ ಮೇಲೆ ದಾಳಿ ಮಾಡಿದೆ, ಇದರಿಂದಾಗಿ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಹುಲಿ ನರಭಕ್ಷಕವಲ್ಲ ಎಂದು ಅರಣ್ಯಾಧಿಕಾರಿ ಟಿ ಎಸ್ ಸುಲಿಯಾ ಸ್ಪಷ್ಟಪಡಿಸಿದ್ದಾರೆ. ಪಂಚಮ್ ತನ್ನ ನಾಯಿಯೊಂದಿಗೆ ಇರದಿದ್ದರೆ, ಗಂಭೀರ ಗಾಯಗಳಾಗುವ ಅಪಾಯವಿದ್ದು ಎಂದಿದ್ದಾರೆ .ಇಂತಹ ಘಟನೆ ಗ್ರಾಮದಲ್ಲಿ ಇದೇ ಮೊದಲ ಬಾರಿಗೆ ನಡೆದಿದ್ದು, ಸ್ಥಳೀಯ ಜನರಲ್ಲಿ ಭಯವನ್ನು ಸೃಷ್ಟಿಸಿದೆ.

### ಕಾರು ಉರುಳಿ 6 ಮಂದಿ ಸಾವು

**ಚಂಬಾ:** ಹಿಮಾಚಲ ಪ್ರದೇಶದ ಚಂಬಾ ಜಿಲ್ಲೆಯಲ್ಲಿ ಕಾರು ಕಂದಕಕ್ಕೆ ಬಿದ್ದು 6 ಜನರು ದುರಂತ ಸಾವನ್ನಪ್ಪಿದ್ದಾರೆ. ಚಂಬಾ ಜಿಲ್ಲೆಯ ತೀಸಾ ಪ್ರದೇಶದ ಚಾನ್ವಾಸ್ ಮೂಲಕ ಕಾರು ಹಾದುಹೋಗುತ್ತಿದ್ದಾಗ 500 ಮೀಟರ್ ಆಳದ ಕಂದಕಕ್ಕೆ ಕಾರು ನಿಯಂತ್ರಣ ತಪ್ಪಿ ಬಿದ್ದಿದೆ.ಅಪಘಾತ ಎಷ್ಟು ಗಂಭೀರವಾಗಿತ್ತೆಂದರೆ, ಅವರೆಲ್ಲರೂ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಘಟನೆ ತಡರಾತ್ರಿ ನಡೆದಿದೆ. ಸದ್ಯ ಪೊಲೀಸ್ ಮತ್ತು ಜಿಲ್ಲಾ ಆಡಳಿತ ತಂಡಗಳು ಸ್ಥಳದಲ್ಲಿ ಉಪಸ್ಥಿತರಿದ್ದಾರೆ.


ಪ್ರಾಥಮಿಕ ಮಾಹಿತಿಯ ಪ್ರಕಾರ, ಕಾರಿನಲ್ಲಿ ಇಬ್ಬರು ಪುರುಷರು, ಇಬ್ಬರು ಮಹಿಳೆಯರು ಮತ್ತು ಇಬ್ಬರು ಮಕ್ಕಳು ಸೇರಿದಂತೆ ಒಟ್ಟು ಆರು ಜನರಿದ್ದರು. ಕಾರು ನಿಯಂತ್ರಣ ತಪ್ಪಿ ತೀಸಾದ ಭಂಜರಾದುದಿಂದ ಚೆನ್ವಾಸ್ ಶಹವಾ ರಸ್ತೆಯಲ್ಲಿ ಆಳವಾದ ಕಂದಕಕ್ಕೆ ಬಿದ್ದಿದೆ. ಅಪಘಾತದ ಬಗ್ಗೆ ಮಾಹಿತಿ ತಿಳಿದ ತಕ್ಷಣ ಸ್ಥಳೀಯ ಜನರು ಸ್ಥಳಕ್ಕೆ ಧಾವಿಸಿದ್ದಾರೆ. ಪೊಲೀಸರು ಮತ್ತು ಆಡಳಿತಕ್ಕೆ ತಕ್ಷಣವೇ ಮಾಹಿತಿ ನೀಡಲಾಗಿದೆ. ಮೃತರ ಗುರುತು ಇನ್ನೂ ಪತ್ತೆಯಾಗಿಲ್ಲ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಅಪಘಾತದ ಕಾರಣದ ಬಗ್ಗೆ ತನಿಖೆ ಆರಂಭಿಸಿದ್ದಾರೆ.

### ಉಪಗ್ರಹ ಚಿತ್ರದಲ್ಲಿ ಉತ್ತರಕಾಶಿ ಪ್ರವಾಹದ ಭೀಕರ ದೃಶ್ಯ ಸೆರೆ


**ಉತ್ತರಕಾಶಿ:** ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಧರಾಲಿ ಮತ್ತು ಸುಖಿ ಟಾಪ್ ಪ್ರದೇಶಗಳಲ್ಲಿ ಎರಡು ಮೇಘ ಸ್ಫೋಟಗಳು ಭಾರಿ ವಿನಾಶಕ್ಕೆ ಕಾರಣವಾಗಿವೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಧರಾಲಿ ಗ್ರಾಮದ ಸುತ್ತಮುತ್ತಲಿನ ಪ್ರದೇಶದ ಮೊದಲು ಮತ್ತು ನಂತರದ ಉಪಗ್ರಹ ಚಿತ್ರಗಳನ್ನು ಬಿಡುಗಡೆ ಮಾಡಿದೆ. ಈ ಚಿತ್ರಗಳಲ್ಲಿ ವಿನಾಶದ ಭಯಾನಕ ರೂಪವು ಸ್ಪಷ್ಟವಾಗಿ ಗೋಚರಿಸುತ್ತದೆ. ಕಾರ್ಟೋಸ್ಯಾಟ್ ಉಪಗ್ರಹದ ಸಹಾಯದಿಂದ ಇಸ್ರೋ 13 ಜೂನ್ 2024 ಮತ್ತು 7 ಆಗಸ್ಟ್ 2025 ರ ಚಿತ್ರಗಳ ತುಲನಾತ್ಮಕ ವಿಶ್ಲೇಷಣೆಯನ್ನು ನಡೆಸಿದೆ. ಹೊಸ ಚಿತ್ರಗಳು ಖೀರ್ ಗಡ್ ಮತ್ತು ಭಾಗೀರಥಿ ನದಿಯ ಸಂಗಮದಲ್ಲಿ ಸುಮಾರು 20 ಹೆಕ್ಟೇರ್ ಪ್ರದೇಶದಲ್ಲಿ ಫ್ಯಾನ್ ಆಕಾರದ ಶಿಲಾಖಂಡ ರಾಶಿಗಳು ಮತ್ತು ಕೆಸರು ನಿಕ್ಷೇಪವನ್ನು ತೋರಿಸುತ್ತವೆ. ಈ ಶಿಲಾಖಂಡ ರಾಶಿಗಳು ಗ್ರಾಮದ ಹೆಚ್ಚಿನ ಭಾಗವನ್ನು ಆವರಿಸಿರುವ ಶಂಕೆ ವ್ಯಕ್ತವಾಗಿದ್ದು, ಇದರಿಂದಾಗಿ ಅನೇಕ ಮನೆಗಳು ಮತ್ತು ರಚನೆಗಳು ಮಣ್ಣು ಮತ್ತು ಕಲ್ಲುಗಳ ಅಡಿಯಲ್ಲಿ ಹೂತುಹೋಗಿವೆ.

## ಕಾಂತಾರದಲ್ಲಿ ನಟಿಸಿದ್ದ ಟಿ. ಪ್ರಭಾಕರ್ ನಿಧನ

ಕಾಂತಾರ ಚಿತ್ರವನ್ನು ಹೊಂಬಾಳೆ ಫಿಲ್ಮ್ಸ್ ದೊಡ್ಡ ಬಜೆಟ್‌ನಲ್ಲಿ ನಿರ್ಮಾಣ ಮಾಡಿತ್ತು. ಈ ಸಿನಿಮಾಗೆ ನಿರ್ದೇಶನ ಮಾಡಿರೋದು ರಿಷಬ್ ಶೆಟ್ಟಿ. ಅವರು ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿಯೂ ಕಾಣಿಸಿಕೊಂಡಿದ್ದರು. ಸಿನಿಮಾ 2022ರಲ್ಲಿ ರಿಲೀಸ್ ಆಗಿ ಮೆಚ್ಚುಗೆ ಪಡೆಯಿತು. ಈಗ ಚಿತ್ರದ ಕಲಾವಿದರೊಬ್ಬರು ನಿಧನ ಹೊಂದಿದ್ದಾರೆ. ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿದ್ದ 'ಕಾಂತಾರ' ಸಿನಿಮಾ ರಿಲೀಸ್ ಆಗಿ ದೊಡ್ಡ ಮಟ್ಟದಲ್ಲಿ ಯಶಸ್ಸು ಕಂಡಿತ್ತು. ಈ ಚಿತ್ರದಲ್ಲಿ ನಟಿಸಿದ್ದ ಹಿರಿಯ ರಂಗಭೂಮಿ ಕಲಾವಿದ ಟಿ. ಪ್ರಭಾಕರ್ ಹೃದಯಾಘಾತದಿಂದ ಕೊನೆಯುಸಿರು ಎಳೆದಿದ್ದಾರೆ. ಅವರಿಗೆ ಹೃದಯ ಸಂಬಂಧಿ ಕಾಯಿಲೆ ಇದ್ದಿದ್ದರಿಂದ ಹೃದಯಾಘಾತ ಸಂಭವಿಸಿದೆ ಎಂದು ತಿಳಿದು ಬಂದಿದೆ.



'ಕಾಂತಾರ' ಚಿತ್ರವನ್ನು ಹೊಂಬಾಳೆ ಫಿಲ್ಮ್ಸ್ ಸಣ್ಣ ಬಜೆಟ್‌ನಲ್ಲಿ ನಿರ್ಮಾಣ ಮಾಡಿತ್ತು. ಈ ಸಿನಿಮಾಗೆ ನಿರ್ದೇಶನ ಮಾಡಿರೋದು ರಿಷಬ್ ಶೆಟ್ಟಿ. ಅವರು ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿಯೂ ಕಾಣಿಸಿಕೊಂಡಿದ್ದರು. ಸಿನಿಮಾ 2022ರಲ್ಲಿ ರಿಲೀಸ್ ಆಗಿ ಮೆಚ್ಚುಗೆ ಪಡೆಯಿತು. ಟಿ. ಪ್ರಭಾಕರ್ ಕಲ್ಯಾಣಿ ಉಡುಪಿ ಜಿಲ್ಲೆಯ ಹೆಬ್ರಿ ತಾಲ್ಲೂಕಿನ ಪೆರ್ಡೂರು ಮೂಲದವರು. 'ಕಾಂತಾರ' ಚಿತ್ರದಲ್ಲಿ ನ್ಯಾಯವಾದಿಯ ಪಾತ್ರವನ್ನು ಪ್ರಭಾಕರ್ ಅವರು ನಿರ್ವಹಿಸಿದ್ದರು. ಇದೊಂದು ಸಣ್ಣ ಪಾತ್ರವಾಗಿತ್ತು. ಇವರು 'ಬ್ಯಾಂಕ್ ಆಫ್ ಬರೋಡಾ' ಬ್ಯಾಂಕ್‌ನಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತಿ ಹೊಂದಿದ್ದರು. ಪ್ರಭಾಕರ್ ಅವರಿಗೆ ರಂಗಭೂಮಿ ಬಗ್ಗೆ ಸಾಕಷ್ಟು ಆಸಕ್ತಿ ಇತ್ತು.



## ಆಮಿರ್ ಜೊತೆ ಸಿನಿಮಾ

ರಜನೀಕಾಂತ್ ನಟಿಸಿರುವ 'ಕೂಲಿ' ಸಿನಿಮಾನಲ್ಲಿ ಆಮಿರ್ ಖಾನ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇದು ಅವರ ಮೊದಲ ದಕ್ಷಿಣದ ಸಿನಿಮಾ. ಅಂದಹಾಗೆ 'ಕೂಲಿ' ನಿರ್ದೇಶಕ ಲೋಕೇಶ್ ಕನಗರಾಜ್ ಅವರ ನಿರ್ದೇಶನದ ಹೊಸ ಸಿನಿಮಾನಲ್ಲಿ ಆಮಿರ್ ಖಾನ್ ನಟಿಸಲಿದ್ದಾರೆ. ಆದರೆ ಆ ಸಿನಿಮಾದ ಕತೆಯ ಬಗ್ಗೆ ಗೊಂದಲಗಳಿದ್ದು, ಈ ಬಗ್ಗೆ ಲೋಕೇಶ್ ಮಾತನಾಡಿದ್ದಾರೆ. ಬಾಲಿವುಡ್ ನಟ ಆಮಿರ್ ಖಾನ್ ಇದೇ ಮೊದಲ ಬಾರಿಗೆ ದಕ್ಷಿಣದ ಸಿನಿಮಾನಲ್ಲಿ ನಟಿಸುತ್ತಿದ್ದಾರೆ ಅದೂ ಅತಿಥಿ ಪಾತ್ರದಲ್ಲಿ. ಆಮಿರ್ ಖಾನ್ ತನ್ನ ಆತ್ಮೀಯ ಗೆಳೆಯರಾದ ಶಾರುಖ್ ಖಾನ್, ಸಲ್ಮಾನ್ ಖಾನ್ ಸಿನಿಮಾಗಳಲ್ಲಿಯೇ ಅತಿಥಿ ಪಾತ್ರಗಳಲ್ಲಿ ನಟಿಸಿಲ್ಲ. ಆಮಿರ್ ಖಾನ್ ಈ ವರೆಗೆ ಕೇವಲ ನಾಲ್ಕು ಸಿನಿಮಾಗಳಲ್ಲಿ ಮಾತ್ರವೇ ಅತಿಥಿ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದು, ಇದೀಗ ರಜನೀಕಾಂತ್ ನಟನೆಯ 'ಕೂಲಿ' ಸಿನಿಮಾದ ಅತಿಥಿ ಪಾತ್ರವೊಂದರಲ್ಲಿ ನಟಿಸುತ್ತಿದ್ದಾರೆ. ನಿರ್ದೇಶಕ ಲೋಕೇಶ್ ಕನಗರಾಜ್ ಮತ್ತು ರಜನೀಕಾಂತ್ ಅವರ ಕಾರಣಕ್ಕೆ ಅವರು ಈ ಪಾತ್ರದಲ್ಲಿ ನಟಿಸಲು ಒಪ್ಪಿಕೊಂಡಿದ್ದಾರೆ. ಅಂದಹಾಗೆ ಲೋಕೇಶ್ ಕನಗರಾಜ್ ಅವರು ಆಮಿರ್ ಖಾನ್‌ಗಾಗಿ ಸಿನಿಮಾ ಒಂದನ್ನು ಸಹ ನಿರ್ದೇಶನ ಮಾಡಲಿದ್ದಾರೆ. 'ಕೂಲಿ' ಸಿನಿಮಾ ಸಮಯದಲ್ಲಿ ಆಮಿರ್ ಖಾನ್ ಅವರೇ ಲೋಕೇಶ್ ಅವರ ಬಳಿ, ತಮಗೆ ಯಾವುದಾದರೂ ಕತೆ ಇದ್ದರೆ ಹೇಳುವಂತೆ ಕೇಳಿದ್ದರಂತೆ. ಈಗ ಇಬ್ಬರೂ ಒಟ್ಟಿಗೆ ಸಿನಿಮಾ ಮಾಡುವುದು ಖಾತ್ರಿ ಆಗಿದೆ. ಆದರೆ ಸಿನಿಮಾದ ಕತೆ ಏನಾಗಿರಲಿದೆ ಎಂಬುದು ಕುತೂಹಲ ಕೆರಳಿಸಿದೆ.

## ರವಿಶಂಕರ ಗುರೂಜಿ ಪಾತ್ರದಲ್ಲಿ ವಿಕ್ರಾಂತ್ ಮಾಸ್ಸಿ, ಚಿತ್ರೀಕರಣ ಶುರು


ಜನಪ್ರಿಯ ಧಾರ್ಮಿಕ ಗುರು, ವಿಶ್ವಶಾಂತಿ ಪ್ರತಿಪಾದಕ ರವಿ ಶಂಕರ್ ಗುರೂಜಿ ಜೀವನ ಆಧರಿಸಿದ ಸಿನಿಮಾ ಒಂದು ಸೆಟ್ಟೇರಿದೆ. ಸಿನಿಮಾದ ಚಿತ್ರೀಕರಣ ಕೊಲಂಬಿಯಾನಲ್ಲಿ ಶುರುವಾಗಿದ್ದು, ತಮ್ಮ ಅತ್ಯುತ್ತಮ ನಟನೆಗಾಗಿ ಇತ್ತೀಚೆಗಷ್ಟೆ ರಾಷ್ಟ್ರಪ್ರಶಸ್ತಿ ಪಡೆದಿರುವ ನಟ ವಿಕ್ರಾಂತ್ ಮಾಸ್ಸಿ ಅವರು ರವಿ ಶಂಕರ್ ಗುರೂಜಿ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಭಾರತದಲ್ಲಿ ಮಾಫಿಯಾ ಡಾನ್‌ಗಳ ಬಗ್ಗೆ, ಅಪರಾಧ ಹಿನ್ನೆಲೆಯವರ ಬಗ್ಗೆ ಸಿನಿಮಾಗಳು ನಿರ್ಮಾಣ ಆಗುವುದು ಹೆಚ್ಚು. ಅದರಲ್ಲೂ ವಿಲನ್‌ಗಳನ್ನು ಹೀರೋಗಳ ರೀತಿಯಲ್ಲಿ ತೋರಿಸುವ ಸಿನಿಮಾಗಳು, ವೆಬ್ ಸರಣಿಗಳೇ ಹೆಚ್ಚು. ಅದನ್ನು ಹೊರತುಪಡಿಸಿದರೆ ಕ್ರೀಡಾ ತಾರೆಗಳ ಬಗ್ಗೆ ಹಾಗೂ ರಾಜಕಾರಣಿಗಳ ಜೀವನದ ಬಗ್ಗೆ ಹೆಚ್ಚು ಸಿನಿಮಾಗಳು ನಿರ್ಮಾಣವಾಗುತ್ತವೆ. ಆದರೆ ಇದೀಗ ಧಾರ್ಮಿಕ ಗುರುಗಳ ಬಗ್ಗೆ ಸಿನಿಮಾ ಮಾಡಲಾಗುತ್ತಿದೆ. ಹಲವಾರು ಭಕ್ತರನ್ನು ಹೊಂದಿರುವ ರವಿಶಂಕರ ಗುರೂಜಿ ಅವರ ಜೀವನ ಆಧರಿಸಿದ ಸಿನಿಮಾ ನಿರ್ಮಾಣ ಆಗುತ್ತಿದ್ದು ಚಿತ್ರೀಕರಣ ಶುರುವಾಗಿದೆ. ರವಿಶಂಕರ ಗುರೂಜಿ ಜೀವನ ಆಧರಿಸಿದ ಸಿನಿಮಾನಲ್ಲಿ ಗುರೂಜಿ ಅವರ ಪಾತ್ರದಲ್ಲಿ ವಿಕ್ರಾಂತ್ ಮಾಸ್ಸಿ ನಟಿಸಲಿದ್ದಾರೆ. '12 ಫೇಲ್' ಸಿನಿಮಾದ ಅತ್ಯುತ್ತಮ ನಟನೆಗೆ ಇತ್ತೀಚೆಗಷ್ಟೆ ವಿಕ್ರಾಂತ್ ಮಾಸ್ಸಿಗೆ ರಾಷ್ಟ್ರಪ್ರಶಸ್ತಿ ಸಹ ಲಭಿಸಿದೆ. ಅದ್ಭುತವಾದ ನಟರಾದ ವಿಕ್ರಾಂತ್, ಇದೇ ಮೊದಲ ಬಾರಿಗೆ ನಿಜ ವ್ಯಕ್ತಿಯ ಪಾತ್ರದಲ್ಲಿ ನಟಿಸಲಿದ್ದಾರೆ. ಗುರೂಜಿಯ ಜೀವನ ಆಧರಿಸಿದ ಸಿನಿಮಾಕ್ಕೆ 'ವೈಟ್' ಎಂದು ಹೆಸರಿಡಲಾಗಿದ್ದು, ಸಿನಿಮಾದ ಚಿತ್ರೀಕರಣ ದಕ್ಷಿಣ ಅಮೆರಿಕದ ಕೊಲಂಬಿಯಾನಲ್ಲಿ ಶುರುವಾಗಿದೆ. ಕೊಲಂಬಿಯಾನಲ್ಲಿ ನಡೆದ ನಾಗರೀಕ ಯುದ್ಧದ ಕತೆ ಹಾಗೂ ಅದನ್ನು ನಿವಾರಿಸುವಲ್ಲಿ ರವಿಶಂಕರ ಗುರೂಜಿ ವಹಿಸಿದ ಪಾತ್ರದ ಕತೆಯನ್ನು ಸಿನಿಮಾ ಒಳಗೊಂಡಿರಲಿದೆ. ಕೊಲಂಬಿಯಾ ಮಾತ್ರವೇ ಅಲ್ಲದೆ ವಿಶ್ವ ಶಾಂತಿಗೆ ರವಿಶಂಕರ ಗುರೂಜಿಯವರ ಇನ್ನಿತರೆ ಕೆಲವು ಪ್ರಯತ್ನಗಳ ಬಗ್ಗೆಯೂ ಈ ಸಿನಿಮಾ ಬೆಳಕು ಚೆಲ್ಲಲಿದೆ.

ವಿಶ್ವಶಾಂತಿಗೆ ರವಿಶಂಕರ ಗುರೂಜಿ ಪ್ರಯತ್ನ



## ರಾತ್ರೋರಾತ್ರಿ ವಿಷ್ಣುವರ್ಧನ್ ಸ್ಮಾರಕ ನೆಲಸಮ

ಅಭಿಮಾನ್ ಸ್ಟುಡಿಯೋದಲ್ಲಿದ್ದ ವಿಷ್ಣುವರ್ಧನ್ ಅವರ ಸ್ಮಾರಕವನ್ನು ನೆಲಸಮ ಮಾಡಲಾಗಿದೆ. ವರಮಹಾಲಕ್ಷ್ಮಿ ಹಬ್ಬದ ದಿನವೇ ನಿರ್ದೇಶಕ ರವಿ ಶ್ರೀವತ್ಸ ಅವರು ಈ ನೋವಿನ ಸುದ್ದಿ ತಿಳಿಸಿದ್ದಾರೆ. ವಿಷ್ಣುವರ್ಧನ್ ಸಮಾಧಿ ಸ್ಥಳಕ್ಕೆ ಅಭಿಮಾನಿಗಳಿಗೆ ಪ್ರವೇಶ ಕೂಡ ನೀಡುತ್ತಿಲ್ಲ. ಆದ್ದರಿಂದ ರವಿ ಶ್ರೀವತ್ಸ ಅವರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ನಟ ವಿಷ್ಣುವರ್ಧನ್ ಅವರ ಸ್ಮಾರಕದ ವಿಚಾರವಾಗಿ ಮೊದಲಿನಿಂದಲೂ ಅಭಿಮಾನಿಗಳಿಗೆ ಬೇಸರ ಇತ್ತು. ಈಗ ಇನ್ನೊಂದು ನೋವಿನ ಘಟನೆ ನಡೆದಿದೆ. ಬೆಂಗಳೂರಿನ ಅಭಿಮಾನ್ ಸ್ಟುಡಿಯೋದಲ್ಲಿ ಇದ್ದ ವಿಷ್ಣುವರ್ಧನ್ ಅವರ ಸ್ಮಾರಕವನ್ನು ನೆಲಸಮ ಮಾಡಲಾಗಿದೆ. ರಾತ್ರೋರಾತ್ರಿ ಸಮಾಧಿಯನ್ನು ತೆರವುಗೊಳಿಸಲಾಗಿದೆ. ಈ ಸ್ಥಳಕ್ಕೆ ನಿರ್ದೇಶಕ ರವಿ ಶ್ರೀವತ್ಸ ಅವರು ಇಂದು (ಆಗಸ್ಟ್ 8) ಭೇಟಿ ನೀಡಿದ್ದಾರೆ. ವಿಷ್ಣುವರ್ಧನ್ ಅವರ ಸಮಾಧಿಯನ್ನು ನೆಲಸಮ ಮಾಡಿದ ಕಾರಣ ರವಿ ಶ್ರೀವತ್ಸ ಅವರು ಕಣ್ಣೀರು ಹಾಕಿದ್ದಾರೆ. ವರಮಹಾಲಕ್ಷ್ಮಿ ಹಬ್ಬದ ದಿನವೇ ಅವರು ಅಭಿಮಾನಿಗಳಿಗೆ ತೀವ್ರ ನೋವಿನ ಸುದ್ದಿಯನ್ನು ತಿಳಿಸಿದ್ದಾರೆ.



ಅಭಿಮಾನ್ ಸ್ಟುಡಿಯೋದಲ್ಲಿ ಇರುವ ವಿಷ್ಣುವರ್ಧನ್ ಸಮಾಧಿ ಸ್ಥಳಕ್ಕೆ ಅಭಿಮಾನಿಗಳಿಗೆ ಪ್ರವೇಶ ಸಿಗುತ್ತಿಲ್ಲ. ಈಗಾಗಲೇ ಮೈಸೂರಿನಲ್ಲಿ ವಿಷ್ಣುವರ್ಧನ್ ಅವರ ಸ್ಮಾರಕ ನಿರ್ಮಾಣ ಆಗಿದೆ. ಆದರೂ ಕೂಡ ಅಂತ್ಯಸಂಸ್ಕಾರ ನಡೆದ ಸ್ಥಳದ ಬಗ್ಗೆ ಅಭಿಮಾನಿಗಳಿಗೆ ಭಾವನಾತ್ಮಕ ನಂಟು ಇತ್ತು. ಆದರೆ ಈಗ ಸಮಾಧಿ ಸ್ಥಳವನ್ನು ನೆಲಸಮ ಮಾಡಿರುವುದಕ್ಕೆ ರವಿ ಶ್ರೀವತ್ಸ ಅವರು ಅಳುತ್ತಾ ಫೇಸ್ ಬುಕ್ ಲೈವ್ ಬಂದಿದ್ದಾರೆ. 'ನಮ್ಮ ದೇವರ ಗುಡಿಯನ್ನು ಇಂದು ನೆಲಸಮ ಮಾಡಿದ್ದಾರೆ.



ಶ್ರೀಲೀಲಾ, ರಶ್ಮಿಕಾಗೆ ಇಲ್ಲ ಛಾನ್ಸ್

## ಅಜಿತ್ ಚಿತ್ರಕ್ಕೆ ಜೊತೆಯಾದ ಮತ್ತೊರ್ವ ಕನ್ನಡತಿ

ತಮಿಳಿನ ಸ್ಟಾರ್ ನಟ ಅಜಿತ್ ಕುಮಾರ್ ತಮ್ಮ ಮೋಟಾರ್ ರೇಸಿಂಗ್ ಜೊತೆಗೆ ಸಿನಿಮಾಗಳಲ್ಲೂ ನಟಿಸುತ್ತಾ ಸಾಗುತ್ತಿದ್ದಾರೆ. ಅಜಿತ್ ಕುಮಾರ್ ಅವರ ಮುಂದಿನ ಸಿನಿಮಾಕ್ಕೆ ಕನ್ನಡತಿ ನಾಯಕಿಯಾಗಿ ಆಯ್ಕೆ ಆಗಿದ್ದಾರೆ. ಆದರೆ ಅದು ಶ್ರೀಲೀಲಾ ಅಥವಾ ರಶ್ಮಿಕಾ ಮಂದಣ್ಣ ಅಲ್ಲ. ಮತ್ಯಾರು ಇಲ್ಲಿದೆ ನೋಡಿ ಮಾಹಿತಿ... ಅಜಿತ್ ಕುಮಾರ್ ನಟಿಸಿದ ಕೊನೆಯ ಚಿತ್ರ ಗುಡ್ ಬ್ಯಾಡ್ ಅಗ್ಲಿ. ಈ ಚಿತ್ರವನ್ನು ಮೈತ್ರಿ ಮೂವಿ ಮೇಕರ್ಸ್ ನಿರ್ಮಿಸಿದ್ದು, ಅಧಿಕ್ ರವಿಚಂದ್ರನ್ ನಿರ್ದೇಶಿಸಿದ್ದಾರೆ. ಈ ಚಿತ್ರ ಏಪ್ರಿಲ್ 10ರಂದು ಬಿಡುಗಡೆಯಾಯಿತು. ಈ ಚಿತ್ರದಲ್ಲಿ ನಟ ಅಜಿತ್ ಕುಮಾರ್ ಗ್ಯಾಂಗ್‌ಸ್ಟರ್ ಪಾತ್ರವನ್ನು ನಿರ್ವಹಿಸಿದ್ದಾರೆ. ನಟಿ ತ್ರಿಶಾ ಕೃಷ್ಣನ್ ಅವರ ಜೊತೆ ನಟಿಸಿದ್ದಾರೆ. ಅಜಿತ್ ತಮ್ಮ ಮುಂದಿನ ಚಿತ್ರಕ್ಕೆ ಅಧಿಕ್ ರವಿಚಂದ್ರನ್ ನಿರ್ದೇಶನ ಇರಲಿದೆ. ಈ ಚಿತ್ರದ ನಾಯಕಿಯರ ಬಗ್ಗೆ ಚರ್ಚೆ ಜೋರಾಗಿದೆ. ಸದ್ಯ ವೈರಲ್ ಆಗುತ್ತಿರುವ ಮಾಹಿತಿಯ ಪ್ರಕಾರ, ನಟಿ ಶ್ರೀಲೀಲಾ ಅಜಿತ್ ಕುಮಾರ್ ಅವರ 64ನೇ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಲಿದ್ದಾರೆ ಎಂದು ಹೇಳಲಾಗಿತ್ತು. ಆದರೆ, ಈ ಪಾತ್ರ ಶ್ರೀನಿಧಿ ಶೆಟ್ಟಿಗೆ ಹೋಗಿದೆ ಎಂಬ ವರದಿಗಳೂ ಇವೆ. ಈ ಮಾಹಿತಿ ಎಷ್ಟರ ಮಟ್ಟಿಗೆ ನಿಜವೋ ತಿಳಿದಿಲ್ಲ. ಈ ಚಿತ್ರದ ಬಗ್ಗೆ ಅಧಿಕೃತ ಘೋಷಣೆಗಳು ಆಗಸ್ಟ್ 2025ರ ಅಂತ್ಯದ ವೇಳೆಗೆ ಹೊರಬೀಳಲಿವೆ ಎಂದು ಹೇಳಲಾಗುತ್ತಿದೆ. ನಿರ್ದೇಶಕ ಅಧಿಕ್ ರವಿಚಂದ್ರನ್ ಅವರು ಈಗಾಗಲೇ ಹಲವು ಹಿಟ್ ಚಿತ್ರಗಳನ್ನು ನೀಡಿದವರು. ಅವರು ಅಜಿತ್ ಜೊತೆ ಕೈ ಜೋಡಿಸಿದ್ದು, ದೊಡ್ಡ ಯಶಸ್ಸನ್ನು ನಿರೀಕ್ಷಿಸಲಾಗಿದೆ. ಸಂಗೀತ ಸಂಯೋಜಕ ಅನಿರುದ್ಧ್ ರವಿಚಂದರ್ ಅಜಿತ್ ಚಿತ್ರಕ್ಕೆ ಸಂಗೀತ ಸಂಯೋಜಿಸಲಿದ್ದಾರೆ. ಅಜಿತ್ ಕುಮಾರ್- ಅನಿರುದ್ಧ್ ಈಗಾಗಲೇ 'ವಿದಮುಯರ್ಚಿ', 'ವಿವೇಗಂ' ಮತ್ತು 'ವೇದಾಲಂ' ಚಿತ್ರದಲ್ಲಿ ಒಟ್ಟಾಗಿ ಕೆಲಸ ಮಾಡಿದ್ದಾರೆ. 'ಗುಡ್ ಬ್ಯಾಡ್ ಅಗ್ಲಿ' ಚಿತ್ರದಲ್ಲಿ ಪ್ರಿಯಾ ಪ್ರಕಾಶ್ ವಾರಿಯರ್ ನಟಿಸಿದ್ದರು. ಈ ಪಾತ್ರದಲ್ಲಿ ಶ್ರೀಲೀಲಾ ಅವರು ಕಾಣಿಸಿಕೊಳ್ಳಬೇಕಿತ್ತು. ಆದರೆ, ಈ ಪಾತ್ರ ಪ್ರಿಯಾ ಪಾಲಾಯಿತು.

## 23 ವಿಕೆಟ್ ಉರುಳಿಸಲು ಮೊಹಮ್ಮದ್ ಸಿರಾಜ್ ಓಡಿದ ಕಿ.ಮೀ

31 ಕಿ.ಮೀ.ಗಿಂತ ಹೆಚ್ಚು ಓಡಿದರೇ?

ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಮೊಹಮ್ಮದ್ ಸಿರಾಜ್ ಅವರ ಅದ್ಭುತ ಪ್ರದರ್ಶನ ತಂಡವನ್ನು ಸರಣಿ ಸೋಲಿನಿಂದ ಪಾರು ಮಾಡಿತು ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಇಡೀ ಸರಣಿಯಲ್ಲಿ 23 ವಿಕೆಟ್‌ಗಳನ್ನು ಪಡೆದ ಸಿರಾಜ್, 185.3 ಓವರ್‌ಗಳನ್ನು ಬೌಲ್ ಮಾಡಲು 31 ಕಿಮೀಗಿಂತ ಹೆಚ್ಚು ದೂರ ಓಡಿದ್ದಾರೆ ಎಂಬುದು ಆಶ್ಚರ್ಯಕರ ಸಂಗತಿ.

ಟೀಂ ಇಂಡಿಯಾ ಇಂಗ್ಲೆಂಡ್ ಪ್ರವಾಸವನ್ನು ಸರಣಿ ಗೆಲುವಿನೊಂದಿಗೆ ಮುಗಿಸಲು ಸಾಧ್ಯವಾಗದಿದ್ದರೂ ಡ್ರಾದೊಂದಿಗೆ ಕೊನೆಗೊಳಿಸುವಲ್ಲಿ ಯಶಸ್ವಿಯಾಯಿತು. ಯುವ ಹಾಗೂ ಅನಾನುಭವಿ ಆಟಗಾರರಿಂದ ಕೂಡಿದ್ದ ಶುಭ್‌ಮನ್ ಗಿಲ್ ಪಡೆ ಅನುಭವಿ ಆಂಗ್ಲರನ್ನು ಅವರ ನೆಲದಲ್ಲೇ ಸರಣಿ ಗೆಲ್ಲದಂತೆ ತಡೆಯಿತು. ಇಡೀ ಸರಣಿಯಲ್ಲಿ ಭಾರತ ತಂಡ ಸಾಂಘಿಕ ಪ್ರದರ್ಶನ ನೀಡಿತು. ಅದರಲ್ಲೂ ಅನುಭವಿ ಆಟಗಾರರ ಪ್ರದರ್ಶನ ಎಲ್ಲರನ್ನೂ ಮೆಚ್ಚಿಸಿತು. ಈ ಅನುಭವಿ ಆಟಗಾರರಲ್ಲಿ ವೇಗಿ ಮೊಹಮ್ಮದ್ ಸಿರಾಜ್ ಕೂಡ ಸೇರಿದ್ದರು. ಬುಮ್ರಾ ಅನುಪಸ್ಥಿತಿಯಲ್ಲಿ ಓವಲ್ ಟೆಸ್ಟ್ ಪಂದ್ಯದಲ್ಲಿ ತಂಡದ ಬೌಲಿಂಗ್ ವಿಭಾಗವನ್ನು ಮುನ್ನಡೆಸಿದ ಸಿರಾಜ್, ತಂಡಕ್ಕೆ ಐತಿಹಾಸಿಕ ಗೆಲುವು ತಂದುಕೊಡುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಅದರಲ್ಲೂ ಇಡೀ ಸರಣಿಯನ್ನು ಆಡಿದ ಟೀಂ ಇಂಡಿಯಾದ ಕೆಲವೇ ಕೆಲವು ಆಟಗಾರರಲ್ಲಿ ಸಿರಾಜ್ ಕೂಡ ಒಬ್ಬರು. ವೇಗಿಗಳಿಗೆ ಹೆಚ್ಚು ನೆರವಾಗುವ ಇಂಗ್ಲೆಂಡ್ ಪಿಚ್‌ಗಳಲ್ಲಿ ಸಿರಾಜ್ ನೀಡಿದ ಪ್ರದರ್ಶನ ಎಲ್ಲರ ಗಮನ ಸೆಳೆದಿತ್ತು. ಇದರ ಜೊತೆಗೆ ತಂಡಕ್ಕೆ ಅವಶ್ಯಕತೆ ಇದ್ದಾಗಲೆಲ್ಲ ದಾಳಿಗಿಳಿದಿದ್ದ ಸಿರಾಜ್ ಆಡಿದ ಐದು ಪಂದ್ಯಗಳಲ್ಲಿ ಒಟ್ಟು 185.3 ಓವರ್ ಗಳನ್ನು ಬೌಲ್ ಮಾಡಿದರು. ಅಂದರೆ ಸಿರಾಜ್ ಈ 1113 ಎಸೆತಗಳನ್ನು ಬೌಲ್ ಮಾಡಲು ಎಷ್ಟು ಕಿ.ಮೀ ರನ್ ಅಪ್ ಮಾಡಿದರು ಎಂಬುದು ಇದೀಗ ಸೋಶಿಯಲ್ ಮೀಡಿಯಾದಲ್ಲಿ ಸಖತ್ ಸದ್ದು ಮಾಡುತ್ತಿದೆ.

ಮೇಲೆ ಹೇಳಿದಂತೆ ಇಂಗ್ಲೆಂಡ್ ವಿರುದ್ಧದ 5 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಮೊಹಮ್ಮದ್ ಸಿರಾಜ್ ಒಟ್ಟು 185.3 ಓವರ್‌ಗಳನ್ನು ಬೌಲ್ ಮಾಡಿದ್ದಾರೆ. ಅಂದರೆ ಸಿರಾಜ್ 25 ದಿನಗಳಲ್ಲಿ 1113 ಎಸೆತಗಳನ್ನು ಬೌಲ್ ಮಾಡಿದ್ದಾರೆ. ಇಷ್ಟು ಎಸೆತಗಳನ್ನು ಎಸೆಯಲು ಸಿರಾಜ್ 31 ಕಿ.ಮೀ.ಗಿಂತ ಹೆಚ್ಚು ದೂರ ಓಡಿರುವುದು ಇಲ್ಲಿ ಗಮನಾರ್ಹ.

ಈಗ ನಾವು ಸಿರಾಜ್ ಅವರ ರನ್-ಅಪ್ 14 ಮೀಟರ್ ಎಂದು ತೆಗೆದುಕೊಂಡರೆ, ಪ್ರತಿ ಚೆಂಡನ್ನು ಎಸೆಯಲು ಸಿರಾಜ್ 28 ಮೀಟರ್ ದೂರವನ್ನು ಕ್ರಮಿಸಿದಂತಾಗುತ್ತದೆ. ಈಗ ಸಿರಾಜ್ ಪ್ರತಿ ಚೆಂಡಿಗೆ 28 ಮೀಟರ್ ಓಡಿದರೆ, ಅದರ ಪ್ರಕಾರ, ಅವರು 1113 ಎಸೆತಗಳನ್ನು ಎಸೆಯಲು 31 ಕಿಲೋಮೀಟರ್‌ಗಳಿಗಿಂತಲೂ ಹೆಚ್ಚು ದೂರವನ್ನು ಕ್ರಮಿಸಿದ್ದಂತಾಗಿದೆ.

23 ವಿಕೆಟ್ ಉರುಳಿಸಿದ ಸಿರಾಜ್ ಟೆಸ್ಟ್ ಸರಣಿಯಲ್ಲಿ ಮೊಹಮ್ಮದ್ ಸಿರಾಜ್ ಬೌಲಿಂಗ್‌ನಲ್ಲಿ ಎಷ್ಟು ದೂರ ಕ್ರಮಿಸಿದ್ದಾರೆ ಎಂಬುದನ್ನು ನಾವು ಈಗಷ್ಟೇ ಅಳೆದಿದ್ದೇವೆ. ಇದನ್ನು ಹೊರತುಪಡಿಸಿ ಬ್ಯಾಟಿಂಗ್ ಮತ್ತು ಫೀಲ್ಡಿಂಗ್‌ನಲ್ಲಿ ಸಿರಾಜ್ ಎಷ್ಟು ಕಿಲೋಮೀಟರ್ ಓಡಿದ್ದಾರೆ ಎಂಬುದನ್ನು ನೀವೇ ಊಹಿಸಿ. ಇಂಗ್ಲೆಂಡ್‌ನಲ್ಲಿ ಆಡಿದ ಐದು ಪಂದ್ಯಗಳಲ್ಲಿ ಸಿರಾಜ್ 23 ವಿಕೆಟ್‌ಗಳನ್ನು ಪಡೆಯಲು ಎಷ್ಟು ಪರಿಶ್ರಮ ಮತ್ತು ಬೆವರು ಹರಿಸಿದ್ದಾರೆ ಎಂಬುದನ್ನು ನಾವು ಇಲ್ಲಿ ಗಮನಿಸಬಹುದು.



## ಕೊಹ್ಲಿ ನಿಂಗ್ ವಯಸ್ಸಾಯ್ತೋ



ಬಿಳಿ ಗಡ್ಡ, ದಣಿದ ಕಣ್ಣುಗಳು; ಏಕದಿನಕ್ಕೂ ವಿದಾಯ

ವಿರಾಟ್ ಕೊಹ್ಲಿ ಅವರ ಬಿಳಿ ಗಡ್ಡದ ಫೋಟೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಇದರಿಂದ ಅವರು ಏಕದಿನ ಕ್ರಿಕೆಟ್‌ಗೆ ವಿದಾಯ ಹೇಳುವ ಸಾಧ್ಯತೆಯ ಬಗ್ಗೆ ಚರ್ಚೆಗಳು ಹುಟ್ಟಿಕೊಂಡಿವೆ. ಆದರೆ ಕೊಹ್ಲಿ ಅವರು ತಮ್ಮ ಗಡ್ಡಕ್ಕೆ ಬಣ್ಣ ಹಚ್ಚುತ್ತಿರುವುದಾಗಿ ಹೇಳಿದ್ದಾರೆ. ಅಕ್ಟೋಬರ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧದ ಏಕದಿನ ಸರಣಿಯಲ್ಲಿ ಅವರನ್ನು ನೋಡಬಹುದು. ಟಿ20 ಹಾಗೂ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿರುವ ಕಿಂಗ್ ಕೊಹ್ಲಿ ಏಕದಿನ ಮಾದರಿಯಲ್ಲಿ ಮಾತ್ರ ಭಾರತದ ಪರ ಕಣಕ್ಕಿಳಿಯಲಿದ್ದಾರೆ. ಹೀಗಾಗಿ ಕೊಹ್ಲಿ ಆಟವನ್ನು ಕಣ್ತುಂಬಿಕೊಳ್ಳಲು ಅವರ ಅಭಿಮಾನಿಗಳು ಕಾಯುತ್ತ ಕುಳಿತಿದ್ದಾರೆ. ಆದರೆ ಮುಂದಿನ ಅಕ್ಟೋಬರ್‌ವರೆಗೂ ಕೊಹ್ಲಿಯನ್ನು ಮೈದಾನದಲ್ಲಿ ನೋಡಲು ಸಾಧ್ಯವಿಲ್ಲ. ಆದರೆ ಇದೀಗ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿರುವ ಕೊಹ್ಲಿಯ ಫೋಟೋವನ್ನು ನೋಡಿದವರು, ವಿರಾಟ್ ಇಷ್ಟರಲ್ಲೇ ಏಕದಿನ ಮಾದರಿಗೂ ವಿದಾಯ ಹೇಳಿದರೆ ಅಚ್ಚರಿ ಪಡಬೇಕಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ.

ಅಭಿಮಾನಿಗಳ ಈ ಅಭಿಪ್ರಾಯಕ್ಕೂ ಕಾರಣವಿದೆ. ಅದೇನೆಂದರೆ ಮೈದಾನದಲ್ಲಿ ಚಿರ ಯುವಕನಂತೆ ಅಬ್ಬರಿಸುವ ಕೊಹ್ಲಿ, ತಮ್ಮ ಫಿಟ್ನೆಸ್ ಮೂಲಕವೇ ತಮ್ಮ ನಿಜವಾದ ವಯಸ್ಸನ್ನು ಮರೆಮಾಚಿದ್ದಾರೆ. ಹೀಗಾಗಿ ಕೊಹ್ಲಿಯ ಆಟವನ್ನು ನೋಡಿದವರು, ಅವರು ಇನ್ನು 10 ವರ್ಷ ಕ್ರಿಕೆಟ್ ಆಡಬಹುದು ಎಂಬ ಅಭಿಪ್ರಾಯ ಹೊರಹಾಕುತ್ತಾರೆ. ಇದಕ್ಕೆ ಕೊಹ್ಲಿ ಕೂಡ ಎಂದಿಗೂ ಮೈದಾನದಲ್ಲಿ ಸುಸ್ತಾಗಿ ಅಥವಾ ಆಟದ ನಡುವೆ ಇಂಜುರಿಗೊಂಡು ಮೈದಾನದಿಂದ ಹೊರನಡೆದಿದ್ದನ್ನು ನೋಡಿದ್ದು ತುಂಬಾ ವಿರಳ.

ಹೀಗಾಗಿ ಕೊಹ್ಲಿಯಲ್ಲಿ ಇನ್ನು ಸಾಕಷ್ಟು ಕ್ರಿಕೆಟ್ ಉಳಿದಿದೆ ಎನ್ನುವುದರಲ್ಲಿ ತಪ್ಪಿಲ್ಲ. ಆದರೆ ಇದೀಗ ಸೋಶಿಯಲ್ ಮೀಡಿಯಾದಲ್ಲಿ ಕೊಹ್ಲಿಯ ಫೋಟೋವೊಂದು ವೈರಲ್ ಆಗಿದ್ದು, ಅದರಲ್ಲಿ ಕೊಹ್ಲಿ ವಯಸ್ಸಾದವರಂತೆ ಕಾಣುತ್ತಿದ್ದಾರೆ. ಪ್ರಸ್ತುತ ಕೊಹ್ಲಿ ತಮ್ಮ ಮಡದಿ ಮಕ್ಕಳೊಂದಿಗೆ ಲಂಡನ್‌ನಲ್ಲಿ ವಾಸವಾಗಿದ್ದಾರೆ. ಈ ನಡುವೆ ಅವರ ಫೋಟೋವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಇದರಲ್ಲಿ ಕೊಹ್ಲಿಯ ಗಡ್ಡ ಹಾಗೂ ಮೀಸೆಯಲ್ಲಿ ಬಿಳಿ ಕೂದಲುಗಳು ಹೇರಳವಾಗಿರುವುದನ್ನು ಕಾಣಬಹುದು. ಹಾಗೆಯೇ ಕೊಹ್ಲಿಯ ಕಣ್ಣುಗಳು ಕೂಡ ಕಾಂತಿ ರಹಿತವಾಗಿರುವುದನ್ನು ನಾವು ಗಮನಿಸಬಹುದು. ಕೊಹ್ಲಿಯ ಈ ಫೋಟೋವನ್ನು ನೋಡಿದವರು ಕೊಹ್ಲಿ ಇಷ್ಟರಲ್ಲೇ ಏಕದಿನ ಮಾದರಿಗೂ ವಿದಾಯ ಹೇಳಬಹುದು ಎನ್ನುತ್ತಿದ್ದಾರೆ. ಇನ್ನು ಕೆಲವರು ಕೊಹ್ಲಿ ನಿಂಗ್ ವಯಸ್ಸಾಯ್ತೋ ಎನ್ನುತ್ತಿದ್ದಾರೆ. ವಾಸ್ತವವಾಗಿ ಕಳೆದ ಜುಲೈ 10 ರಂದು ಯುವರಾಜ್ ಸಿಂಗ್ ಲಂಡನ್‌ನಲ್ಲಿ ಒಂದು ಕಾರ್ಯಕ್ರಮವನ್ನು ಆಯೋಜಿಸಿದ್ದರು, ಅದರಲ್ಲಿ ವಿರಾಟ್ ಕೊಹ್ಲಿ ಕೂಡ ಇದ್ದರು. ಈ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಕೊಹ್ಲಿ 'ನಾನು ಎರಡು ದಿನಗಳ ಹಿಂದೆಯಷ್ಟೇ ನನ್ನ ಗಡ್ಡಕ್ಕೆ ಬಣ್ಣ ಹಚ್ಚಿದ್ದೇನೆ. ಈಗ ಪ್ರತಿ ನಾಲ್ಕು ದಿನಗಳಿಗೊಮ್ಮೆ ನನ್ನ ಗಡ್ಡಕ್ಕೆ ಬಣ್ಣ ಹಚ್ಚುವ ಸಮಯ ಬಂದಿದೆ'' ಎಂದು ಹೇಳಿದ್ದರು. ಕೊಹ್ಲಿಯ ಈ ಹೇಳಿಕೆ ಸಾಮಾಜಿಕ ಜಾಲತಾಣಗಳಲ್ಲಿ ಸಂಚಲನ ಮೂಡಿಸಿತ್ತು. ಇದೀಗ ಕೊಹ್ಲಿ ಬಿಳಿ ಗಡ್ಡದೊಂದಿಗೆ ಕಾಣಿಸಿಕೊಂಡಿರುವುದು ಕೂಡ ಸೋಶಿಯಲ್ ಮೀಡಿಯಾದಲ್ಲಿ ಭಾರಿ ವೈರಲ್ ಆಗುತ್ತಿದೆ.

## ಸಿಕ್ಸರ್‌ಗಳಿಂದಲೇ ಅರ್ಧಶತಕ

ಐಪಿಎಲ್‌ನಲ್ಲಿ ಸಂಚಲನ ಮೂಡಿಸಿದ್ದ ದೆಹಲಿ ಪ್ರೀಮಿಯರ್ ಲೀಗ್‌ನಲ್ಲಿ ಯುವ ಆಟಗಾರ ಪ್ರಿಯಾಂಶ್ ಆರ್ಯ, 56 ಎಸೆತಗಳಲ್ಲಿ ಅದ್ಭುತ 111 ರನ್‌ಗಳ ಶತಕ ಬಾರಿಸಿ ಮತ್ತೊಮ್ಮೆ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಾರೆ. ಐಪಿಎಲ್‌ನಲ್ಲಿ ಚೆನ್ನೈ ವಿರುದ್ಧ ಶತಕ ಬಾರಿಸಿದ್ದ ಪ್ರಿಯಾಂಶ್, ತಮ್ಮ ಅದ್ಭುತ ಬ್ಯಾಟಿಂಗ್‌ನಿಂದ ಈ ಲೀಗ್‌ನಲ್ಲಿಯೂ ಅಭಿಮಾನಿಗಳನ್ನು ರಂಜಿಸಿದ್ದಾರೆ.



ತನ್ನ ಹೊಡಿಬಡಿ ಆಟದ ಮೂಲಕ ಐಪಿಎಲ್‌ನಲ್ಲಿ ಸಂಚಲನ ಮೂಡಿಸಿದ್ದ ಯುವ ಆರಂಭಿಕ ಆಟಗಾರ ಪ್ರಿಯಾಂಶ್ ಆರ್ಯ, ಪಂಜಾಬ್ ಕಿಂಗ್ಸ್ ತಂಡವನ್ನು ಫೈನಲ್‌ಗೇರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 2025 ರ ಐಪಿಎಲ್‌ನಲ್ಲಿ ಐದು ಬಾರಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಸ್ಫೋಟಕ ಶತಕ ಬಾರಿಸಿ ಸದ್ದು ಮಾಡಿದ್ದ ಪ್ರಿಯಾಂಶ್ ಇದೀಗ ದೆಹಲಿಯಲ್ಲಿ ನಡೆಯುತ್ತಿರುವ ದೆಹಲಿ ಪ್ರೀಮಿಯರ್ ಲೀಗ್‌ನಲ್ಲಿಯೂ ಸಿಡಿಲಬ್ಬರದ ಶತಕ ಬಾರಿಸಿದ್ದಾರೆ. ಈ ಲೀಗ್‌ನಲ್ಲಿ ಔಟರ್ ದೆಹಲಿ ವಾರಿಯರ್ಸ್ ಪರ ಆಡುತ್ತಿರುವ ಪ್ರಿಯಾಂಶ್, ಈಸ್ಟ್ ದೆಹಲಿ ರೈಡರ್ಸ್ ತಂಡದ ವಿರುದ್ಧ ಶತಕದ ಇನ್ನಿಂಗ್ಸ್ ಆಡಿದರು. ಈಸ್ಟ್ ಡೆಲ್ಲಿ ರೈಡರ್ಸ್ ವಿರುದ್ಧದ ಪಂದ್ಯದಲ್ಲಿ ಪ್ರಿಯಾಂಶ್ ಕೇವಲ 56 ಎಸೆತಗಳಲ್ಲಿ 111 ರನ್ ಚಚ್ಚಿದರು. ಅವರು ತಮ್ಮ ಶತಕದ ಇನ್ನಿಂಗ್ಸ್‌ನಲ್ಲಿ ಏಳು ಬೌಂಡರಿ ಮತ್ತು ಒಂಬತ್ತು ಸಿಕ್ಸರ್‌ಗಳನ್ನು ಬಾರಿಸಿದರು. ಈ ಮೂಲಕ ಕೇವಲ 52 ಎಸೆತಗಳಲ್ಲಿ ಪ್ರಿಯಾಂಶ್ ತಮ್ಮ ಶತಕವನ್ನು ಪೂರೈಸಿದರು. ವಾಸ್ತವವಾಗಿ ಪ್ರಿಯಾಂಶ್ ಆರ್ಯ ಈ ಟೂರ್ನಮೆಂಟ್‌ನ ಮೊದಲ ಮೂರು ಪಂದ್ಯಗಳಲ್ಲಿ ದೊಡ್ಡ ರನ್ ಗಳಿಸಲು ವಿಫಲರಾಗಿದ್ದರು ಆದರೆ ನಿರ್ಣಾಯಕ ಸಮಯದಲ್ಲಿ ಫಾರ್ಮ್‌ಗೆ ಮರಳಿರುವ ಪ್ರಿಯಾಂಶ್ ಶತಕ ಬಾರಿಸಿದ್ದಾರೆ.

ಕೇವಲ 52 ಎಸೆತಗಳಲ್ಲಿ ಶತಕ

## ತಂಡದಿಂದ ಬಿಡುಗಡೆ ಮಾಡಿ

ರವಿಚಂದ್ರನ್ ಅಶ್ವಿನ್ ಅವರು ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ತೊರೆಯಲು ನಿರ್ಧರಿಸಿದ್ದಾರೆ ಎಂಬ ಸುದ್ದಿ ಹೊರಬಿದ್ದಿದೆ. ಕಳಪೆ ಪ್ರದರ್ಶನದ ನಂತರ, ಅಶ್ವಿನ್ ಐಪಿಎಲ್ 2026 ರ ಮಿನಿ ಹರಾಜಿನಲ್ಲಿ ಭಾಗವಹಿಸಲು ಬಯಸುತ್ತಾರೆ ಎಂದು ಹೇಳಲಾಗಿದೆ. ಅವರ ಅನುಭವ ಮತ್ತು ಕೌಶಲ್ಯದ ಹೊರತಾಗಿಯೂ, ಚೆನ್ನೈ ತಂಡದಲ್ಲಿ ಅವರಿಗೆ ಸೀಮಿತ ಅವಕಾಶಗಳು ಸಿಕ್ಕಿದವು. ಹರಾಜಿನಲ್ಲಿ ಅವರನ್ನು ಮತ್ತೊಂದು ತಂಡ ಆಯ್ಕೆ ಮಾಡಿಕೊಳ್ಳುವ ನಿರೀಕ್ಷೆಯಿದೆ. 2024 ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದ ಟೀಂ ಇಂಡಿಯಾದ ಅನುಭವಿ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಪ್ರಸ್ತುತ ಐಪಿಎಲ್‌ನಲ್ಲಿ ಮಾತ್ರ ಆಡುತ್ತಿದ್ದಾರೆ. ಕಳೆದ ಆವೃತ್ತಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಸೇರಿಕೊಂಡಿದ್ದ ಅಶ್ವಿನ್ ಹೇಳಿಕೊಳ್ಳುವಂತಹ ಪ್ರದರ್ಶನ ನೀಡಲಿಲ್ಲ. ಇದರಿಂದ ಅಶ್ವಿನ್‌ಗೂ ತಂಡದಲ್ಲಿ ಹೆಚ್ಚಿನ ಅವಕಾಶಗಳು ಸಿಕ್ಕಿರಲಿಲ್ಲ. ಇದೀಗ ಮುಂದಿನ ಆವೃತ್ತಿಗೂ ಮುನ್ನವೇ ಅಶ್ವಿನ್ ಮಹತ್ವದ ನಿರ್ಧಾರ ತೆಗೆದುಕೊಂಡಿದ್ದು, ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ತೊರೆಯಲು ನಿರ್ಧರಿಸಿದ್ದಾರೆ ಎಂದು ವರದಿಯಾಗಿದೆ. ಅಲ್ಲದೆ ಅಶ್ವಿನ್, ಈಗಾಗಲೇ ಚೆನ್ನೈ ಸೂಪರ್ ಕಿಂಗ್ಸ್ ಆಡಳಿತ ಮಂಡಳಿಯ ಬಳಿ ತನ್ನನ್ನು ತಂಡದಿಂದ ಬಿಡುಗಡೆ ಮಾಡುವಂತೆ ಕೇಳಿಕೊಂಡಿದ್ದಾರೆ ಎಂದು ವರದಿಯಾಗಿದೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966